
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ - 3 : ಸಂಚಿಕೆ - 3 ಡಿಸೆಂಬರ್ 2021 ಪುಟ - 36 ₹ 28/-



ಭಾರತದ ಸಂವಿಧಾನ

ಪೀಠಿಕೆ

ಭಾರತದ ಪ್ರಜೆಗಳಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು,
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.























ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

- ಇಂದಿರಾ ಕೃಷ್ಣಪ್ಪ

ಮಹಿಳಾ ಸಮಾನತೆಯ ರೂವಾರಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)




ಅಂಬೇಡ್ಕರ್ ಅವರನ್ನು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಭಾವಂತ ಕಾನೂನು ತಜ್ಞ, ಸಮಾಜ ವಿಜ್ಞಾನಿ, ಅವರೇ ಕರಡು ಸಂವಿಧಾನ ಸಮಿತಿ ಅಧ್ಯಕ್ಷರಾಗಬೇಕೆಂದು ಮಹಾತ್ಮ ಗಾಂಧೀಜಿ ಅವರ ಒತ್ತಾಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಡಾ. ಅಂಬೇಡ್ಕರ್ ರಚಿಸಿದ ಭಾರತ ಸಂವಿಧಾನದಲ್ಲಿ ಮೊತ್ತ ಮೊದಲಿಗೆ ಭಾರತದ ಎಲ್ಲಾ ಪ್ರಜೆಗಳಂತೆ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯಗಳನ್ನು ಮಹಿಳೆಯರಿಗೂ ಪ್ರಸ್ತಾವನೆಯಲ್ಲಿಯೇ ಅಂಗೀಕರಿಸಲಾಯಿತು. ಮಹಿಳೆಯರಿಗೆ ಯಾವುದೇ ಹೋರಾಟ ಬೇಡಿಕೆಗಳಿಲ್ಲದೆ ಮತ ಚಲಾವಣೆಯ ಹಕ್ಕು ದೊರಕಿತ್ತು. ಅದರೊಂದಿಗೆ ಸಂವಿಧಾನದ ವಿಧಿ 14, 15, 16ರನ್ವಯ ಸಮಾನತೆಯ ಹಕ್ಕು (ಶಿಕ್ಷಣ, ಉದ್ಯೋಗ ಅವಕಾಶ)

23ನೇ ವಿಧಿ : ಶೋಷಣೆಯ ವಿರುದ್ಧ ರಕ್ಷಣೆ.

39 (ಎ) ಡಿ, ಇ. ಮತ್ತು 42ನೇ ವಿಧಿ : ನಿರ್ದೇಶಕ ತತ್ವಗಳ ಮೂಲಕ ಮಹಿಳಾ ಪರ ಸೌಕರ್ಯ, ಸೌಲಭ್ಯ, ಉದ್ಯೋಗ, ಆರೋಗ್ಯ ಇತ್ಯಾದಿ.

325ನೇ ವಿಧಿ : ಪ್ರಾತಿನಿಧ್ಯ, ಮೀಸಲಾತಿ (ಗ್ರಾಮ, ತಾಲ್ಲೂಕು ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆ) ಇವುಗಳು ಭಾರತದಲ್ಲಿ ಮಹಿಳೆಯರು, ರಾಜಕೀಯ ಆರ್ಥಿಕ, ಸಾಮಾಜಿಕ ನ್ಯಾಯ ಪಡೆಯಲು ಸರ್ವಾಂಗೀಣ ವೇದಿಕೆ ನಿರ್ಮಿಸಿದೆ. ಆದರೆ, ಪಾರ್ಲಿಮೆಂಟ್‌ನಲ್ಲಿ ಮತ್ತು ವಿಧಾನ ಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯವೂ ಸ್ವಾತಂತ್ರ್ಯ ಬಂದು 75 ವರ್ಷಗಳು ಗತಿಸಿದರೂ, ಇಂದಿಗೂ ಅದು ಮರೀಚಿಕೆಯಾಗಿರುವುದರ ಬಗ್ಗೆ ಮಹಿಳೆಯರು ತೀವ್ರ ಗಮನ ಹರಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಮಹಿಳಾ ಸಮುದಾಯವನ್ನು ವರ್ಗ, ವರ್ಣ, ಜನಾಂಗ, ಜಾತಿ, ಕುಟುಂಬ, ವಿವಾಹ ಮುಂತಾದ ವ್ಯವಸ್ಥೆಗಳೊಂದಿಗೆ ಲಿಂಗತಾರತಮ್ಯವೂ ಸೇರಿ, ಮಹಿಳಾ ಶೋಷಣೆ ಮತ್ತು ಅಸಮಾನತೆ, ಮಹಿಳೆಯರನ್ನು ಅಧೀನತೆಗೆ ತಳ್ಳಿದ ನೂರಾರು ಪ್ರಶ್ನೆಗಳು ಮುನ್ನಲೆಗೆ ಬಂದಂತಾಗಿದೆ. ಶತಮಾನಗಳಿಂದ ಮಹಿಳಾ ಪ್ರತ್ಯೇಕೀಕರಣದ ವಿರುದ್ಧ ಹೋರಾಡಿದ ನೂರಾರು ಪರಿವರ್ತನಾಕಾರರ ಪಟ್ಟಿಯಲ್ಲಿ ಬಾಬಾ ಸಾಹೇಬರು ಅಗ್ರಗಣ್ಯರಾಗಿರುವರು. ಅಂಬೇಡ್ಕರ್ ಅವರು ಮಹಿಳಾ ಸಮುದಾಯವನ್ನು ಕುರಿತು ಅಮೂಲಾಗ್ರವಾಗಿ ಚಿಂತಿಸಿ, ಮಹಿಳಾ ಶೋಷಣಾ ನೆಲೆಗಳು, ಅವು ಬಿತ್ತಿರುವ ಹುಸಿ ತಾರ್ಕಿಕತೆಗಳನ್ನು ಭೇದಿಸಿ, ಸೈದ್ಧಾಂತಿಕವಾಗಿ, ಮಹಿಳಾ ಜಾಗೃತಿ, ಸುಧಾರಣೆ, ಪರಿವರ್ತನೆ ಮತ್ತು ಹಕ್ಕು ಅಧಿಕಾರ, ಅವಕಾಶಗಳನ್ನು ಸಂವಿಧಾನಾತ್ಮಕವಾಗಿ ದೊರಕುವಂತೆ ಮಾಡಿದ ಕೀರ್ತಿ ಬಾಬಾ ಸಾಹೇಬರಿಗೆ ಸಲ್ಲುತ್ತದೆ.











ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ

Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

- 'ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ : ಇಂದಿರಾ ಕೃಷ್ಣಪ್ಪ 2
- ಸಂಪಾದಕೀಯ 4
- ನೇತಾಲನ್ನು ತಲುಪಿದುದು: ಮೋ.ಕ. ಗಾಂಧಿ 5
- ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924
  ಸಂ : ಸಿದ್ದವನಹಳ್ಳಿ ಕೃಷ್ಣಶರ್ಮ 6
- ಬಾಬು ಜಗಜೀವನರಾಮ್ : ರುದ್ರಪ್ಪ ಹನಗವಾಡಿ 7
- ಗಾಂಧೀಜಿಯ ಕೊನೆಯ ಉಪವಾಸಗಳು
  ಲೂಯಿ ಫಿಶರ್ 'ಗಾಂಧಿ' ಪುಸ್ತಕದಿಂದ ಸಂ: ನಳಿನಾ ಡಿ. 8
- ಗಾಂಧೀಜಿ ಅವರ ದೃಷ್ಟಿಯಲ್ಲಿ ಸುಭಾಷ್‌ಚಂದ್ರ ಬೋಸ್
  ಎಚ್.ಎಸ್.ದೊರೆಸ್ವಾಮಿ 8
- ಲೋಕ ಮಾನ್ಯರು : ಇಂದಿರಾ ಕೃಷ್ಣಪ್ಪ 9
- ಅಕ್ಷರದವ್ವ : ಸಾವಿತ್ರಿ ಬಾಪುಲೆ : ಎಸ್.ಎಂ. ಶ್ಯಾಮಲ 10
- ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು :
  ಉಮಾಬಾಯಿ ಕುಂದಾಪುರ : ಡಾ. ಗಣನಾಥಶೆಟ್ಟಿ ಎಕ್ಕಾರು 11
- ನಿಜಲಿಂಗಪ್ಪನವರು ಮತ್ತು ಮಹಾತ್ಮ ಗಾಂಧಿ :
  ವೇಮಗಲ್ ಸೋಮಶೇಖರ್ 12
- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು
  ಇಂದಿರಾ ಕೃಷ್ಣಪ್ಪ 13
- ಕನ್ನಡ.. ಕನ್ನಡಿಗ... ಕರ್ನಾಟಕ.. : ಡಾ. ರಾಮಲಿಂಗೇಶ್ವರ 14
- ಹೆಮ್ಮೆಯ ಕನ್ನಡಿಗ : ಶಿವರಾಮ ಕಾರಂತ : ಮಹೇಶ್ 15
- ಕಸ್ತೂರ್‌ಬಾ ಗಾಂಧಿ : ಸರಳಾದೇವಿ 16
  ಸಂ. : ವಿ.ಎನ್. ತಿಪ್ಪನಗೌಡ
- **The Mahatma by the River - Sarvodaya Mela**
  Varsha Gowda 17
- ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ :
  ನಾಡೋಜ ಡಾ. ವೂಡೇ ಪಿ. ಕೃಷ್ಣ 18
- ನಾಡು ಕಟ್ಟಿದ ನಾಡಪ್ರಭು. : ಇಂದಿರಾ ಕೃಷ್ಣಪ್ಪ 19
- ಮಾದಕ ವಸ್ತುಗಳ ಮಾಯಾಜಾಲ
  ಡಾ. ಸಿ.ಆರ್. ಚಂದ್ರಶೇಖರ್ 20
- ಪ್ರಾಕೃತಿಕ ಆಹಾರದ ಮಹತ್ವ : ಡಾ. ವಸುಂಧರಾ ಭೂಪತಿ 20
- ಚಳಿಗಾಲದಲ್ಲಿ ಕಾಣುವ ದೇಹದ ಬಾಧೆಗಳು ಅದಕ್ಕೆ
  ನೈಸರ್ಗಿಕ ಪರಿಹಾರಗಳು : ಡಾ. ಸಂದೀಪ್ 21
- ಕೋರೆಗಾಂವ – ಅಸ್ಪೃಶ್ಯರ ವೀರಗಾಥೆ
  ಡಾ. ಸರಜೂ ಕಾಟ್ಕರ್ 22
- **FREEDOM MOVEMENT IN BENGALURU**
  Suresh Moona 23
- ವಿಶೇಷ ಸುದ್ದಿಗಳು 24
- ಸಾಮಾಜಿಕ ಮತ್ತು ಸಾಂಸ್ಕೃತಿಕ ಪುಟಗಳು 27
- **FEVER! - John Fuller** 29
- ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ 30
- ಗಾಂಧಿ ಭವನದ ಕಾರ್ಯಕ್ರಮಗಳು–ಛಾಯಾಚಿತ್ರಗಳು 31
- ಪುಸ್ತಕ ಪರಿಚಯ : ಡಾ. ಎಸ್. ರಾಮಲಿಂಗೇಶ್ವರ 32
- ಪತ್ರಿಕಾ ವರದಿಗಳು 33
- **ROOTS :Sold Into Slavery - Alex Harley** 34
- ಭಾರತ ಸಂವಿಧಾನ ದಿನ ಹಾಗೂ ವೈಶಿಷ್ಟತೆಗಳು
  ಡಾ. ರಾಮಲಿಂಗೇಶ್ವರ (ಸಿಸಿರಾ) 35

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು...

ಜಗತ್ತು 2021ನೇ ವರ್ಷದ ಅಂತಿಮ ಮಾಸದ, ಅಂತಿಮ ದಿನಗಳಲ್ಲಿ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಸಾಗುತ್ತಿದೆ. ಹಾಗೆಯೇ 2022ನೇ ವರ್ಷವನ್ನು ಹರ್ಷದಿಂದ ಆಹ್ವಾನಿಸುವ ಹುಮ್ಮಸ್ಸಿನಲ್ಲೂ ಇಲ್ಲವೆಂಬುದೂ ಸಹ ಸೂರ್ಯಪ್ರಕಾಶದಷ್ಟು ನಿಚ್ಚಳ. ಕರೋನಾ, ಡೆಲ್ಟಾ, ಓಮಿಕ್ರಾನ್‌ನ ಭೀಕರ ಪರಿಣಾಮಗಳಿಂದ ಜನರು ತತ್ತರಿಸಿದ್ದಾರೆ. ಓಮಿಕ್ರಾನ್ ಮಾನವ ಜೀವಕೋಶಗಳ ಮೇಲೆ ತ್ವರಿತವಾಗಿ ಹಬ್ಬುವ ಮತ್ತು ವಿನಾಶ ಮಾಡುವ ಶಕ್ತಿಯನ್ನು ಹೊಂದಿದೆ. ಲಸಿಕೆ, ಮಾಸ್ಕ್, ಸಾಮಾಜಿಕ ಅಂತರದಂಥಹ ಕೆಲವು ರೋಗನಿರೋಧಕ ಪ್ರಕ್ರಿಯೆಯಲ್ಲಿ ತೊಡಗಿ ಇನ್ನು ಮುಕ್ತರಾದೆವು ಎನ್ನುವಂಥ ಘಟ್ಟದಲ್ಲಿ ಓಮಿಕ್ರಾನ್ ಅಪ್ಪಳಿಸಿದೆ. ಇದರ ಕಡೆಗೆ ಈ ಮೊದಲಿನ ಕ್ರಮಗಳೊಂದಿಗೆ, ಹೊಸ ದಿವ್ಯೌಷಧವನ್ನೂ ಕಂಡುಹಿಡಿಯಬೇಕಿದೆ ಮತ್ತು ಶೀಘ್ರ ಬಳಕೆಗೆ ಬಿಡಬೇಕಿದೆ.

ಇಂಥಹ ಕ್ರೂರ ಓಮಿಕ್ರಾನ್ ನಡುವೆ ಪ್ರಕೃತಿ, ವಿಶ್ವದ ಮೇಲೆ ಪ್ರಚಂಡ ಕೋಪದಿಂದ ಬೃಹತ್ ನೀರ್ಗಲ್ಲು ಕರಗುವಿಕೆ, ವರ್ಷಧಾರೆ, ಜಲಧಾರೆ, ಭೂಕಂಪ, ಮಾನವ ಕಟ್ಟಿದ ಬೃಹತ್ ಕೋಟೆಗಳನ್ನು ಧ್ವಂಸಮಾಡುತ್ತಿದೆ. ಜ್ವಾಲಾಮುಖಿ ಉಗುಳುವ ಮೂಲಕ ಇಂಡೋನೇಷ್ಯಾದಲ್ಲಿನ ಜಾವಾ ಪ್ರಾಂತ್ಯದ ಸುಮೇರು ಪರ್ವತದಿಂದ ಈ ತಿಂಗಳ ಮೊದಲ ಭಾಗದಲ್ಲಿ ಆರಂಭವಾದ ಜ್ವಾಲಾಮುಖಿ – ಹೊಗೆ ರಹಿತ ಬೂದಿ, ಲಾವಾರಸ 12 ಕಿ.ಮೀ. ನಷ್ಟು ಎತ್ತರಕ್ಕೆ ಉಗುಳುತ್ತಿದೆ. 25ಕ್ಕೂ ಮಿಕ್ಕ ಜನ ಸಾವಿಗೀಡಾಗಿದ್ದಾರೆ. ಹಲವು ಗ್ರಾಮಗಳು ಬೂದಿಯಿಂದ ಮುಚ್ಚಿಹೋಗಿವೆ. ಸಾವಿರಾರು ಮಂದಿ ಭಯಭೀತಿಯಿಂದ ಪಲಾಯನ ಮಾಡಿದ್ದಾರೆ. ಇದರೊಂದಿಗೆ, ಫಿಲಿಫೈನ್ಸ್, ಇಂಡೋನೇಷಿಯಾ, ಮಲೇಷಿಯಾ ರಾಷ್ಟ್ರಗಳು, ಸಮುದ್ರದ ಗಾಳಿಯಿಂದ ಸುನಾಮಿಯಿಂದ ಜಲಪ್ರಳಯಕ್ಕೆ ತುತ್ತಾಗಿವೆ. ಆಯಾಯ ದೇಶಗಳು ಮತ್ತು ವಿಶ್ವಸಂಸ್ಥೆ ಈ ದುರಂತಗಳನ್ನು ತಡೆಯಲು ತುರ್ತು ಹಾಗು ಆಧುನಿಕ ತಂತ್ರಜ್ಞಾನಗಳನ್ನು ಬಳಸಬೇಕಾಗಿದೆ. ಜನರ ಜೀವ ಮತ್ತು ಜೀವನವನ್ನು ಸಂರಕ್ಷಿಸಬೇಕಿದೆ.

ಇದರೊಂದಿಗೆ ಬಹಳಷ್ಟು ರಾಷ್ಟ್ರಗಳಲ್ಲಿನ ಆಳುವ ಸರ್ಕಾರಗಳ ಸರ್ವಾಧಿಕಾರಿ ಧೋರಣೆ, ಜನಹಿತಕ್ಕೆ ಮಾರಕ ಕಾನೂನುಗಳಿಂದ ವಿಶ್ವದಾದ್ಯಂತ 'ವಲಸೆ' – ಎಂಬ ಹೊಸ ಬೃಹತ್ ಸಮಸ್ಯೆ ತಲೆ ಎತ್ತಿ ನಿಂತಿದೆ. ವಿಶ್ವಸಂಸ್ಥೆಯ ವರದಿಯಂತೆ 85% ವಲಸಿಗರು ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಮತ್ತು 73% ವಲಸಿಗರು ಸಿರಿಯಾ, ವೆನೆಝುಲಾ, ಸುಡಾನ್, ಮಯನ್ಮಾರ್, ಅಫ್‌ಘಾನಿಸ್ತಾನ್ ಮುಂತಾದ ದೇಶಗಳಿಂದ ಆಗಮಿಸುತ್ತಿದ್ದಾರೆ. ಟರ್ಕಿ ಕೊಲಂಬಿಯಾ, ಉಗಾಂಡಾ, ಪಾಕಿಸ್ತಾನ, ಜರ್ಮನಿ ದೇಶಗಳು ವಲಸಿಗರನ್ನು ಅವರ ದೇಶಗಳಿಗೆ ಆಹ್ವಾನಿಸಿದ್ದಾರೆ.

ಇವುಗಳ ನಡುವೆ ನಮ್ಮ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಮಾಡುವ ವಿಚಾರ ಬಹುಚರ್ಚೆಗೆ ಒಳಗಾಗಿವೆ. ಭಾರತದ ಸಂವಿಧಾನದ ಪ್ರಧಾನ ಆಶಯವಾದ ಸ್ವಾತಂತ್ರ್ಯ, ಸಮಾನತೆ, ಭಾತೃತ್ವ ಮತ್ತು ಜಾತ್ಯಾತೀತತೆಯ ಮೂಲ ಉದ್ದೇಶಕ್ಕೆ ಮಾರಕವಾಗುವ ನಡೆ ಇದಾಗಿದೆ. ಭಾರತ 'ಸರ್ವ ಜನಾಂಗದ ಶಾಂತಿಯ ತೋಟ', ರಜನಿ ಕೊಠಾರಿ ಅವರ ಮಾತುಗಳಲ್ಲಿ. "ಭಾರತವು ಮೂಲತಃ ಸಹಿಷ್ಣತೆಯ ತತ್ವದ ಮೇಲೆ ನಿರ್ಮಾಣವಾದ ನಾಗರಿಕ ದೇಶ". ಸಂವಿಧಾನವು ಧಾರ್ಮಿಕ ಸಾಮರಸ್ಯ ಮತ್ತು ಪ್ರಾದೇಶಿಕ ಅಸ್ಮಿತೆಗೆ ಪೂರಕವಾಗಿವೆ. ಮತಾಂತರಕ್ಕೆ ಕಾರಣವಾಗುವ ಮೂಲ ಸಮಸ್ಯೆಗಳಾದ ಅಸ್ಪೃಶ್ಯತೆ, ದೌರ್ಜನ್ಯ, ಶೋಷಣೆ, ಸಾಮಾಜಿಕ ಅಸಮಾನತೆ, ಧರ್ಮಗಳ ನಡುವೆ ಕಿಚ್ಚು ಹಚ್ಚುವ ಪ್ರವೃತ್ತಿ, ರಾಜಕೀಯದಾಟಗಳನ್ನು ನಿವಾರಿಸುವ ಕ್ರಮವನ್ನು ತೀವ್ರವಾಗಿ ಅನುಷ್ಠಾನಗೊಳಿಸಬೇಕಾಗಿದೆ. ಅದನ್ನು ಮರೆತು, ಪ್ರಜೆಗಳಿಗೆ ಸಂವಿಧಾನಬದ್ಧವಾಗಿ ದೊರಕಿರುವ ಧಾರ್ಮಿಕ ಹಕ್ಕನ್ನು ಕಿತ್ತುಕೊಳ್ಳುವ ಕಾನೂನಿನ ಅಗತ್ಯವಿಲ್ಲ.

ಇದಕ್ಕೆ ತಳುಕು ಹಾಕಿಕೊಂಡಿರುವಂತೆ ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಕೊಡುವ ವಿಚಾರವೂ ಸಾರ್ವಜನಿಕ ಚರ್ಚೆಗೆ ಒಳಪಟ್ಟಿದೆ. ಗುಜರಾತ್ ಹೈಕೋರ್ಟ್ ನೀಡಿದ ತೀರ್ಮಾನ, "ನಾವೇನು ತಿನ್ನಬೇಕು ಎಂಬುದನ್ನು ನೀವು ಹೇಗೆ ನಿರ್ಧರಿಸುತ್ತೀರಿ". ಎಂಬುದೇ ಸಸ್ಯಹಾರಿ ಮತ್ತು ಮಾಂಸಹಾರಿಗಳ ನಡುವಿನ ಆಹಾರ ಪದ್ಧತಿ ವಿಚಾರಕ್ಕೆ ಉತ್ತರವಾಗಿದೆ. ಹಾಗಾಗಿ ವ್ಯಕ್ತಿಗಳ ದೈಹಿಕ ಆರೋಗ್ಯ, ಅವರ ಜೀವನಕ್ರಮ, ಅವರ ಆರ್ಥಿಕತೆಯ ಜ್ಞಾನ, ಆಳುವ ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಬಂದಲ್ಲಿ, ಸಸ್ಯಾಹಾರದ ಹೆಸರಿನಲ್ಲಿ ನಡೆಯುತ್ತಿರುವ ಧಾರ್ಮಿಕ ಅಸಹಿಷ್ಣುತೆಗೆ ಕೊನೆಬೀಳುತ್ತದೆ. ಈ ಸಂದರ್ಭದಲ್ಲಿ ಮಹಾತ್ಮಜೀ ಅವರ ಧಾರ್ಮಿಕ ಸಹಿಷ್ಣುತಾ ನೀತಿಗಳು, ಕೋಮು ಸಾಮರಸ್ಯದ ನಡೆಗಳು, ಅವರು ಆಶಿಸಿದ ಭಾರತದ ಪರಿಕಲ್ಪನೆಗಳನ್ನು ಮುನ್ನೆಲೆಗೆ ತರಬೇಕಿದೆ. ಗಾಂಧೀಜಿ ಅವರ ಕನಸಿನ ಭಾರತ ಹೇಗಿರಬೇಕೆಂಬ ಕಲ್ಪನೆ "ಮೇಲು–ಕೀಳುಗಳಿಲ್ಲದ, ತರತಮವಿಲ್ಲದ ಮಹಿಳೆ–ಪುರುಷರೆಂಬ ಬೇಧಭಾವವಿಲ್ಲದ, ಅಸ್ಪೃಶ್ಯತೆ ಇಲ್ಲದ, ಮಾದಕ–ಮದ್ಯ ವ್ಯಸನವಿಲ್ಲದ ಕೋಮು ಸಾಮರಸ್ಯವಿರುವ, ವಿಶ್ವದೊಂದಿಗೆ ಸೌಹರ್ದತೆ ಇರುವ ಭಾರತ ನಿರ್ಮಾಣವಾಗಬೇಕಿದೆ'– ಎಂಬುದಾಗಿದೆ. ಆ ಮಾರ್ಗದಲ್ಲಿ ನಾವೆಲ್ಲರೂ ಸಾಗುತ್ತಾ, ಅಂಥಹ ಭಾರತ ನಿರ್ಮಾಣಕ್ಕೆ ಕೈ ಜೋಡಿಸೋಣ.

ವಂದನೆಗಳು...

ನೇಟಾಲನ್ನು ತಲುಪಿದುದು : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇಂಗ್ಲಿಷ್ ಹ್ಯಾಟನ್ನು ಕುರಿತು ಷೇಖ್ ಅಬ್ದುಲ್ಲಾರವರು ತಿರಸ್ಕಾರವಾಗಿ ಮಾತನಾಡಿದುದು ಈ ಪರಿಚಾರಕರುಗಳ ವರ್ಗವನ್ನು ಮನಸ್ಸಿನಲ್ಲಿಟ್ಟುಕೊಂಡು ಹೋಟಲುಗಳಲ್ಲಿ ಪರಿಚಾರಕರಾಗಿ ಸೇವೆ ಮಾಡುವುದು ಮಾನಕ್ಕೆ ಕಡಿಮೆ ಎಂದು ಎಣಿಕೆಯಿದ್ದಿತು. ಇಂದಿಗೂ ಅನೇಕರಲ್ಲಿ ಇದೇ ಬಗೆಯ ನಂಬಿಕೆ ಇದೆ. ಒಟ್ಟಿನಲ್ಲಿ ನಾನು ಅಬ್ದುಲ್ಲಾ ಸೇಠರ ಸಲಹೆಯನ್ನು ಒಪ್ಪಿದೆನು. ವಿಷಯವನ್ನು ನಾನು ಪತ್ರಿಕೆಗಳಿಗೆಲ್ಲ ಬರೆದು, ನ್ಯಾಯಸ್ಥಾನದಲ್ಲಿ ನಾನು ರುಮಾಲನ್ನು ಧರಿಸುವುದೇ ನ್ಯಾಯ ಎಂದು ಪ್ರತಿಪಾದಿಸಿದನು. ಪತ್ರಿಕೆಗಳಲ್ಲಿ ಈ ವಿಷಯ ಬಹಳ ಚರ್ಚೆಯಾಯಿತು. ಪತ್ರಿಕೆಗಳು ನನ್ನನ್ನು ಬೇಡದ ಅತಿಥಿ ಎಂದು ವರ್ಣಿಸಿದವು. ಹೀಗೆ ಈ ಸಂಗತಿಯಿಂದ ನಾನು ಆಫ್ರಿಕಾಕ್ಕೆ ಬಂದ ಕೆಲವೇ ದಿನಗಳಲ್ಲಿ ನನಗೆ ಅನಿರೀಕ್ಷಿತವಾದ ಪ್ರಚಾರವುಂಟಾಯಿತು. ಕೆಲವರು ನಾನು ಮಾಡಿದುದು ಸರಿ ಎಂದರು. ಇತರರು ನನ್ನ ಧಾರ್ಷ್ಟ್ಯವನ್ನು ಬಲವಾಗಿ ಟೀಕಿಸಿದರು. ನನ್ನ ರುಮಾಲು, ನಾನು ದಕ್ಷಿಣ ಆಫ್ರಿಕಾದಲ್ಲಿರುವವರೆಗೆ ಸ್ವಲ್ಪ ಹೆಚ್ಚು ಕಡಿಮೆ ನನ್ನ ಜತೆಯಲ್ಲಿಯೇ ಇದ್ದಿತು. ನಾನು ದಕ್ಷಿಣ ಆಫ್ರಿಕಾದಲ್ಲಿ ಯಾವಾಗ ಮತ್ತು ಏಕೆ ಯಾವ ತಲೆಯುಡಿಗೆಯನ್ನು ಬಿಟ್ಟುಬಿಟ್ಟೆನೆಂಬುದು ಮುಂದೆ ಗೊತ್ತಾಗುವುದು.

ಪ್ರಿಟೋರಿಯಾಕ್ಕೆ ಹೋಗುವಾಗ

ಡರ್ಬಾನಿನಲ್ಲಿ ವಾಸಿಸುತ್ತಿದ್ದ ಭಾರತೀಯ ಕ್ರೈಸ್ತರೊಂದಿಗೆ, ನನಗೆ ಬಹುಬೇಗ ಸಂಪರ್ಕವುಂಟಾಯಿತು. ನ್ಯಾಯಾಲಯದ ದುಭಾಷಿ, ಪಾಲ್ ಅವರು ರೋಮನ ಕ್ಯಾಥೊಲಿಕರಾಗಿದ್ದರು. ನನಗೆ ಅವರ ಪರಿಚಯವಾಯಿತು. ಹಾಗೆಯೇ ನನಗೆ ಆಗ ಪ್ರಾಟಸ್ಟಂಟ್ ಮಿಷನ್ನಿನಲ್ಲಿ ಉಪಾಧ್ಯಾಯರಾಗಿದ್ದ ಸುಬಾನ್ ಗಾಡ್‌ಫ್ರೇಯವರ ಪರಿಚಯವೂ ಆಯಿತು. ಅವರು 1924ರಲ್ಲಿ ಭಾರತಕ್ಕೆ ಆಗಮಿಸಿದ ದಕ್ಷಿಣ ಆಫ್ರಿಕಾದ ನಿಯೋಗದ ಸದಸ್ಯರಾದ ಮಿ. ಜೇಮ್ಸ್ ಗಾಡ್ ಫ್ರೇಯವರ ತಂದೆಯವರು. ನಾನು ಸ್ವಲ್ಪ ಹೆಚ್ಚು ಕಡಿಮೆ ಅದೇ ಕಾಲದಲ್ಲಿಯೇ ದಿವಂಗತ ಪಾಟ್ಕ ರುಸ್ತುಂಜೀ ಮತ್ತು ದಿವಂಗತ ಆಡಂಜೀ ಮಿಯಾಖಾನ್ ಇವರನ್ನೂ ಸಂಧಿಸಿದೆ. ಅಲ್ಲಿಯವರೆಗೆ ವ್ಯಾಪಾರೋದ್ಯಮಕ್ಕಾಗಿ ಮಾತ್ರವೇ ಆಗಾಗ್ಗೆ ಸೇರುತ್ತಿದ್ದ ಈ ಎಲ್ಲ ಮಿತ್ರರೂ ಒಬ್ಬರೊಂದಿಗೆ ಒಬ್ಬರು ನಿಕಟ ಬಾಂಧವ್ಯವನ್ನು ಹೊಂದಿದರು. ಈ ವಿಷಯ ಮುಂದೆ ನೋಡೋಣ.

ನಾನು ಹೀಗೆ ನನ್ನ ಪರಿಚಯವನ್ನು ವಿಸ್ತಾರಗೊಳಿಸುವುದರಲ್ಲಿ ನಿರತನಾಗಿದ್ದಾಗ, ದಾದಾ ಅಬ್ದುಲ್ಲಾ ಸೇಠರಿಗೆ ಅವರ ವಕೀಲರಿಂದ ಕಾಗದ ಬ0ದಿತು: ಮೊಕದ್ದಮೆ ನಡೆಸಲು ಸಿದ್ಧರಾಗಬೇಕಾಗಿದೆ. ನೀವೇ ಪ್ರಿಟೋರಿಯಾಕ್ಕೆ ಬನ್ನಿ, ಇಲ್ಲದಿದ್ದರೆ ನಿಮ್ಮ ಪ್ರತಿನಿಧಿ ಒಬ್ಬರನ್ನು ಕಳುಹಿಸಿ", ಎಂದು. ಅಬ್ದುಲ್ಲಾ ಸೇಠರು ಓದಿ ಎಂದು ಕಾಗದವನ್ನು ನನಗೆ ಕೊಟ್ಟರು. "ಪ್ರಿಟೋರಿಯಾಕ್ಕೆ ನೀವು ಹೋಗುತ್ತೀರಾ", ಎಂದು ಕೇಳಿದರು. ನಾನು ನಿಮ್ಮಿಂದ ಮೊಕದ್ದಮೆಯ ವಿವರಗಳನ್ನು ತಿಳಿದುಕೊಂಡು ನಂತರ ಹೇಳುತ್ತೇನೆ. ಅಲ್ಲಿ ನಾನು ಹೋಗಿ ಮಾಡಬೇಕಾದುದು ಏನು ಎಂಬುದು ನನಗೆ ಸ್ವಲ್ಪವೂ ತಿಳಿಯದು", ಎಂದು ಹೇಳಿದೆ. ಅವರು ಮೊಕದ್ದಮೆಯ ವಿಷಯವನ್ನು ಆಗ ತಿಳಿಸುವಂತೆ ಗುಮಾಸ್ತರಿಗೆ ಹೇಳಿದರು.

ಮೊಕದ್ದಮೆಯ ಅಧ್ಯಯನವನ್ನು ನಾನು ಪ್ರಾರಂಭಿಸಿದೆ. ಓದುತ್ತಾ ಓದುತ್ತಾ ಅದನ್ನು ಪ್ರಾರಂಭದಿಂದಲೇ ಮೊದಲು ಮಾಡಬೇಕೆಂದು ನನಗೆ ತೋರಿತು. ನಾನು ಜಾನ್‌ಜಿಬಾರ್‌ನಲ್ಲಿದ್ದ ಕೆಲವು ದಿವಸಗಳು ಅಲ್ಲಿಯ ನ್ಯಾಯಸ್ಥಾನಕ್ಕೆ ಕಾರ್ಯವನ್ನು ನೋಡಲು ಹೋಗಿದ್ದೆ. ಒಬ್ಬ ಪಾರಸೀ ವಕೀಲರು ಸಾಕ್ಷಿಯನ್ನು ವಿಚಾರಣೆ ಮಾಡುತ್ತಿದ್ದರು. ಲೆಕ್ಕದ ಪುಸ್ತಕದಲ್ಲಿದ್ದ ಜಮಾ ಖರ್ಚು ಅಂಕಿ ಅಂಶಗಳನ್ನು ಕುರಿತು ಪ್ರಶ್ನೆ ಹಾಕುತ್ತಿದ್ದರು. ಅವೊಂದೂ ನನಗೆ ಅರ್ಥವಾಗಲಿಲ್ಲ. ಲೆಕ್ಕಗಳನ್ನು ಜಮಾ ಖರ್ಚು ಬರೆಯುವುದನ್ನು ನಾನು ಪಾಠಶಾಲೆಗೆ ಹೋದಾಗಲೂ ಕಲಿಯಲಿಲ್ಲ. ಇಂಗ್ಲೆಂಡಿನಲ್ಲಿದ್ದಾಗಲೂ ಕಲಿಯಲಿಲ್ಲ. ನಾನು ದಕ್ಷಿಣ ಆಫ್ರಿಕಾಕ್ಕೆ ಬಂದಿದ್ದುದು ಮುಖ್ಯವಾಗಿ ಲೆಕ್ಕ, ಅಂಕಿ, ಜಮಾ ಖರ್ಚಿಗೆ ಸಂಬಂಧಪಟ್ಟ ಮೊಕದ್ದಮೆಯಲ್ಲಿ ವ್ಯವಹರಿಸುವುದಕ್ಕಾಗಿ ಲೆಕ್ಕ ಮತ್ತು ಜಮಾ ಖರ್ಚು ತಿಳಿದವರು ಮಾತ್ರ ಅದನ್ನು ಅರ್ಥಮಾಡಿಕೊಳ್ಳಲು ಮತ್ತು ವಿವರಿಸಲು ಶಕ್ತರಾಗಿದ್ದರು. ಗುಮಾಸ್ತರು 'ಇದು ಜಮಾ, ಇದು ಖರ್ಚು" ಎಂದು ವಿವರಿಸುತ್ತಾ ಹೋದಂತೆಲ್ಲ ನನಗೆ ಹೆಚ್ಚು ಹೆಚ್ಚು ದಿಗ್ರಮೆಯುಂಟಾಯಿತು. ಪಿ. ನೋಟ್ ಎಂದರೆ ಏನೆಂಬುದು ನನಗೆ ಅರ್ಥವೇ ಆಗಲಿಲ್ಲ. ಶಬ್ದಕೋಶದಲ್ಲಿ ಸಹ ಆ ಪದ ನನಗೆ ಸಿಕ್ಕಲಿಲ್ಲ. ನಾನು ಗುಮಾಸ್ತನಿಗೆ ನನಗೆ ಈ ವಿಷಯ ಒಂದೂ ತಿಳಿಯದು ಎಂದು ಹೇಳಿದೆ. ಆತ ಪಿ. ನೋಟ್‌ಅಂದರೆ ಪ್ರಾಮಿಸರಿ ನೋಟು ಎಂದು ವಿವರಿಸಿದ. ಲೆಕ್ಕಪತ್ರ ಗಳನ್ನಿಡುವ ಕ್ರಮಕ್ಕೆ ಸಂಬಂಧಪಟ್ಟ ಒಂದು ಪುಸ್ತಕವನ್ನು ಕೊಂಡು ಓದಿದ. ಆದರಿಂದ ನನಗೆ ಸ್ವಲ್ಪ ಧೈರ್ಯವುಂಟಾಯಿತು. ಮೊಕದ್ದಮೆ ನನಗೆ ಅರ್ಥವಾಯಿತು. ಅಬ್ದುಲ್ಲಾ ಸೇಠರಿಗೂ ಜಮಾ ಖರ್ಚು ಬರೆಯುವುದು ತಿಳಿದಿರಲಿಲ್ಲ. ಆದರೆ ಅವರ ವ್ಯವಹಾರ ಜ್ಞಾನ ಪೂರ್ಣವಾಗಿತ್ತು. ಜಮಾ ಖರ್ಚು ಲೆಕ್ಕದಲ್ಲಿ ಉಂಟಾಗಬಹುದಾದ ತೊಡಕುಗಳನ್ನು ಅವರು ತತ್‌ಕ್ಷಣ ಬಿಡಿಸಿಬಿಡುತ್ತಿದ್ದರು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪಾಟ್ನಾದಲ್ಲಿ ನಡೆದ ಕಾರ್ಯನಿರ್ವಾಹಕ ಮಂಡಲಿಯ ಸಭೆಯಲ್ಲಿ ಆದ ತೀರ್ಮಾನವನ್ನು ಪುಷ್ಟೀಕರಿಸುವುದೇ ಮುಖ್ಯ ಠರಾವು. ಇದರ ಬಗ್ಗೆ ವಿಷಯ ನಿಯಾಮಕ ಸಮಿತಿಯಲ್ಲಿ ಸಾಕಷ್ಟು ಚರ್ಚೆ, ವಾದ ವಿವಾದ ನಡೆದಿದ್ದವು. ಈ ಮುಖ್ಯ ಠರಾವನ್ನು ಮೊದಲನೆಯ ದಿವಸವೇ ಮಂಡಿಸಲಾಯತು. ಅದು ಅಂಗೀಕೃತ ಆಯಿತು. ಮೊದಲನೆಯ ದಿವಸವೇ ಈ ಠರಾವನ್ನು ಅಂಗೀಕರಿಸುವುದರಲ್ಲಿ ಗಾಂಧೀಜಿಯ ಉದ್ದೇಶ, ಕಾಂಗ್ರೆಸ್ಸಿನ ಅಧಿವೇಶನವನ್ನು ಆದಷ್ಟು ಬೇಗ ಮುಗಿಸಬೇಕು ಎಂದು. ಹೊತ್ತಿಗೆ ಸರಿಯಾಗಿ ಎಲ್ಲ ಕೆಲಸಗಳನ್ನೂ ಮುಗಿಸುವುದರಲ್ಲೇ ಅವರಿಗೆ ಲಕ್ಷ್ಯ ಹೆಚ್ಚು. ಹೀಗಾಗಿ ಮರುದಿನವೇ ಅಧಿವೇಶನ ಮುಗಿಯಬಹುದೆಂದು ನಮಗನಿಸಿತು. ಎರಡೇ ದಿನಗಳಲ್ಲಿ ಕೆಲಸ ಮುಗಿದರೆ ಮೂರನೇ ದಿನ ಟಿಕೆಟ್ ಮಾರಾಟ ಆಗುವುದಿಲ್ಲ. ಅದರಿಂದ ಬರುವ ಉತ್ಪನ್ನದಲ್ಲಿ ಕೊರತೆ ಆಗಬಹುದು ಎನಿಸಿತು, ಸ್ವಾಗತ ಸಮಿತಿಯ ಕೆಲವು ಸದಸ್ಯರಿಗೆ. ಕೇವಲ ಹಣಕ್ಕಾಗಿ ಅಧಿವೇಶವನ್ನು ಮುಂದುವರಿಸುವುದು ಗಾಂಧೀಜಿಗೆ ಸಮ್ಮತ ಇರಲಿಲ್ಲ. ಗಾಂಧೀಜಿ ಇಚ್ಛೆಯಂತೆ ಅತ್ಯಂತ ಕ್ರಮಬದ್ಧವಾಗಿ ಕೆಲಸ ನಡೆದು, ಎರಡೇ ದಿನಗಳಲ್ಲಿ ಅಧಿವೇಶನ ಮುಕ್ತಾಯ ಆಯಿತು. ಅವರಿಗೆ ವೇಳೆಯ ಬೆಲೆ ಚೆನ್ನಾಗಿ ಗೊತ್ತಿತ್ತು." ಹೀಗೆ ದೇಶಪಾಂಡೆ ಗಂಗಾಧರರಾಯರು ಬರೆಯುತ್ತಾರೆ.

ಕಾಂಗ್ರೆಸ್ ಅಧಿವೇಶನ ಮುಗಿದ ಮೇಲೆ ಗಾಂಧೀಜಿ ಹೆಚ್ಚಾಗಿಯೇ ಒಂದು ದಿನ ವಿಜಯನಗರದಲ್ಲಿ (ಬೆಳಗಾಂವಿಯಲ್ಲಿ) ಇದ್ದರು. ಬೇರೆ ಬೇರೆ ಪ್ರಾಂತಗಳ ಕಾರ್ಯಕರ್ತರೊಂದಿಗೆ ವಿಚಾರ ವಿನಿಮಯ ನಡೆಸಲು ಶಿಬಿರದಲ್ಲಿ ಇದ್ದರು. ಅಧಿವೇಶನಕ್ಕೆ 15 ದಿನ ಮೊದಲು ಅಧಿವೇಶನ ಕೆಲಸಕ್ಕಾಗಿಯೇ ಹೊರತು ಆಡಂಬರಕ್ಕೆ ಅಲ್ಲ. ಆಡಂಬರಕ್ಕೆ ಅಥವಾ ಶೃಂಗಾರ ಪ್ರದರ್ಶನಕ್ಕೆ ಬೇರೆ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಅಧಿವೇಶನದ ಕಾಲ ವ್ಯರ್ಥ ಆಗಬಾರದು. ನನ್ನ ಮೆರವಣಿಗೆ ಮಾಡಬಾರದು ಎಂದು ನಿಷ್ಠುರವಾಗಿ ಗಾಂಧೀಜಿ ಸ್ವಾಗತ ಸಮಿತಿಗೆ ತಿಳಿಸಿದ್ದರು. ಬೆಳಗಾಂವಿಗೆ ನಾಲ್ಕೈದು ದಿನ ಮೊದಲೇ ತಾವು ಬರುತ್ತಿರುವುದರಿಂದ ಆಗಿನಿಂದಲೇ ಜನರು ಗುಂಪು ಸೇರಿ ಗದ್ದಲ ಆಗುವ ಸಂಭವ ಇದೆ, ಹಾಗೆ ಜನರು ನೆರೆಯಬಾರದು ಎಂದು ಸಾರ್ವಜನಿಕವಾಗಿ 'ಯಂಗ್ ಇಂಡಿಯಾ'ದಲ್ಲಿ ಮೊದಲೇ ಸೂಚನೆ ಕೊಟ್ಟಿದ್ದರು. ಸ್ವತಃ ಗಾಂಧೀಜಿಯೇ ಅಧ್ಯಕ್ಷರಾಗಿದ್ದುದರಿಂದ ಕಾಂಗ್ರೆಸ್ಸಿನಲ್ಲಿ ಬಹುಮತ ಅಪರಿವರ್ತನ ವಾದಿಗಳಿಗೇ ಸಿಗುತ್ತಿತ್ತು. ಅದರಲ್ಲಿ ಎಳ್ಳಷ್ಟೂ ಸಂಶಯ ಇರಲಿಲ್ಲ. ಆದರೆ ಗಾಂಧೀಜಿ ಸತ್ಯಾಗ್ರಹಿಗಳು. ಪರಿವರ್ತನವಾದಿಗಳ ಮುಖಂಡರಾದ ಶ್ರೀ ಚಿತ್ತರಂಜನದಾಸ್ ಮತ್ತು ಪಂಡಿತ ಮೋತಿಲಾಲ್ ನೆಹರು ಇವರ ಸಂಗಡ ಒಪ್ಪಂದ ಮಾಡಿಕೊಂಡಿದ್ದರು. ಅದರಿಂದ ಬಹಳ ತೊಡಕಾಗಿದ್ದ ಈ ಪ್ರಶ್ನೆ ಬಗೆಹರಿದಿತ್ತು. ಈ ಒಪ್ಪಂದ ಅಧ್ಯಕ್ಷರು ಸ್ವಂತ ಜವಾಬ್ದಾರಿಯ ಮೇಲೆ ಮಾಡಿಕೊಂಡಿದ್ದು. ಅದಕ್ಕೆ ಕಾಂಗ್ರೆಸ್ ಅಧಿವೇಶನದಲ್ಲಿ ಅ. ಭಾ. ಕಾಂಗ್ರೆಸ್ ಸಮಿತಿಯ ಹಾಗೂ ಕಾಂಗ್ರೆಸ್ಸಿನ ಒಪ್ಪಿಗೆ ಬೇಕಾಗಿತ್ತು. ಬೆಳಗಾಂವ ಕಾಂಗ್ರೆಸ್ಸಿನಲ್ಲಿ ಅದು ಸಿಕ್ಕಿತು. ಮುಖ್ಯ ತತ್ವವನ್ನು ಬಿಟ್ಟುಕೊಡದಿದ್ದರೂ ವಿವರಗಳಲ್ಲಿ ಜಗಳಾಡುವ ಸ್ವಭಾವ ಅವರದಲ್ಲ. ಅದರಿಂದ ಕೆಲಸ ಕೇಡು. ವಿರುದ್ಧ ಇದ್ದರೂ ಕೂಡ ಅವರೂ ಪ್ರಾಮಾಣಿಕರೇಕೆ ಆಗಿರಬಾರದು ಎಂಬ ನಿಲುವು ಅವರದು. ಮಾಡಿಕೊಂಡ ಒಪ್ಪಂದವನ್ನು ಸ್ವಯಂ ಅಕ್ಷರಶಃ ಅವರ ಪಾಲಿಸಿದರು. ಇತರರೂ ಹಾಗೇ ನಡೆಯಬೇಕೆಂದು ಅವರು ಹೇಳುತ್ತಿದ್ದರು ಎಂದು ಸ್ವಾಗತಾಧ್ಯಕ್ಷರು ತಿಳಿಸಿದ್ದಾರೆ.

ಬೆಳಗಾಂವಿ ಕಾಂಗ್ರೆಸ್ಸಿನಲ್ಲಿ ಅಧ್ಯಕ್ಷರ ಪ್ರಾರಂಭ ಭಾಷಣ : 26-12-1924

ಮಹಾತ್ಮ ಗಾಂಧೀ ಅಧಿವೇಶನಕ್ಕೆ ಅಧ್ಯಕ್ಷರು. ಅಧ್ಯಕ್ಷರು ವೇದಿಕೆಯಿಂದ ಕೆಳಗೆ ಇಳಿದು ಭಾಷಣ ಮಾಡುವ ಸ್ಥಳಕ್ಕೆ ಬಂದರು. ಎತ್ತರವಾದ ಒಂದು ಸ್ಟೂಲಿನ ಮೇಲೆ ಕುಳಿತು, ಎದುರಿಗೆ ಗಡಿಯಾರ ಇಟ್ಟುಕೊಂಡರು. ಸ್ವಾಗತಾಧ್ಯಕ್ಷರು ಒಂದು ಗಂಧದ ಮರದ ಪೆಟ್ಟಿಗೆಯಲ್ಲಿ 'ಕರ್ನಾಟಕ- ಒಂದು ಕೈಪಿಡಿ' (Karnakata - A Hand Book) ಎಂಬುದನ್ನು ಇಟ್ಟು ಗಾಂಧೀಜಿಗೆ ಅರ್ಪಿಸಿದರು. ಚಪ್ಪಾಳೆಗಳ ನಡುವೆ ಅದನ್ನು ಅಧ್ಯಕ್ಷರು ಸ್ವೀಕರಿಸಿದರು. ಆಮೇಲೆ 10 ನಿಮಿಷ ಹಿಂದಿಯಲ್ಲಿ ಮಾತನಾಡಿದರು. ಗಂಗಾಧರರಾಯ- ರೇ, ಸೋದರ ಸೋದರಿಯರೇ, ನನಗೆ ನೀವು ಮಾಡಿರುವ ಗೌರವವನ್ನು ಕೆಡಿಸುವಂತೆ ದೊಡ್ಡ ಭಾಷಣ ನಾನು ಮಾಡುವುದಿಲ್ಲ. ನಾನು ಹೇಳಬೇಕಾದದ್ದು ತಮಗೆ ಆಗಲೇ ಗೊತ್ತಿದೆ. ನನ್ನ ಭಾಷಣ ಹಿಂದಿ, ಕನ್ನಡ ಮರಾಠಿಗಳಿಗೆ ಭಾಷಾಂತರ ಆಗಿದೆ. ಇಂಗ್ಲೀಷಿನಲ್ಲಿಯೂ ಇದೆ. ನಿನ್ನೆ ಸಂಜೆಯ ಹೊತ್ತಿಗೆ ನಿಮಗೆಲ್ಲರಿಗೂ ಅದರ ಪ್ರತಿಗಳು ಸಿಗಬೇಕು ಎಂದು ಗಂಗಾಧರರಾಯರನ್ನು ಪ್ರಾರ್ಥಿಸಿದ್ದೆ. ನಿಮಗೆ ಸಿಕ್ಕಿದೆ. ನೀವು ಅದನ್ನು ಚೆನ್ನಾಗಿ ಓದಿಕೊಂಡಿದ್ದೀರಿ ಎಂದು ತಿಳಿದಿದ್ದೇನೆ.

ನಾನು ಹೇಳಬೇಕಾದದ್ದು ಇಷ್ಟೇ. 1920-21ರಲ್ಲಿ ನಾವು ಏನು ಸಾಧಿಸಬೇಕು ಎಂದಿದ್ದೆವೋ ಅದನ್ನು ಸಾಧಿಸಲಾಗಲಿಲ್ಲ. ನಮ್ಮೊಳಗೆ ಅನೈಕಮತ್ಯ ವಿರಸ ತಲೆ ಎತ್ತಿಕೊಂಡಿದೆ. ಹಿಂದೂಗಳೂ, ಮುಸ್ಲಿಮರೂ ಪರಸ್ಪರ ಶತ್ರುಗಳು ಎಂದು ತಿಳಿದುಕೊಂಡು ಶಾರೀರಕ ಹಿಂಸೆಯನ್ನು ಮಾಡುತ್ತಿದ್ದಾರೆ. ಇದು ಸ್ವರಾಜ್ಯ ಸಾಧನೆಗೆ ದಾರಿಯಲ್ಲ ಎಂದು ಹೇಳುವ ಅಗತ್ಯವಿಲ್ಲ. ಹಿಂದೂಗಳು ನಾವು, ಅಸ್ಪೃಶ್ಯರನ್ನು ಕೀಳಾಗಿ ಕಾಣುತ್ತೇವೆ.

ಮುಂದುವರಿಯುವುದು...

ಡಾ. ಬಾಬು ಜಗಜೀವನರಾಮ್ : (05.04.1908 - 06.07.1986)
ಬಾಬೂಜಿಯವರ ಕುರಿತು ಗಣ್ಯರ ಅನಿಸಿಕೆ

ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಭಾಸ್ ಚಂದ್ರ ಬೋಸ್ – ಬಾಬೂಜಿ ಅವರು ಕಲ್ಕತ್ತದ ಕಾರ್ಮಿಕರು ಮತ್ತು ಹರಿಜನರನ್ನು ಸಂಘಟಿಸಿದ ರೀತಿ ಎಲ್ಲರಿಗೂ ಆದರ್ಶಪ್ರಾಯ ಮತ್ತು ಅನುಕರಣೀಯವಾಗಿದೆ. ಅವರ ಸುಧಾರಣಾ ಆಂದೋಲನವು ಈ ಶ್ರಮಿಕ ಜನರಲ್ಲಿ ಹೊಸ ಬೆಳಕನ್ನು ತೋರಿದೆ ಮತ್ತು ಅವರಲ್ಲಿ ನವಚೈತನ್ಯವನ್ನು ತಂದಿದೆ. ಬಾಬೂಜಿ ಅವರ ವಿಚಾರ ಧಾರೆಯಿಂದ ಪ್ರಭಾವಿತರಾಗಿರುವ ಹರಿಜನ ಯುವಕರು ಮುಂದಿನ ದಿನಗಳಲ್ಲಿ ಸಮಾಜದ ಹಾಗೂ ದೇಶದ ಒಳಿತನ್ನು ಸಮರ್ಥವಾಗಿ ಮಾಡಬಲ್ಲರು ಎಂಬುದರಲ್ಲಿ ಸಂದೇಹವಿಲ್ಲ.

ಲಾರ್ಡ್ ವೇವೆಲ್ – ಭೋಜನಾ ನಂತರ ಜಗಜೀವನರಾಮರ ಜೊತೆ ಮಾತನಾಡಿದೆ. ನಾನು ಅವರನ್ನು ಬಹಳವಾಗಿ ಮೆಚ್ಚುತ್ತೇನೆ. ಈವರೆಗೆ ನಾನು ಸಂಧಿಸಿರುವ ಎಲ್ಲ ಪರಿಶಿಷ್ಟ ಜಾತಿಯ ನಾಯಕರಲ್ಲಿ ಅವರು ಅತ್ಯಂತ ವಿವೇಕವುಳ್ಳವರೆಂದು ತಿಳಿಯುತ್ತೇನೆ.

ಕಾ.ಕಾ. ಕಾಲೇಲ್‌ಕರ್ – ಈಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಮಂತ್ರಿ ಮಂಡಲದಲ್ಲಿ ಹೊಸ ಹೊಸ ಮುಖಗಳನ್ನು ನಾನು ಕಾಣುತ್ತಿದ್ದೇನೆ. ಅದರಲ್ಲಿ ಅನೇಕರಿಗೆ ಬ್ರಿಟಿಷರ ಅಧೀನದಲ್ಲಿ ಈ ಹಿಂದೆ ಇದ್ದ ನವಭಾರತ ಗುಲಾಮಗಿರಿಯ ಅರಿವಾಗಲಿ ಮತ್ತು ದೇಶದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಮತ್ತು ಧಾರ್ಮಿಕ ಸಂಪ್ರದಾಯಗಳ ಬಗೆಗೆ ತಿಳಿವಳಿಕೆಯಾಗಲಿ ಇರುವುದಿಲ್ಲ. ರಾಷ್ಟ್ರೀಯ ನಾಯಕರಾದ ಬಾಬು ಜಗಜೀವನರಾಮರಂಥವರು ರಾಷ್ಟ್ರಕ್ಕೆ ಸ್ವಾತಂತ್ರ್ಯಗಳಿಸಿಕೊಡಲು ಎಷ್ಟು ಹೋರಾಟ ನಡೆಸಿದರು. ಕಷ್ಟ ನಷ್ಟಗಳನ್ನು ಅನುಭವಿಸಿದರು ಎಂಬುದನ್ನಾದರೂ ಅವರು ಅರಿತುಕೊಂಡಿರುವರೆಂದು ನಾನು ಹೇಳಲಾರೆ. ಹಿಂದಿನ ಪೀಳಿಗೆಯವಾದ ನನ್ನಂಥವರಿಗೆ ಬಾಬು ಜಗಜೀವರಾಯರು ತಾಯಿನಾಡಿಗಾಗಿ ಎಂಥ ತ್ಯಾಗ ಮಾಡಿದರೆಂದು ಗೊತ್ತಿದ್ದಿತು.

ಸಿ. ರಾಜಗೋಪಾಲಾಚಾರಿ – ನಾನು ಜಗಜೀವನರಾಮರ ಅಪಾರವಾದ ಮೇಧಾಶಕ್ತಿಯನ್ನು ಅತ್ಯಂತ ಅಸಕ್ತಿಯಿಂದ ಗಮನಿಸಿದ್ದೇನೆ. ಅವರು ಚತುರಮತಿ, ನಿರ್ಣಯಾತ್ಮಕ ಶಕ್ತಿ ಮತ್ತು ಸ್ಪಷ್ಟವಾದ ಅರಿವು ಇವುಗಳನ್ನೆಲ್ಲ ಕಂಡು ಆಶ್ಚರ್ಯಚಕಿತನಾಗಿದ್ದೇನೆ. ಪರರ ಗುಣ ಮತ್ತು ನಡೆತೆಗಳನ್ನು ಕ್ಷಣಮಾತ್ರದಲ್ಲಿಯೇ ಅರಿಯಬಲ್ಲ ಸೂಕ್ಷ್ಮ ಗುಣ ಅವರಿಗಿದ್ದುದರಿಂದಲೇ ಅವರು ಯಶಸ್ವೀ ಆಡಳಿತಗಾರರಾಗಲೂ ಸಾಧ್ಯವಾಯಿತು.

ಫಕ್ರುದ್ದೀನ್ ಅಲಿ ಅಹಮ್ಮದ್ – ನವ ಭಾರತ ನಿರ್ಮಾಣ ಕಾರ್ಯದಲ್ಲಿ ಬಾಬು ಜಗಜೀವರಾಮರಷ್ಟು ಅತ್ಯಮೂಲ್ಯ ಕೊಡುಗೆಯನ್ನು ನೀಡಿದವರು ಕೆಲವರು ಮಾತ್ರ. ಅವರು ಎಲ್ಲ ನಾಯಕರಿಗೂ ಸ್ಫೂರ್ತಿಯ ಕೇಂದ್ರವಾಗಿದ್ದವರು. ಕಾಂಗ್ರೆಸ್ ಅಧ್ಯಕ್ಷರಾಗಿ, ಕಾರ್ಮಿಕ, ರೈಲ್ವೆ, ಸಂಪರ್ಕ, ಆಹಾರ ಮತ್ತು ಕೃಷಿ ಹಾಗೂ ರಕ್ಷಣಾ ಇಲಾಖೆಗಳ ಸಚಿವರಾಗಿ ಅವರು ಬಹಳ ದಕ್ಷರೆಂದು ಹೆಸರುಗಳಿಸಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಎತ್ತಿ ಹಿಡಿಯುವಲ್ಲಿ ಅವರ ಕಾರ್ಯವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಆರ್. ವೆಂಕಟರಾಮನ್ – 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆಳಮಟ್ಟದಿಂದ ಉನ್ನತ ಸ್ಥಾನದವರೆಗೆ ಹೋರಾಡಿದ ಧೀರೋದಾತ್ತ ನಾಯಕ ಜಗಜೀವನ ರಾಮ್ ಅವರು ತೆಗೆದುಕೊಳ್ಳುತ್ತಿದ್ದ ಪ್ರಜ್ಞಾಪೂರ್ವಕ ನಿರ್ಣಯಗಳು ಅವರ – ಸಹೋದ್ಯೋಗಿಗಳ ಮನ್ನಣೆಗೆ ಪಾತ್ರವಾಗಿದ್ದವು. ಆದರ್ಶವಾದವನ್ನು ವಾಸ್ತವಿಕತೆಯೊಂದಿಗೆ ಸಮನ್ವಯಗೊಳಿಸಿ ದೇಶವನ್ನು ಧೈರ್ಯದಿಂದ ಮುನ್ನಡೆಸುವ ವಿಶಿಷ್ಟ ಶಕ್ತಿ ಅವರಲ್ಲಿ ನೆಲೆಗೊಂಡಿತ್ತು. ದಲಿತೋದ್ಧಾರವು ಅವರ ಏಕೈಕ ಗುರಿಯಾಗಿತ್ತು.

ಮುಂದುವರಿಯುವುದು....

ಜಗದರಾಮ ಯುಗದ ರಾಮ

– ಪ್ರೊ. ಅರವಿಂದ ಮಾಲಗತ್ತಿ

ಜಗದ ರಾಮ ನೀನು
ಯುಗದ ರಾಮ ನೀನು ಯುಗಯುಗಕೂ
ಚಿತ್ರ ಬರೆದ ಜಗಜೀವನ ರಾಮ ನೀನು

ದೇಶದಾಸ್ಯದ ನೊಗವ ಮೀಟಿದ ಸೆರೆಮನೆ
ವಾಸಿ ನೀನು ಜಾತಿಯೊಡಲ ಬಿಸಿಗೆ ಕುದ್ದ
ಬಿರುಗಾಳಿ ಬೆಂಕಿ ನೀನು

ಸೃಷ್ಟಿ ಮಳೆಗೆ ತಪವಗೈದ ದೃಷ್ಟಿ ಕುಸುಮ
ನೀನು ಹಸಿದ ಒಡಲಿಗೆ ಜೀವ ಬೆಸೆದ
ಬಡವರ ಬಂಧು ನೀನು

ತಮಂಧ ಸಮಾಜಕ್ಕೆ ಅಭಿಮುಖಿಯಾದ
ಅಜಾತಶತ್ರು ನೀನು ಭೀಮ ಬಲಕೆ
ಹೆಗಲು ನೀಡಿದ ರಾಮ ಬಲವು ನೀನು


ಹಸಿರು ಕ್ರಾಂತಿಗೆ ಉಸಿರು ನೀಡಿದ ಸಿರಿ
ಹರಿಕಾರ ನೀನು ಮೆದುವ ಮಾತಿನ
ಹದುಳ ನೀತಿಯ ಪರಿವರ್ತನೆಯ
ನದಿಯು ನೀನು

ನಿನ್ನ ಸ್ಮರಣೆಯ ಯುಗದ ಸ್ಮರಣೆ
ಜ್ಞಾನವೃಕ್ಷ ಬೀಜ ನೀನು ಅಲ್ಲಿ ಇಲ್ಲಿಯೂ
ಹಾಸಿ ಎಲ್ಲೆಡೆ ದಿಗ್ಗದಿಗಂತದ ಸೂಚಿ
ನೀನು.

ಸೌಜನ್ಯ : .....



ರಾಜ್ಯ ನೌಕರರ ವಿಮೆ ನಿಗಮದ ಉದ್ಘಾಟನೆಯಲ್ಲಿ ಜಯಪ್ರಕಾಶ್ ನಾರಾಯಣ, ಸಿ. ರಾಜಗೋಪಾಲಚಾರಿ ಜೊತೆಯಲ್ಲಿ ಬಾಬೂಜಿ



ರಾಜ್ಯ ನೌಕರರ ವಿಮೆ ನಿಗಮದ ಉದ್ಘಾಟನೆಯಲ್ಲಿ ಜವಹರಲಾಲ್ ನೆಹರು ಜೊತೆಯಲ್ಲಿ ಬಾಬೂಜಿ, 1948

ಗಾಂಧೀಜಿಯ ಕೊನೆಯ ಉಪವಾಸಗಳು

'ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ' ಕೃತಿಯಿಂದ ಆಯ್ದ ಭಾಗಗಳು
ಲೇಖಕರು : ಲೂಯಿ ಫಿಷರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪ್ರಾರ್ಥನೆಗೆ ಮೊದಲೇ ಸಾವು.

ಗೋಡ್ಸೆ ಇದ್ದಕ್ಕಿದ್ದಂತೆ ಗಾಂಧಿ ಅವರನ್ನು ಕೊಲ್ಲಬೇಕೆಂದು ನಿರ್ಧರಿಸಿದೆ" ಎಂದು ಹೇಳಿದನು. ಗಾಂಧಿಯ ಉಪವಾಸದ ವಿಜಯದಿಂದ ಗೋಡ್ಸೆ, ಮದನಲಾಲರಿಗೆ ಆಕ್ರೋಶವುಂಟಾಯಿತು, ಮಹಾತ್ಮನ ಅಧಿಕಾರದಿಂದ ಸೋತು ಅದನ್ನು ಜಯಿಸುವ ಅಸ್ತ್ರ ಕಾಣದಿದ್ದರು. 55 ಕೋಟಿ ರೂಪಾಯಿಗಳನ್ನು ಪಾಕಿಸ್ತಾನಕ್ಕೆ ಕೊಟ್ಟುದರಿಂದ ತನಗೆ ರೇಗಿ ಹೋಯಿತೆಂದು ಮದನಲಾಲ್ ಹೇಳಿದನು, ಅನಕ್ಷರಸ್ಥಳಾದ ಒಬ್ಬ ಮುದುಕಿ ಮದನಲಾಲನನ್ನು ಪೋಲೀಸಿನವರು ಬರುವವರೆಗೂ ಹಿಡಿದಿದ್ದಳು. ಆತ ಸೆರೆ ಸಿಕ್ಕಿದ ಮೇಲೆ ಗೋಡ್ಸೆ ಬಿರ್ಲಾ ಮಂದಿರದ ಸುತ್ತಲೂ ತಿರುಗಲಾರಂಭಿಸಿದನು. ಜೇಬಿನಲ್ಲಿ ಒಂದು ಪಿಸ್ತೂಲಿದ್ದಿತು. ಕಾಕಿ ಅಂಗಿಯ 1948ರ ಜನವರಿ 25ರ ಭಾನುವಾರದ ದಿನ ಪ್ರಾರ್ಥನಾ ಸಭೆಗೆ ಎಂದಿಗಿಂತ ಹೆಚ್ಚು ಜನ ಬಂದಿದ್ದರು. ಗಾಂಧಿಗೆ ಸಂತೋಷವಾಯಿತು. ಛಳಿಗಾಳಿ, ನೆಲ ತಣ್ಣಗಿದ್ದುದರಿಂದ ಕುಳಿತುಕೊಳ್ಳಲು ಚಾಪೆಗಳನ್ನಾಗಲಿ, ದಪ್ಪ ಖಾದಿ ಬಟ್ಟೆಯನ್ನಾಗಲಿ, ತರಬೇಕೆಂದು ಭಕ್ತರಿಗೆ ಹೇಳಿದನು. ಹಿಂದೂ, ಮುಸ್ಲಿಮರ ಹೃದಯದ ಐಕ್ಯತೆ ತನ್ನ ಹೃದಯಕ್ಕಾನಂದ ಕೊಟ್ಟಿತೆಂದು ಹೇಳಿದನು. ಪ್ರಾರ್ಥನೆಗೆ ಬರುವ ಪ್ರತಿಯೊಬ್ಬ ಹಿಂದು ಸಿಕ್ ಸೋದರ ಭಾವ ತೋರಲು ಒಬ್ಬ ಮುಸ್ಲಿಮನನ್ನಾದರೂ ಕರೆ ತರುವರೆ ? ಆ ಗುಂಪಿನಲ್ಲಿದ್ದ ಗೋಡ್ಸೆ ಒಪ್ಪಿರಲಾರ, ಮುಸಲ್ಮಾನರು ಹಿಂದೂ ಪ್ರಾರ್ಥನೆಗೇಕೆ ಬರಬೇಕು ಎಂದು ಅವರ ವಾದ. ಹಿಂದೂ ಮಹಾತ್ಮ ಕೊರಾನನ್ನೇಕೆ ಓದಬೇಕು? ಗಾಂಧಿ ಇಲ್ಲದಿದ್ದರೆ ಮುಸ್ಲಿಮರಿಗೆ ರಕ್ಷಣೆ ಇರುವುದಿಲ್ಲ. ಹಿಂದುಗಳು ಪಾಕಿಸ್ತಾನವನ್ನು ಆಕ್ರಮಿಸಿ ಸಂಯುಕ್ತ ಹಿಂದೂಸ್ಥಾನ ಪಡೆಯಬಹುದು. ಗೋಡ್ಸೆ ರೇಗುತ್ತಾ ಸಮಯ ಕಾಯು ತ್ತಿದ್ದನು. ರಕ್ಷಕರನ್ನು ಕರೆದೊಯ್ಯಬೇಕೆಂದೂ, ಪ್ರಾರ್ಥನೆಗೆ ಬರುವವರನ್ನು ಹುಡುಕಿನೋಡಬೇಕೆಂದೂ ಮಂತ್ರಿಗಳು ಗಾಂಧಿಗೆ ಹೇಳಿದರು. ಆತನಿಗೆ ಆ ಅಭಿಪ್ರಾಯ ಒಪ್ಪಿಗೆಯಾಗಲಿಲ್ಲ. ಪ್ರಧಾನ ಮಂತ್ರಿ ನೆಹರು ಡೆಪ್ಯುಟಿ ಪ್ರಧಾನಿ ಸರ್ದಾರ ಪಟೇಲರಿಗೆ ಎಷ್ಟೋ ಭಿನ್ನಾಭಿಪ್ರಾಯಗಳಿದ್ದುವು. ಅವರಿಬ್ಬರದೂ ಭಿನ್ನ ಮನೋಭಾವ, ಅವರ ಅಸಮಾಧಾನಗಳಿಂದ ಗಾಂಧಿಗೆ ಕ್ಲೇಶವುಂಟಾಗಿತ್ತು. ಒ0ದೇ ಮಂತ್ರಿಮಂಡಲದಲ್ಲಿ ಇಬ್ಬರೂ ಇರಲು ಸಾಧ್ಯವೇ ಎಂದು ಆಲೋಚಿಸಿದನು. ಒಬ್ಬರನ್ನು ಆರಿಸಿ, ಮತ್ತೊಬ್ಬರ ರಾಜೀನಾಮೆ ಕೊಡಿಸಬೇಕಾಗಬಹುದು ನಿರ್ಧಾರವನ್ನು ಅವರು ಆತನಿಗೇ ಒಪ್ಪಿಸಿದರು. ಆತನಿಗೆ ನೆಹ್ರೂವಿನಲ್ಲಿ ಪ್ರೀತಿಯಿತ್ತು. ಆತನು ಹಿಂದೂ, ಸಿಕ್, ಮುಸ್ಲಿಮರಲ್ಲಿ ನಿಷ್ಪಕ್ಷಪಾತ ವಿಶ್ವಾಸ ತೋರುವನೆಂಬ ಧೈರ್ಯವಿತ್ತು. ಪಟೇಲರು ರಾಜಕೀಯದಲ್ಲಿ ನಿಷ್ಣಾತ ಪಂಡಿತರು ; ಆತನು ಬಿಟ್ಟು ಹೋದರೆ ಸರ್ಕಾರ ಬಲಹೀನವಾಗು ವುದು, ಕಡೆಗೆ ಗಾಂಧಿ ಇಬ್ಬರನ್ನೂ ಬಿಡಬಾರದೆಂದು ನಿರ್ಧರಿಸಿದನು. ಒಬ್ಬರು ಇನ್ನೊಬ್ಬರಿಗೆ ಅವಶ್ಯಕವಾಗಿದ್ದರು. ಇಂಗ್ಲಿಷಿನಲ್ಲಿ ಮಹಾತ್ಮ ನೆಹ್ರೂವಿಗೆ, " ನೀವಿಬ್ಬರೂ ಐಕಮತ್ಯದಿಂದಿರಬೇಕು", ಎಂದು ಬರೆದು ಕಳುಹಿಸಿದನು.



ಮುಂದುವರಿಯುವುದು...

ಸಂಗ್ರಹ : ನಳಿನಾ ಡಿ., ಪತ್ರಕರ್ತೆ, ಕವಯಿತ್ರಿ

ಗಾಂಧೀಜಿ ಅವರ ದೃಷ್ಟಿಯಲ್ಲಿ ಸುಭಾಷ್‌ಚಂದ್ರ ಬೋಸ್



– ಡಾ. ಎಚ್.ಎಸ್. ದೊರೆಸ್ವಾಮಿ

ಹಿರಿಯ ಪತ್ರಕರ್ತ ಬಿ. ಎಂ. ಹನೀಫ್ ಅವರು ಸುಭಾಷ್‌ಚಂದ್ರ ಬೋಸ್ ಅವರ ಕುರಿತು ಬರೆದಿರುವ ಪುಸ್ತಕಕ್ಕೆ ಮುನ್ನುಡಿಯ ರೂಪದಲ್ಲಿ ನಾಲ್ಕು ಮಾತುಗಳನ್ನು ಬರೆಯುವುದಕ್ಕೆ ನನಗೆ ತುಂಬ ಸಂತೋಷವಾಗುತ್ತದೆ. ಇತಿಹಾಸವನ್ನು ವಿಕೃತಗೊಳಿಸುವ ಬರವಣಿಗೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ನಮ್ಮ ಹೆಮ್ಮೆಯ ರಾಷ್ಟ್ರೀಯ ನಾಯಕರ ಕುರಿತ ವಸ್ತುನಿಷ್ಠ ಬರವಣಿಗೆಗಳು ಹೆಚ್ಚಬೇಕು. ತನ್ಮೂಲಕ ಇತಿಹಾಸದ ಸಮದೃಷ್ಟಿಯ ಅವಲೋಕನ ಸಾಧ್ಯವಾಗಬೇಕು. ಈ ನಿಟ್ಟಿನಲ್ಲಿ ಈ ಪುಸ್ತಕ ಮಹತ್ವದ್ದು ಎನ್ನುವುದು ನನ್ನ ಭಾವನೆ. ಸುಭಾಷ್‌ಚಂದ್ರ ಬೋಸ್ ಅವರದ್ದು ತಾರುಣ್ಯದ ಹುರುಪು. ಅವರ ಮತ್ತು ಮಹಾತ್ಮ ಗಾಂಧೀಜಿಯವರ ಮಧ್ಯೆ ತಾತ್ವಿಕ ಭಿನ್ನಾಭಿಪ್ರಾಯಗಳೇನೂ ಇರಲಿಲ್ಲ. ಭಿನ್ನಮತ ಏನಿದ್ದರೂ ಸ್ವಾತಂತ್ರ್ಯ ಪಡೆಯುವ ವಿಧಾನದ ಬಗ್ಗೆ. ಇವತ್ತು ಕೆಲವರು ಬೊಟ್ಟು ಮಾಡುವ ಹಾಗೆ ಅವರಿಬ್ಬರೂ ಬದ್ಧ ವೈರಿಗಳಾಗಿರಲಿಲ್ಲ. ಸುಭಾಷರು ಬರ್ಲಿನ್‌ನಿಂದ ಮಾಡಿದ ಬಾನುಲಿ ಭಾಷಣಗಳ ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದೇ ಸಂಬೋಧಿಸುತ್ತಾರೆ. ಸುಭಾಷರು ಕಾಂಗ್ರೆಸ್‌ನ ರಾಜಕೀಯ ಗರಡಿಯಲ್ಲೇ ಪಳಗಿದವರು. ಅವರು ಮಹಾತ್ಮ ಗಾಂಧಿ ಅವರ ಬಳಿಗೆ ಬಂದು, 'ದೇಶದ ಜನ ಹೋರಾಟಕ್ಕೆ ಸಿದ್ಧವಾಗಿದ್ದಾರೆ. ನೀವು ಬ್ರಿಟಿಷರ ವಿರುದ್ಧ ಕೂಡಲೆ ತೀವ್ರತರ ಹೋರಾಟಕ್ಕೆ ಕರೆ ನೀಡಬೇಕು' ಎಂದು ಒತ್ತಾಯಿಸಿದಾಗ ಗಾಂಧೀಜಿಯವರು ಸಾವಧಾನದಿಂದಲೇ ಉತ್ತರಿಸುತ್ತಾರೆ. 'ಇದು ಅವಸರ ಮಾಡುವ ವಿಷಯವಲ್ಲ. ನಿನಗೆ ತುಂಬ ಅವಸರವಿದೆ. ನೀನು ನಿನ್ನ ಗುರುಗಳಾದ ಚಿತ್ತರಂಜನದಾಸರ ಬಳಿಗೆ ಹೋಗು. ಅವರು ನಿನಗೆ ಈ ವಿಷಯದಲ್ಲಿ ಮಾರ್ಗದರ್ಶನ ನೀಡುತ್ತಾರೆ' ಎಂದು ಹೇಳಿ ಚಿತ್ತರಂಜನ್‌ದಾಸರ ಬಳಿಗೆ ಕಳುಹಿಸುತ್ತಾರೆ.ಕೊಲ್ಕತ್ತಾಗೆ ಹೋದ ಸುಭಾಷರು ಅಲ್ಲಿ ಸ್ವಾತಂತ್ರ್ಯ ಹೋರಾಟದ ಚಳವಳಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಸೈಮನ್ ಕಮಿಷನ್ ಬಂದಾಗ ಅದರ ವಿರುದ್ಧ ನಡೆದ ಉಗ್ರ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆ. ಸುಭಾಷರು ಅತ್ಯಂತ ತುರ್ತಾಗಿ ಉಗ್ರ ಹೋರಾಟ ನಡೆಯಬೇಕೆಂದು ಬಯಸುತ್ತಿದ್ದರು. ಆದರೆ ಗಾಂಧೀಜಿಯವರು ತಮ್ಮ ಅಹಿಂಸಾ ವಿಧಾನವನ್ನು ಬಿಟ್ಟುಕೊಡಲು ತಯಾರಿರಲಿಲ್ಲ. ಜನರಿಗೆ ಅಹಿಂಸಾ ವಿಧಾನದ ಬಗ್ಗೆ ತಿಳುವಳಿಕೆ ನೀಡುತ್ತಲೇ ಹೋರಾಟ ರೂಪಿಸಬೇಕು ಎನ್ನುವುದು ಅವರ ನಿಲುವಾಗಿತ್ತು.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಅಂದಿನ ಭಾರತೀಯರ ಮೇಲೆ ಬ್ರಿಟಿಷರ ಪ್ರಭಾವ ಅಗಾಧವಾಗಿತ್ತು. ಬ್ರಿಟಿಷರನ್ನು ಅನುಕರಣೆ ಮಾಡುವುದೇ ಆಧುನಿಕತೆಯ ಲಕ್ಷಣವೆಂದೇ ಭಾವಿಸಿದ್ದರು. ಇದನ್ನೂ ಕುರಿತು ಲಾಲಾಲಜಪತ್‌ರಾಯ್ ಹೀಗೆ ಬರೆದಿದ್ದರು. "ಇಂಗ್ಲಿಷ್ ಬಲ್ಲ ಭಾರತೀಯ, ಪ್ರಭುವನ್ನು ಅನುಸರಿಸುವುದರಲ್ಲಿಯೇ ಹೆಮ್ಮೆಪಟ್ಟುಕೊಳ್ಳುತ್ತಿದ್ದ. ಅವನ ಉಡುಪು–ತೊಡಪು ಚಿರೋಟ್–ಪೈಪ್ಸ್, ತಟ್ಟೆ ಮತ್ತು ಉಪಹಾರಗಳಲ್ಲಿಯೂ ಅವರನ್ನು ಅನುಸರಿಸಿದ. ಇಂಗ್ಲಿಷ್ ಮಾದರಿಯಲ್ಲಿ ನಿರ್ಮಿಸಲಾದ ಮನೆಯಲ್ಲಿ ಆತ ವಾಸಿಸತೊಡಗಿದ. ಭಾರತೀಯ ಜೀವನ ತ್ಯಜಿಸಿ ಆಂಗ್ಲೀಕರಣ ಅನುಸರಿಸುವುದರಲ್ಲಿಯೇ ಆತ ಹೆಮ್ಮೆಪಟ್ಟುಕೊಳ್ಳತೊಡಗಿದ. ಅವನ ಕಣ್ಣಿನಲ್ಲಿ "ಭಾರತೀಯವಾದದ್ದೆಲ್ಲ ನಿಕೃಷ್ಟವಾದದ್ದು. ಭಾರತೀಯರು ಅನಾಗರಿಕರು, ಅವರ ಧರ್ಮ, ಮೂಢನಂಬಿಕೆಗಳ ಗೋಜಲು, ಅವರ ಪದ್ಧತಿ, ನಡತೆಗಳು ಅನಾಗರಿಕವಾದವು. ಮನುಷ್ಯನು ಸ್ವತಂತ್ರವಾಗಿ ಜನಿಸಿದ್ದಾನೆಂಬುದನ್ನು ಅರಿಯದವರು." ತಿಲಕರು ಪಾಶ್ಚಾತ್ಯ ಅಂಧಾನುಕರಣೆಯನ್ನು ಪ್ರಬಲವಾಗಿ ವಿರೋಧಿಸಿದರು. "ಸುಶಿಕ್ಷಿತರೆಂದು ಹೇಳಲಾದ ಕೆಲವೇ ಜನ, ಸಾಹೇಬರೊಂದಿಗೆ ಕುಡಿಯುವುದರಲ್ಲಿ ಸರಿಸಮಾನರಾಗಿರಬಹುದು. ಆದರೆ ದೇಶದ ಆಡಳಿತದಲ್ಲಿ ಅವರು ಸಮಾನಹುದ್ದೆ ಪಡೆಯಬಲ್ಲರೆ?" ಎಂದು ಪ್ರಶ್ನಿಸುತ್ತಿದ್ದರು. ದೇಶದ ಬುದ್ಧಿ ಜೀವಿಗಳು ಬ್ರಿಟಿಷರ ಆಡಳಿತದ ಗುಲಾಮರಾಗುವುದನ್ನು ಅವರು ಕಟುವಾಗಿ ಟೀಕಿಸಿದರು. ಭಾರತೀಯರು ತಮ್ಮ ಚರಿತ್ರೆ, ಸಂಸ್ಕೃತಿಗಳಿಗೆ ಗೌರವಿಸದಿದ್ದರೆ, ಸಾಮಾಜಿಕ, ರಾಜಕೀಯ, ಸ್ವಾತಂತ್ರ್ಯ ಕುರಿತು ಮಾತನಾಡುವುದು ಅರ್ಥಹೀನವಾದುದು ಎಂದೇ ಅವರು ಭಾವಿಸಿದ್ದರು. ಆದ್ದರಿಂದಲೇ ಅವರು ಗಣೇಶೋತ್ಸವವನ್ನು ರಾಷ್ಟ್ರೀಯ ಹಬ್ಬವಾಗಿ ಪರಿವರ್ತಿಸಲು ಸರ್ವ ರೀತಿಯಲ್ಲಿ ಪ್ರಯತ್ನಿಸಿದರು. ಅದಕ್ಕಾಗಿ ಮಹಾರಾಷ್ಟ್ರದ ನಾನಾ ಭಾಗಗಳಲ್ಲಿ ಯುವ ಸಮಿತಿಗಳನ್ನು ರಚಿಸಿದರು. ಜನರಿಂದ ವಂತಿಗೆ ಸಂಗ್ರಹಿಸಿದರು. ಸ್ನೇಹಬಳಗವನ್ನು ಸೇರಿಸಿಕೊಂಡು, ಐದು ಸಾರ್ವಜನಿಕ ಗಣಪತಿಗಳನ್ನು ಕೂರಿಸಿದರು. ಗಣೇಶೋತ್ಸವ ಪೆಂಡಾಲ್‌ನಲ್ಲಿ ತಿಲಕರು, ರಾಷ್ಟ್ರೀಯತೆ, ಐಕ್ಯತೆ, ಜನಜಾಗೃತಿ ಕುರಿತು ಮಾತನಾಡುತ್ತಿದ್ದರು. ಕೇಸರಿ ಪತ್ರಿಕೆಯಲ್ಲಿ ಇವರ ಬಗ್ಗೆ ಲೇಖನ ಬರೆದು, ಗ್ರೀಸ್‌ನ ಒಲಂಪಿಕ್ ರಾಷ್ಟ್ರೀಯ ಉತ್ಸವಕ್ಕೆ ಸರಿಸಮಾನವಾದ ಉತ್ಸವವೆಂದು ಬಣ್ಣಿಸಿದರು. 1905ರ ವೇಳೆಗೆ ಎಲ್ಲ ಜನರು ಭಾಗವಹಿಸುವ ಉತ್ಸವವಾದ ಈ ಆಚರಣೆ ಭಾರತದಾದ್ಯಂತ ಹಬ್ಬಿತು.



ಮದ್ರಾಸ್, ಬನಾರಸ್, ದ್ವಾರಕ, ಕರಾಚಿ, ಕಲ್ಕತ್ತಾ, ಮಥುರಾಗಳಲ್ಲಿ ವೈಭವದಿಂದ ಹತ್ತಾರು ದಿನಗಳ ಕಾಲ ನಡೆಯುವ ಮಹೋತ್ಸವಗಳಾಗಿ ಮಾರ್ಪಾಡಾದವು. ರಾಷ್ಟ್ರೀಯ ಐಕ್ಯತೆ, ಜಾಗೃತಿಗಾಗಿ ಆರಂಭಿಸಿದ ಈ ಉತ್ಸವ ಸ್ವರಾಜ್ಯದ ಕಡೆಗೆ ಜನರ ಮನಸ್ಸನ್ನು ಪರಿವರ್ತಿಸುವ ಸಾಧನವಾಗಿಸಿದ ಯಶಸ್ಸು ತಿಲಕರಿಗೆ ಸಲ್ಲುತ್ತದೆ. ಅದರಂತೆ ಶಿವಾಜಿ ಉತ್ಸವ ಆಚರಣೆಗೆ ತರುವುದರ ಮೂಲಕ ಜನರಲ್ಲಿ ಸ್ವಾಭಿಮಾನ, ಕೆಚ್ಚು, ಧೈರ್ಯವನ್ನು ತುಂಬಲು ನಾಯಕ, ಮಿಗಿಲಾಗಿ ಮರಾಠ ಸಾಮ್ರಾಜ್ಯ ಸ್ಥಾಪಕ, ಶಿವಾಜಿ ಮಹಾರಾಜನನ್ನು ಆದರ್ಶ ವ್ಯಕ್ತಿಯಾಗಿ ಪ್ರತಿರೂಪಿಸಿದರು. ಸ್ವರಾಜ್ಯ, ರಾಷ್ಟ್ರಪ್ರೇಮದ ಆಶಯದೊಂದಿಗೆ ಶಿವಾಜಿ ವಾರ್ಷಿಕ ಉತ್ಸವ ನಡೆಸಲು ನಿರ್ಧರಿಸಿ, 1895 ಮೇ 30ರಂದು ಸಭೆಯನ್ನು ಆಯೋಜಿಸಿದರು. ಶಿವಾಜಿ ಸಮಾಧಿ ರಕ್ಷಣೆ, ಪುನರ್‌ನಿರ್ಮಾಣ, ಶಿವಾಜಿ ದಿನಾಚರಣೆ ನಡೆಸುವ ಕುರಿತು ಚರ್ಚೆ ನಡೆಸಿದರು. ಕೇಸರಿ ಪತ್ರಿಕೆಯಲ್ಲಿ 1897ರಲ್ಲಿ "ನಾಯಕನ ಪೂಜೆ" ಎಂಬ ವಿಶಿಷ್ಟ ಲೇಖನ ಪ್ರಕಟಿಸಿದರು. ತಿಲಕರು ಅನೇಕ ಕಡೆಗಳಲ್ಲಿನ ಭಾಷಣದಲ್ಲಿ ಈ ಉತ್ಸವವನ್ನು ಸಾಮಾಜಿಕ ಉತ್ಸವವೆಂದೂ ಬಣ್ಣಿಸಿದ್ದರು. ಅನೇಕ ಟೀಕೆಗಳ ನಡುವೆ, ಇದು 'ಮುಸ್ಲಿಂ ವಿರೋಧಿ ಉತ್ಸವ"ವೆಂದು ಟೀಕೆಗಳೂ ಬಂದವು. ಅದಕ್ಕಾಗಿ ಅವರು, "ಮುಸ್ಲಿಂ ಬಾಂಧವರು ಬ್ರಿಟಿಷರು ಒಡ್ಡುವ ಬಲೆಯಲ್ಲಿ ಬೀಳಬಾರದು, ಹಿಂದೂ – ಮುಸ್ಲಿಂರು ಒಂದೇ ದೋಣಿಯ ಪಯಣಿಗರು" ಎಂದು ಸವಿನಯವಾಗಿ ಅವರ ಶಂಕೆಯನ್ನು ದೂರಗೊಳಿಸಿದರು. ಬನಾರಸ್, ಕಲ್ಕತ್ತಾ, ಕರಾಚಿ, ಮದ್ರಾಸಿನಲ್ಲಿ ಶಿವಾಜಿ ಉತ್ಸವ ಏರ್ಪಟ್ಟಿತ್ತು. ಇದೇ ಸಂದರ್ಭದಲ್ಲಿ ಬಂಗಾಲದಿಂದ ಬಂದ ಆಹ್ವಾನ ಸ್ವೀಕರಿಸಿ, ತಿಲಕರು, ಕಲ್ಕತ್ತಾಕ್ಕೆ ತೆರಳಿ ಹಲವು ಉಪನ್ಯಾಸ ಮಾಡಿದ್ದರು. ಈ ಎಲ್ಲಾ ಬೆಳವಣಿಗೆಗಳು ಬ್ರಿಟಿಷರ ಗಮನಕ್ಕೆ ಬಾರದೆ ಇರಲಿಲ್ಲ. ಬ್ರಿಟಿಷ್ ಸರ್ಕಾರ ರಾಜಕೀಯ ಉತ್ಸವಗಳ ಪ್ರತಿಬಂಧಕಾಜ್ಞೆ ಹೊರಡಿಸಿತು. ಹೀಗೆ ಗಣಪತಿ ಉತ್ಸವ ಮತ್ತು ಶಿವಾಜಿ ಉತ್ಸವಗಳೊಂದಿಗೆ ಬ್ರಿಟಿಷರ ಸಾಮ್ರಾಜ್ಯವಾದದ ವಿರುದ್ಧ ವಿಭಿನ್ನ ಮಾರ್ಗಗಳ ಮೂಲಕ, ತಿಲಕರು ಸ್ವದೇಶಿಯತೆ, ರಾಷ್ಟ್ರೀಯತೆಯ ಮಾರ್ಗಕ್ಕೆ ಭದ್ರ ಬುನಾದಿ ಹಾಕಿದರು.

ಮುಂದುವರಿಯುವುದು....





ಮಹಾರಾಷ್ಟ್ರದಲ್ಲಿ ಗಣೇಶೋತ್ಸವ ಹಾಗೂ ಶಿವಾಜಿ ಉತ್ಸವಗಳ ಕುರಿತಾಗಿ ತಿಲಕರು ನಡೆಸಿದ ಸಾರ್ವಜನಿಕ ಸಭೆಗಳು

ಅಕ್ಷರದವ್ವ : ಸಾವಿತ್ರಿಬಾ ಫುಲೆ

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಅಸ್ಪೃಶ್ಯರಿಗಾಗಿ ಫುಲೆ ದಂಪತಿಗಳು ಆರಂಭಿಸಿದ ಮೊದಲ ಪಾಠಶಾಲೆ

ಫುಲೆ ದಂಪತಿಗಳು ಸಾಮಾಜಿಕ ಸುಧಾರಣೆಗೆ ಶಿಕ್ಷಣವೇ ಪ್ರಮುಖ ಸಾಧನವಾಗಿ ಪರಿಗಣಿಸಿದ್ದರು. ಆದ್ದರಿಂದಲೇ 19ನೇ ಶತಮಾನದ ಭಾರತ ಚರಿತ್ರೆಯ ನವೋದಯದ ಶಿಲ್ಪಗಳಲ್ಲಿ ಫುಲೆ ದಂಪತಿಗಳ ಹೆಸರು ಚಿರಸ್ಥಾಯಿಯಾಗಿ ಉಳಿದಿವೆ. ತಳ ಸಮುದಾಯದವರ ಮಕ್ಕಳು, ಹೆಣ್ಣು ಮಕ್ಕಳು, ಅನಾಥರು, ದಲಿತರಿಗಾಗಿ ಅವರು ನಿರ್ಮಿಸಿದ ಶಾಲೆಗಳು ಮತ್ತು ಅದರ ನಿರ್ವಹಣೆಯ ಜವಾಬ್ದಾರಿಯು ಇಂದಿಗೂ ನಿದರ್ಶನವಾಗಿ ಉಳಿದಿದೆ. ಸಾವಿತ್ರಿಫುಲೆ ಅವರು ಶೈಕ್ಷಣಿಕ ರಂಗದಲ್ಲಿ ನಿರ್ವಹಿಸಿದ ಹೊಣೆಗಾರಿಕೆಯನ್ನು ಥಾಮಸ್ ಕ್ಹುನ್ ಅವರು 'ಅಂದಿನ ಶಿಕ್ಷಣ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರಲು ಬಯಸಿದ್ದ ಸಾವಿತ್ರಿಬಾಯಿ ಆಗಿನ ಶಿಕ್ಷಣ ವ್ಯವಸ್ಥೆಯ ದೃಷ್ಟಿಕೋನವನ್ನೇ ಪಲ್ಲಟಗೊಳಿಸಿದರು' ಎಂದು ಹೇಳುತ್ತಾರೆ. 'ಥಾಮ್ ವುಲ್ಫ್ ಮತ್ತು ಸುಜನ ಅಂಡ್ರಡೆ' ಅವರು "ಸಾವಿತ್ರಿಬಾಯಿ ಅವರ ನಾಲ್ಕು ಪ್ರಮುಖ ಶಿಕ್ಷಣ ನೀತಿಗಳೆಂದರೆ

1. ಜಾಗತಿಕವಾಗಿ ಲಭ್ಯವಿರುವ ಆಧುನಿಕ ಶಿಕ್ಷಣವನ್ನು ಪಠ್ಯದಲ್ಲಿ ಅಳವಡಿಸಿಕೊಳ್ಳುವುದು.
2. ಮಕ್ಕಳ ಸೂಕ್ಷ್ಮತೆಯನ್ನಾಧರಿಸಿ ಬೋಧನೆಯ ಕ್ರಮವನ್ನು ರೂಪಿಸುವುದು.
3. ಬೌದ್ಧಿಕವಾಗಿ ವಿಮರ್ಶಾತ್ಮಕವಾದ, ವಸ್ತುನಿಷ್ಠವಾದ ಕಲಿಕೆಯನ್ನು ಬೆಂಬಲಿಸುವುದು.
4. ಸಾಮಾಜಿಕ ಸುಧಾರಣೆಗಳನ್ನು, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಆದ್ಯತೆಯ ಮೇರೆಗೆ ಶಿಕ್ಷಣದ ಪಠ್ಯಗಳಲ್ಲಿ ಅಳವಡಿಸಿಕೊಳ್ಳುವುದು."

ಮುಂದುವರಿದು ಅವರು ಬರೆಯುತ್ತಾ "ಬೆಳಗಿನ ಹೊತ್ತು ಮಕ್ಕಳಿಗೆ ಪಾಠ ಮಾಡಲು ತೆರಳುವ ಪ್ರತಿಯೊಬ್ಬ ಭಾರತೀಯ ಸಿಕ್ಷಕಿಗೆ ಸಾವಿತ್ರಿಬಾಯಿಯ ಶಬ್ದಗಳು ಮನದಲ್ಲಿರುತ್ತವೆ. ಮರೆಯಲಾಗುವುದಿಲ್ಲ. ಮಕ್ಕಳಿಗೆ ಈ ಶಿಕ್ಷಕಿಯ ಅವಶ್ಯಕತೆಯಿದೆ. ಇವರಾರೂ ಕಲ್ಲಿನ, ಸಗಣಿಯ ಏಸೆತಗಳಿಗೆ, ಮೂದಲಿಕೆಗಳಿಗೆ ಎದೆಗುಂದುವುದಿಲ್ಲ. ಏಕೆಂದರೆ ಸಾವಿತ್ರಿಬಾಯಿ ಮನದಲ್ಲಿದ್ದಾಳೆ. ಇಂದಿನ ಅಕ್ಷರಸ್ಥ ಭಾರತೀಯ ಮಹಿಳೆ ಜಗತ್ತಿನ ಯಾವುದೇ ಭಾಗದಲ್ಲಿರಲಿ



ಸಾವಿತ್ರಿಬಾಯಿ ನಿರ್ವಹಿಸಿದ ಬೋಜನಕೇಂದ್ರದ ಮಕ್ಕಳ ಅಪರೂಪದ ಚಿತ್ರ

ಆಕೆ ಹೊಸಚಿಂತನೆಗಳಿಗೆ ಸಾಕ್ಷಿಯಾಗಿರುತ್ತಾಳೆ. ಪ್ರತಿಯೊಬ್ಬ ಭಾರತೀಯ ಅಕ್ಷರಸ್ಥ ಮಹಿಳೆ ಮನುವಿನ ಸೆರೆಮನೆಯಿಂದ ಬಂಧಮುಕ್ತಗೊಂಡವಳಾಗಿರುತ್ತಾಳೆ. ಶಾಲೆಗಳಲ್ಲಿ ಪ್ರತಿಯೊಬ್ಬ ಭಾರತೀಯ ಬಾಲಕಿ ಬಾಲಕನ ಪಕ್ಕ ಕುಳಿತುಕೊಂಡು, ಪುಸ್ತಕಗಳನ್ನು ಓದುತ್ತಾ, ಹೊಸ ಸಂಗತಿಗಳನ್ನು ಕಲಿಯುತ್ತಾ, ಹೊಸ ಜಗತ್ತಿನ ನಿರ್ಮಾಣದಲ್ಲಿರುತ್ತಾಳೆ ಈ ಬಾಲಕಿ ರೂಪಿಸುತ್ತಿರುವ ಈ ಜಗತ್ತು ತನ್ನ 3000 ವರ್ಷಗಳ ಸನಾತನ ಪರಂಪರೆಯಿಂದ ನಿರ್ದಾಕ್ಷಿಣ್ಯವಾಗಿ ಕಡಿದುಕೊಂಡು ಭವಿಷ್ಯದ ಸಾವಿತ್ರಿಬಾಯಿ ಫುಲೆಯನ್ನು ರೂಪಿಸಲು ಸಹಾಯ ಮಾಡುತ್ತಿರುತ್ತದೆ."

ಫುಲೆ ದಂಪತಿಗಳು ಸ್ಥಾಪಿಸಿದ ಸತ್ಯ ಶೋಧಕ ಸಮಾಜದ ಮಹಿಳಾ ವಿಭಾಗದ ಅಧ್ಯಕ್ಷರಾಗಿ, ಸಾವಿತ್ರಿಬಾ ಅವರು ಸೇವೆ ಸಲ್ಲಿಸಿದರು. ನಿಷ್ಠಾವಂತ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರನ್ನು ಜ್ಯೋತಿಬಾ ಅವರ ನಿಧನದ ನಂತರ ಸದಸ್ಯರ ಒತ್ತಾಯದ ಮೇರೆಗೆ ಕೇಂದ್ರದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಯಿತು. ಸತ್ಯಶೋಧಕ ಸಮಾಜ ಕೇಂದ್ರದಲ್ಲಿ 1893ರಲ್ಲಿ ನಡೆದ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆಯನ್ನೂ ವಹಿಸಿದ್ದರು. 1876-77ರಲ್ಲಿ ಪಶ್ಚಿಮ ಮಹಾರಾಷ್ಟ್ರದಲ್ಲಿ ಹರಡಿದ್ದ ಪ್ಲೇಗ್ ಸಾಂಕ್ರಾಮಿಕ ರೋಗ ಮತ್ತು ಬರಗಾಲ ಮತ್ತು ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ "ಸತ್ಯಶೋಧಕ ಸಮಾಜದ" ಸದಸ್ಯರು, ಸಾವಿತ್ರಿಬಾ, ಅವರ ನೇತೃತ್ವದಲ್ಲಿ ಜನರ ಸಂಕಷ್ಟಗಳ ನಿವಾರಣೆಗೆ ಮತ್ತು ಪರಿಹಾರಕ್ಕಾಗಿ ಹಗಲಿರುಳು ದುಡಿದಿದ್ದರು. ಈ ಸಂದರ್ಭದ ದುರ್ಲಾಭ ಪಡೆಯುತ್ತಿದ್ದ ಲೇವಾದೇವಿಗಾರರ ವಿರುದ್ಧ ದೊಡ್ಡ ಪ್ರತಿಭಟನೆ ಮಾಡಿದ್ದರು. ಅಲ್ಲಿನ ಜಿಲ್ಲಾಧಿಕಾರಿಗಳನ್ನೂ ಸಂಪರ್ಕಿಸಿ ಆಗಬೇಕಾದ ತುರ್ತು ಕಾರ್ಯಗಳ ವಿವರ ಸಲ್ಲಿಸಿದ್ದರು. ಸ್ವಂತದ ವಿಚಾರಗಳಾಗಲಿ, ಸ್ವಾರ್ಥಪರತೆಯಾಗಲಿ ತುಂಬಿರದ, ನಿಸ್ವಾರ್ಥ ಜೀವಿಯ ಸಾಮಾಜಿಕ ಕಳಕಳಿಯ ಪತ್ರ ಇದಾಗಿತ್ತು.

ಮುಂದುವರಿಯುವುದು...

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು : ಉಮಾಬಾಯಿ ಕುಂದಾಪುರ

ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ಸ್ವಾತಂತ್ರ್ಯ ಹೋರಾಟಗಾರ್ತಿ ಭಗಿನೀ ಮಂಡಲದ ಸ್ಥಾಪಕಿ, ನಾ. ಸು. ಹರ್ಡೀಕರ್ ಅವರ ಹಿಂದೂಸ್ತಾನಿ ಸೇವಾದಲದ ಮಹಿಳಾ ವಿಭಾಗದ ಮುಖ್ಯಸ್ಥೆ, ಕರ್ನಾಟಕದ ಮಹಾನ್ ಸ್ವಾತಂತ್ರ್ಯ ಹೋರಾಟಗಾರ್ತಿ ಉಮಾಬಾಯಿ ಅವರಾಗಿದ್ದಾರೆ. ಉಮಾಬಾಯಿಯವರು ಹುಟ್ಟಿದ್ದು 25ನೇ ಮಾರ್ಚ್ 1892 ತಂದೆ ಗೋಳಿಕೇರಿ ಕೃಷ್ಣರಾವ್, ತಾಯಿ ತುಂಗಾಬಾಯಿ. 1905ರಲ್ಲಿ 13ನೇ ವಯಸ್ಸಿನಲ್ಲಿ ಸಂಜೀವರಾವ್ ಕುಂದಾಪುರ್ ಅವರೊಂದಿಗೆ ವಿವಾಹವಾಗಿದ್ದರು. ಆಕೆಯ ಮಾವ ಆನಂದರಾವ್ ಕುಂದಾಪುರ ಸುಧಾರಣಾವಾದಿ ಮತ್ತು ಮಹಿಳಾ ಸಬಲೀಕರಣದ ಕುರಿತಾಗಿ ಹೆಚ್ಚಿನ ಒಲವುಳ್ಳವಾರಗಿದ್ದರು. ಅವರ ಪ್ರೋತ್ಸಾಹದ ಮೇರೆಗೆ ಉಮಾಬಾಯಿ ಮದುವೆಯ ನಂತರ ಶಿಕ್ಷಣವನ್ನು ಮುಂದುವರೆಸಿ, 27ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪೂರೈಸಿದರು. ಆಗಸ್ಟ್ 1, 1920ರಂದು ಸ್ವಾತಂತ್ರ್ಯ ಹೋರಾಟಗಾರ ಬಾಲಗಂಗಾಧರ ತಿಲಕರ ಮೃತದೇಹದ ಭವ್ಯ ಮೆರವಣಿಗೆಯನ್ನು ನೋಡಿದ ಉಮಾಬಾಯಿಯವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಪ್ರೇರಣೆಯುಂಟಾಯಿತು.

ಸೆಪ್ಟೆಂಬರ್ 4, 1920ರಂದು ಮಹಾತ್ಮಾ ಗಾಂಧೀಜಿ ಅವರು ಅಸಹಕಾರ ಚಳುವಳಿಯಲ್ಲಿ ಉಮಾಬಾಯಿ ತನ್ನ ಸಹೋದರ ರಘುರಾಮರಾವ್, ಪತಿ ಸಂಜೀವರಾವ್ ಜತೆ ಸೇರಿ ಉತ್ಸಾಹದಿಂದ ಭಾಗವಹಿಸಿದರು. ಖಾದಿಯ ಬಗ್ಗೆ ಪ್ರಚಾರ ಮತ್ತು ಮನೆಮನೆಗೆ ತೆರಳಿ ಮಹಿಳೆಯರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. 1923ರಲ್ಲಿ ಪತಿ ಸಂಜೀವರಾವ್ ನಿಧನ ಹೊಂದಿದ ನಂತರ, ಉಮಾಬಾಯಿಯವರು ಮಾವನೊಂದಿಗೆ ಹುಬ್ಬಳ್ಳಿಗೆ ಹಿಂತಿರುಗಿದ್ದರು. ಅಮೇರಿಕಾದಲ್ಲಿ ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಎಂ.ಎಸ್. ಪದವಿಯನ್ನು ಪಡೆದು ಸ್ವದೇಶಕ್ಕೆ ಹಿಂತಿರುಗಿದ ಡಾ. ನಾ. ಸು. ಹರ್ಡೀಕರ್ ಅವರು ಭಾರತೀಯ ಯುವಕರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವ ಸಲುವಾಗಿ 1923ರಲ್ಲಿ ಹಿಂದೂಸ್ತಾನಿ ಸೇವಾ ದಳವನ್ನು ಹುಬ್ಬಳ್ಳಿಯಲ್ಲಿ ಪ್ರಾರಂಭಿಸಿದರು. ಉಮಾಬಾಯಿಯವರು ಈ ಸಂಘದಲ್ಲಿ ಮಹಿಳಾ ವಿಭಾಗದ ಮುಖ್ಯಸ್ಥೆಯಾಗಿ ಆಯ್ಕೆಯಾದರು. ಮತ್ತು ತಿಲಕ್ ಅವರು ಸ್ಥಾಪಿಸಿದ್ದ ಕನ್ಯಾ ಶಾಲೆಯ ಉಸ್ತುವಾರಿ ವಹಿಸಿಕೊಂಡರು. 1924ರಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಸಮ್ಮೇಳನವು ಬೆಳಗಾವಿಯಲ್ಲಿ ಜರುಗಿತು. ಮಹಾತ್ಮಾ ಗಾಂಧಿ ಅವರು ಅಧ್ಯಕ್ಷರಾಗಿ ಭಾಗವಹಿಸಿದ ಏಕೈಕ ಸಮ್ಮೇಳನ ಇದಾಗಿತ್ತು. ಹರ್ಡೀಕರ್ ಅವರ ಜೊತೆ ಅತ್ಯುತ್ಸಾಹದಿಂದ ಉಮಾಬಾಯಿ ಅವರು ಭಾಗವಹಿಸಿದ್ದಲ್ಲದೆ, ರಾಜ್ಯದಾದ್ಯಂತ ಸಂಚರಿಸಿ 150ಕ್ಕಿಂತ ಹೆಚ್ಚು ಮಂದಿ ಮಹಿಳೆಯರನ್ನು, ವಿಧವೆಯರನ್ನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಕಾರಣರಾದರು. ಉಮಾದೇವಿ ಅವರು ಹಲವಾರು ರಾಷ್ಟ್ರೀಯ ನಾಯಕರ ಸಂಪರ್ಕಕ್ಕೆ ಬರಲು ಈ ಸಮ್ಮೇಳನ ಸಹಾಯಕವಾಯಿತು. 1927–28ರ ಸಾಲಿಗೆ, ಕರ್ನಾಟಕದಲ್ಲಿ ಕಾಂಗ್ರೆಸ್ ಸಂಘಟನೆಯ ಉಪಾಧ್ಯಕ್ಷೆಯಾಗಿ ಆಯ್ಕೆಯಾಗಲು ಸಹಕಾರಿಯಾಯಿತು. ಮಾವ ಆನಂದರಾಯರ ಮನೆ, ಮುದ್ರಣಾ ಘಟಕಗಳು ಸಂಘಟನೆಯ ಚಟುವಟಿಕೆಯ ಕೇಂದ್ರವಾಗಿತ್ತು. ಇದರಿಂದಾಗಿ ಬ್ರಿಟೀಶ್ ಸರಕಾರದ ಕೆಂಗಣ್ಣಿಗೆ ಗುರಿಯಾಗಬೇಕಾಯಿತು.



ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ಉಮಾಬಾಯಿ ಅವರನ್ನು 1932ರಲ್ಲಿ ಬ್ರಿಟೀಷ್ ಸರ್ಕಾರವು ಬಂಧಿಸಿ, 4 ತಿಂಗಳವರೆಗೆ ಯರವಾಡದ ಕಾರಗೃಹದಲ್ಲಿ ಇರಿಸಿತು. ಜೈಲಿನಲ್ಲಿ ಇದ್ದ ಸಮಯದಲ್ಲಿ ಮಾವ ಆನಂದರಾವ್ ನಿಧನದ ಸುದ್ದಿ ಕೇಳಿ ಕುಸಿದುಹೋದರು. ಅದೇ ಕಾರಗೃಹದಲ್ಲಿದ್ದ ಸರೋಜಿನಿ ನಾಯ್ಡು ಉಮಾಬಾಯಿಯವರಿಗೆ ಧೈರ್ಯ ತುಂಬಿ, ಸಂಗ್ರಾಮಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಗುಪ್ತವಾಗಿ ನಿರ್ವಹಿಸುವಂತೆ ಸಲಹೆ ನೀಡಿದರು. ಸೆರೆಮನೆ ಶಿಕ್ಷೆಯಿಂದ ಹಿಂತಿರುಗುವ ಹೊತ್ತಿಗೆ ಬ್ರಿಟಿಷ್ ಸರ್ಕಾರವು, ಆನಂದರಾವ್ ಸ್ಥಾಪಿಸಿದ್ದ ಕರ್ನಾಟಕ ಪ್ರೆಸ್ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಂಡಿತ್ತು ಮತ್ತು ತಿಲಕ್ ಕನ್ಯಾ ಶಾಲೆಗೆ ಬೀಗ ಜಡಿಯಲಾಗಿತ್ತು. ಅಲ್ಲದೆ ಅವರು ಪ್ರಾರಂಭಿಸಿದ ಸ್ವಯಂಸೇವಾ ಸಂಘಟನೆ ಭಗಿನಿ ಮಂಡಲವನ್ನು ಕಾನೂನುಬಾಹಿರವೆಂದು ಘೋಷಿಸಲಾಗಿತ್ತು. ವಿಚಲಿತರಾಗದ ಉಮಾಬಾಯಿ ತನ್ನ ಸಣ್ಣ ಮನೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ನೀಡಲು ಪ್ರಾರಂಭಿಸಿದರು.

1942ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯ ಸಮಯದಲ್ಲಿ ಭೂಗತರಾಗಿದ್ದುಕೊಂಡು ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದ ಹೋರಾಟಗಾರರಿಗೆ ಬ್ರಿಟೀಷರ ಕಣ್ಣುತಪ್ಪಿಸಿ ಆಹಾರ, ವಸತಿಯ ವ್ಯವಸ್ಥೆಯನ್ನು ಮಾಡುತ್ತಿದ್ದರು. ಬಿಹಾರದಲ್ಲಿ 1934ರಲ್ಲಿ ಸಂಭವಿಸಿದ ಭೂಕಂಪದ ಸಂದರ್ಭದಲ್ಲಿ ಹರ್ಡೀಕರ್ ಅವರು ಹಿಂದೂಸ್ತಾನಿ ಸೇವಾ ದಳದ ಸದಸ್ಯರೊಂದಿಗೆ, ಉಮಾಬಾಯಿಯವರು ಮಹಿಳಾ ಸಹಚರರೊಂದಿಗೆ ಕೂಡಿ ಬಿಹಾರಕ್ಕೆ ತೆರಳಿ, ಭೂಕಂಪ ಸಂತ್ರಸ್ತರಿಗೆ ಸಹಾಯಹಸ್ತ ಚಾಚಿದರು. ಈ ಸಮಯದಲ್ಲಿಯೇ ಅವರು ರಾಷ್ಟ್ರೀಯ ನಾಯಕರಾದ ಬಾಬು ರಾಜೇಂದ್ರ ಪ್ರಸಾದ್, ಜೀವತ್‌ರಾಮ್ ಭಗವಾನ್‌ದಾಸ್ ಕೃಪಲಾನಿ ಮತ್ತು ಇತರರೊಂದಿಗೆ ನಿಕಟ ಸಂಪರ್ಕಕ್ಕೆ ಬಂದರು. ಗಾಂಧೀಜಿ ಅವರು ಕಸ್ತೂರ್‌ಬಾ ಗಾಂಧಿ ಟ್ರಸ್ಟಿನ ಕರ್ನಾಟಕ ಶಾಖೆಯ ನಿರ್ವಾಹಕಿಯಾಗಿ ಉಮಾಬಾಯಿಯವರನ್ನು 1946ರಲ್ಲಿ ನೇಮಿಸಿದ್ದರು. ಆರ್ಥಿಕವಾಗಿ ದುರ್ಬಲರಾದವರು, ನಿರ್ಗತಿಕ ಮಹಿಳೆಯರು, ಬಾಲವಿಧವೆಯರು, ಅವಿವಾಹಿತ ಮಹಿಳೆಯರು– ಹೀಗೆ ಸಮಾಜದ ತೀರಾ ಕೆಳಸ್ತರದಲ್ಲಿದ್ದ ಮಹಿಳೆಯರನ್ನು ತಮ್ಮ ಸಂಘಟನೆಗೆ ಬರಮಾಡಿಕೊಂಡು ಅವರಿಗೆ ಕರಕುಶಲ ವಸ್ತುಗಳ ತಯಾರಿಕೆ, ಕಲೆ ಮತ್ತಿತರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೂಕ್ತ ತರಬೇತಿಯನ್ನು ನೀಡಿದರು. ಆ ಮೂಲಕ ಅವರು, ಸಮಾಜದಲ್ಲಿ ಸ್ವತಂತ್ರವಾಗಿ ತಲೆಯೆತ್ತಿ ಬಾಳುವಂತೆ ಮಾಡಿದರು.

ಓದು ಬರಹ ತಿಳಿದ ವ್ಯಕ್ತಿ ತನ್ನ ಸಮುದಾಯದ ಜನರಿಗೆ ಶಿಕ್ಷಣ, ಮೂಢ ನಂಬಿಕೆ, ದೌರ್ಜನ್ಯಗಳ ಬಗ್ಗೆ ತಿಳಿಸಲಿಲ್ಲ ಎಂದರೆ, ವ್ಯಕ್ತಿ ಬದುಕಿದ್ದು ಸತ್ತಂತೆ.


– ಡಾ. ಬಾಬಾ ಸಾಹೇಬ್ ಅಂಬೇಡ್ಕರ್

ನಿಜಲಿಂಗಪ್ಪನವರು ಮತ್ತು ಮಹಾತ್ಮ ಗಾಂಧಿ : ಆಗಸ್ಟ್ 21, 1920

– ವೇಮಗಲ್ ಸೋಮಶೇಖರ್.

ಏಕೀಕೃತಗೊಂಡ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಗಳಾಗಿದ್ದ (ಎರಡು ಬಾರಿ) ಸಿದ್ಧವನ ಹಳ್ಳಿ ನಿಜಲಿಂಗಪ್ಪನವರು ಪ್ರೌಢಶಾಲೆಯವರೆಗೂ ತಮ್ಮ ಹುಟ್ಟೂರಾದ ಚಿತ್ರದುರ್ಗದಲ್ಲಿಯೇ ವಿದ್ಯಾಭ್ಯಾಸ ನಡೆಸಿ ತಮ್ಮ 18ನೇ ವಯಸ್ಸಿನಲ್ಲಿ ಅಂದರೆ 1920ರಲ್ಲಿ ಬೆಂಗಳೂರಿಗೆ ಬಂದು ರೈಲ್ವೆ ನಿಲ್ದಾಣದ ಬಳಿ ಇದ್ದ (ಈಗಲೂ ಇರುವ) ಗುಬ್ಬಿ ತೋಟದಪ್ಪನವರ ಛತ್ರದಲ್ಲಿದ್ದು ಕಾಲೇಜು ವ್ಯಾಸಂಗ ಮಾಡುತ್ತಿದ್ದರು. ಆಗ ಅಂದರೆ 1920ರ ಆಗಸ್ಟ್ 21 ಶನಿವಾರದಂದು ಮಹಾತ್ಮ ಗಾಂಧೀಜಿ ಬೆಂಗಳೂರಿಗೆ ಬರುವ ಕಾರ್ಯಕ್ರಮ ಏರ್ಪಾಟಾಗಿತ್ತು. ಅಂದು ಬೆಳಗ್ಗೆ ಗಾಂಧೀಜಿ ತಮ್ಮ ಅನುಯಾಯಿಗಳೊಂದಿಗೆ ಸೇಲಂನಲ್ಲಿದ್ದ ಕಾರ್ಯಕ್ರಮವನ್ನು ಮುಗಿಸಿಕೊಂಡು ನೇರವಾಗಿ ಕಾರಿನಲ್ಲಿ ಬೆಂಗಳೂರಿಗೆ ಆಗಮಿಸಿದರು. ಅಂದಿನ ಸಮಾರಂಭ ದಂಡು ರೈಲ್ವೆನಿಲ್ದಾಣದ ಹಿಂಭಾಗದಲ್ಲಿರುವ ಬೆನ್‌ಸನ್ ಟೌನ್‌ನ ಖುದ್ದೂಸ್ ಸಾಬ್ ಈದ್ಗಾ ಮೈದಾನದಲ್ಲಿ ಏರ್ಪಾಟಾಗಿತ್ತು. ಅದು ಬೆಂಗಳೂರಿಗೆ ಗಾಂಧಿಯವರ ಎರಡನೆ ಭೇಟಿಯಾಗಿತ್ತು. ದಂಡು ಪ್ರದೇಶದ ಮುಸಲ್ಮಾನರು ಬಹಳ ಉತ್ಸಾಹದಿಂದ ಅಂದಿನ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಆದರೆ ಅಂದು ವಿಪರೀತ ಮಳೆ. ಆ ಮಳೆಯಲ್ಲಿಯೇ ಗಾಂಧಿಯವರನ್ನು ಕಾಣಲು ಮತ್ತು ಅವರ ಭಾಷಣವನ್ನು ಕೇಳಲು ಸುಮಾರು 40 ಸಾವಿರ ಜನ ಸೇರಿದ್ದರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಆಗ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ನಿಜಲಿಂಗಪ್ಪನವರು ತಮ್ಮ ಸಹಪಾಠಿಗಳಾಗಿದ್ದ ನಿಟ್ಟೂರು ಶ್ರೀನಿವಾಸರಾಯರು, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಂ.ಎನ್. ಕೃಷ್ಣರಾವ್, ಕಲಾ ಮಂದಿರದ ಅ.ನ. ಸುಬ್ಬರಾವ್ ಮುಂತಾದವರೊಡನೆ ಸಭೆಗೆ ನಡೆದುಕೊಂಡು ಹೋಗಿದ್ದರು. ಆಗ್ಗೆ ಗಾಂಧೀಜಿ ಇನ್ನೂ ತುಂಡು ಬಟ್ಟೆ ಧರಿಸಲು ಪ್ರಾರಂಭಿಸಿರಲಿಲ್ಲ. ಪೈಜಾಮ, ಜುಬ್ಬ ಮತ್ತು ಗಾಂಧಿ ಟೋಪಿ ಧರಿಸುತ್ತಿದ್ದರು. (ತುಂಡು ಬಟ್ಟೆ ಧರಿಸಲು ಪ್ರಾರಂಭಿಸಿದ್ದು 1921 ಸೆಪ್ಟೆಂಬರ್ 22ರಿಂದ) ಪ್ರಥಮಬಾರಿ ಗಾಂಧಿಯವರನ್ನು ಕಂಡು ಹಾಗೂ ಅವರ ಭಾಷಣವನ್ನು ಕೇಳಿದ ನಿಜಲಿಂಗಪ್ಪನವರು ಗಾಂಧಿಯವರ ಪ್ರಭಾವಕ್ಕೆ ಒಳಗಾದರು

ಎರಡನೆ ಬಾರಿ ಗಾಂಧಿಯವರನ್ನು ಕಂಡಿದ್ದು : 1924ರ ಡಿಸೆಂಬರ್ 26ರಿಂದ 28ರವರೆಗೆ (ಮೂರು ದಿವಸ) ಬೆಳಗಾವಿಯಲ್ಲಿ ಅಖಿಲ ಭಾರತ 43ನೇ ರಾಷ್ಟ್ರೀಯ ಕಾಂಗ್ರೆಸ್ ವಾರ್ಷಿಕ ಅಧಿವೇಶನ ನಡೆಯಿತು. ಅದು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಏಕೈಕ ಸಮ್ಮೇಳನವಾಗಿತ್ತು. ಆ ಸಮಯಕ್ಕೆ ನಿಜಲಿಂಗಪ್ಪನವರು ಕಾಂಗ್ರೆಸ್‌ನ ಒಬ್ಬ ಸಾಮಾನ್ಯ ಸದಸ್ಯನಾಗಿದ್ದರು. ಹಿರಿಯ ನಾಯಕರ ಭಾಷಣಗಳನ್ನು ಕೇಳುವುದರೊಂದಿಗೆ ಗಾಂಧಿಯವರನ್ನು ಹತ್ತಿರದಿಂದ ನೋಡಬಹುದೆಂಬ ಕಾರಣಕ್ಕೆ ನಿಜಲಿಂಗಪ್ಪನವರು ಆ ಸಮ್ಮೇಳನಕ್ಕೆ ಹೋಗಲು ಬಹು ಉತ್ಸುಕರಾದರು. ಆದರೆ ಪ್ರತಿನಿಧಿ ಶುಲ್ಕ ತೆರಬೇಕಾಗಿತ್ತು. ಜೊತೆಗೆ ಪ್ರಯಾಣದ ಹಾಗೂ ಊಟ ವಸತಿಗಳ ವೆಚ್ಚ ಬೇರೆ. ಅವರ ಅದೃಷ್ಟಕ್ಕೆ ಶ್ರೀಮಂತರೊಬ್ಬರ ಮಗನಾಗಿದ್ದ ಸಹಪಾಠಿಯೊಬ್ಬ ಅವರ ವೆಚ್ಚಕ್ಕೆ ಬೇಕಾದ ಹಣವನ್ನು ಕೊಡಲು ಮುಂದೆ ಬಂದ. ಬೆಳಗಾವಿ ಸಮ್ಮೇಳನದಲ್ಲಿ ಭಾಗವಹಿಸಿದ್ದ ನಾಯಕರುಗಳ ಭಾಷಣಗಳನ್ನು ಕೇಳುವ ಅವರನ್ನು ಸನಿಹದಿಂದ ನೋಡುವ ಮನೋಭಾವವು ಅವರ ಅಂತರಂಗದ ಮಾರ್ಪಾಡಿಗೆ ಕಾರಣವಾಯಿತು. ಉತ್ಸಾಹದಿಂದ ಭಾಗಿಯಾದ ನಿಜಲಿಂಗಪ್ಪನವರ ಮೇಲೆ ಬೆಳಗಾವಿ ಸಮ್ಮೇಳನ ಅದ್ಭುತ ಪ್ರಭಾವ ಬೀರಿ ತಾನು ಇನ್ನು ಮುಂದೆ ಖಾದಿಯನ್ನು ಮಾತ್ರ ತೊಡುವುದಾಗಿ ನಿರ್ಧರಿಸಿ, ತಮ್ಮ ಜೀವಿತದ ಕೊನೆಯವರೆಗೂ ಖಾದಿಯನ್ನೇ ಧರಿಸಿದರು.



1927ರಲ್ಲಿ ಗಾಂಧೀಜಿ ಆರೋಗ್ಯಸುಧಾರಣೆಗಾಗಿ ನಂದಿ ಬೆಟ್ಟದಲ್ಲಿ 45 ದಿವಸ ತಂಗಿದ್ದಾಗ ಮಹಾತ್ಮರ ಆರೋಗ್ಯದ ಬಗೆಗಿನ ವರದಿಗಳನ್ನು ನಿಜಲಿಂಗಪ್ಪನವರು ಪ್ರತಿನಿತ್ಯ ಕುತೂಹಲದಿಂದ ಓದಿ ತಿಳಿದುಕೊಳ್ಳುತ್ತಿದ್ದರು.

ಗಾಂಧಿಯವರ ಕೊನೆಯ ಭೇಟಿ : 1948ಕ್ಕೆ ಮುಂಚೆ ಹಳೆಯ ಮೈಸೂರಿನಲ್ಲಿ ಹರಿಜನರನ್ನು ಚೆನ್ನಾಗಿ ಕಾಣುತ್ತಿಲ್ಲವೆಂದು ಗಾಂಧಿಯವರಿಗೆ ಯಾರೋ ತಪ್ಪು ಮಾಹಿತಿಯನ್ನು ನೀಡಿದ್ದರು. ಈ ಬಗ್ಗೆ ಗಾಂಧಿಯವರಿಗೆ ವಸ್ತುಸ್ಥಿತಿಯನ್ನು ವಿವರಿಸಲು 1948ನೇ ಜನವರಿಯಲ್ಲಿ ನಿಜಲಿಂಗಪ್ಪನವರು ಇತರರೊಂದಿಗೆ ದೆಹಲಿಗೆ ಹೋದರು. ಜನವರಿ 30ರಂದು ನವದೆಹಲಿಯ ಬಿರ್ಲಾ ಭವನದಲ್ಲಿ ಗಾಂಧೀಜಿ ಸಂಜೆ 5–00 ರಿಂದ 5–30 ವರೆಗೆ ನಿಜಲಿಂಗಪ್ಪ, ಎಚ್.ಸಿ.ದಾಸಪ್ಪ ಮತ್ತಿತರರೊಂದಿಗೆ ಭೇಟಿಗಾಗಿ ಸಮ್ಮತಿಸಿದ್ದರು. ನಿಜಲಿಂಗಪ್ಪನವರು ಸರಿಯಾದ ಸಮಯಕ್ಕೆ ಅಲ್ಲಿಗೆ ಹೋದರು. ದುರದೃಷ್ಟವಶಾತ್ ಅಲ್ಲಿಗೆ ಹೋಗುವ ಹೊತ್ತಿಗೆ ನಾಥೂರಾಂ ಗೂಡ್ಸೆ ಗಾಂಧಿಯವರಿಗೆ ಗುಂಡಿಟ್ಟು ಕೊಂದಿದ್ದ. ಬಿರ್ಲಾ ಭವನದಲ್ಲಿ ಗಾಬರಿ ಕೋಲಾಹಲಗಳು ಮನೆಮಾಡಿದ್ದವು. ಗಾಂಧಿಯವರ ಮರಣದ ಸುದ್ದಿಯನ್ನು ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದ್, ಪ್ರಧಾನ ಮಂತ್ರಿ ಜವಹರಲಾಲ್ ನೆಹರು ಮತ್ತು ಸರ್ದಾರ್ ಪಟೇಲ್ ಮತ್ತಿತರರಿಗೆ ಮೊದಲು ತಿಳಿಸಿದವರು ನಿಜಲಿಂಗಪ್ಪನವರೇ.

ನಿಜಲಿಂಗಪ್ಪನವರ ಭಾಷಣ : 1989ರ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ಹುಬ್ಬಳ್ಳಿ ಲಯನ್ಸ್ ಕ್ಲಬ್‌ನವರು ಏರ್ಪಡಿಸಿದ್ದ ಸಮಾರಂಭದಲ್ಲಿ ನಿಜಲಿಂಗಪ್ಪನವರು ಹೀಗೆ ಮಾತನಾಡಿದರು. ಪತ್ರಿಕೆಗಳಲ್ಲಿ ಪ್ರಕಟವಾದ ವರದಿ "ಸತ್ಯ ಅಹಿಂಸೆಗಳ ಮೂಲಕ ಶಸ್ತ್ರಾಸ್ತ್ರಗಳಿಲ್ಲದೆಯೇ ಶತ್ರುವನ್ನು ಗೆದ್ದು ದೇಶಕ್ಕೆ ಸ್ವಾತಂತ್ರ್ಯ ತಂದಿದ್ದ ಗಾಂಧಿಯವರನ್ನು ನಾವು ಮರೆತೇಬಿಟ್ಟಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಸ್ವಾರ್ಥರಹಿತವೂ ಜನಸೇವೆಗಾಗಿ ಬದುಕನ್ನು ಮುಡುಪಾಗಿಟ್ಟವರೂ ಆಗಿದ್ದ ನಾಯಕರುಗಳಲ್ಲಿ ಗಾಂಧೀಜಿ ಪ್ರಮುಖರೆಂದು ನಿಜಲಿಂಗಪ್ಪನವರು ಬಣ್ಣಿಸಿದರು. ಸ್ವಲ್ಪಮಟ್ಟಿಗಾದರೂ ಗಾಂಧೀಯವರ ಮಾರ್ಗವನ್ನನುಸರಿಸಲು ಸಭಿಕರಿಗೆ ಕರೆ ನೀಡಿದರು. ರಾಮ, ಬುದ್ಧ, ಏಸು ಮತ್ತು ಬಸವ ಇವರ ಸಂದೇಶಗಳ ಬಗ್ಗೆ ಸ್ವಲ್ಪ ಹೊತ್ತು ವಿವರಿಸಿ ಗಾಂಧೀಜಿ ಇವರೆಲ್ಲರಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿ ಎಂದು ನುಡಿದರು."

ನಿಜಲಿಂಗಪ್ಪನವರ ದೃಷ್ಟಿಯಲ್ಲಿ ಗಾಂಧೀಜಿ : "ಗಾಂಧೀಜಿ ನೋಡುವುದಕ್ಕೆ ಅಷ್ಟೇನು ಚನ್ನಾಗಿರಲಿಲ್ಲ. ಆದರೆ ಅವರಲ್ಲೊಂದು ವಿಶಿಷ್ಟ ಶಕ್ತಿ ಇತ್ತು. ಇಡೀ ದೇಶವನ್ನು ಮೋಡಿ ಮಾಡಿದರು. ಯಾರೇ ಭಿನ್ನಾಭಿಪ್ರಾಯ ಇದ್ದವರು ಅವರ ಹತ್ತಿರ ಹೋದರೆ ಎರಡೇ ನಿಮಿಷಗಳಲ್ಲಿ ಗಾಂಧೀಜಿ ಹೇಳಿದುದನ್ನು ಅವರು ಒಪ್ಪಿಕೊಳ್ಳುತ್ತಿದ್ದರು. ಇದು ಎಲ್ಲರ ಅನುಭವವಾಗಿತ್ತು ಹೀಗಾಗಿ ಯಾರೂ ಗಾಂಧಿಯವರನ್ನು ವಿರೋಧಿಸುತ್ತಿರಲಿಲ್ಲ." ಗಾಂಧಿವಾದಿಗಳಾಗಿದ್ದ ನಿಜಲಿಂಗಪ್ಪನವರು ಮಾಡುತ್ತಿದ್ದ ಗಾಂಧಿಯವರಿಗೆ ಸಂಬಂಧಪಟ್ಟ ಭಾಷಣದ ಕೊನೆಯಲ್ಲಿ "ಗಾಂಧೀಜಿಯವರನ್ನು ನೆನಪಿಸಿಕೊಳ್ಳಿ ಹಾಗೂ ಅವರನ್ನು ಅನುಸರಿಸಿ." ಎಂದು ಹೇಳುತ್ತಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗಂಗೂಬಾಯಿ ಅಂಬಲಿ

ಸಿದ್ಧಾಪುರದ ದೇಶಭಕ್ತರ ಕುಟುಂಬದಲ್ಲಿ 1908ರಲ್ಲಿ ಜನಿಸಿದ ಗಂಗೂಬಾಯಿ ವಿಜಾಪುರ ವಾಸಿಯಾದ ಅಂಬಲಿ ಅವರನ್ನು ಮದುವೆಯಾದರು. ಇವರು ಪತಿಯೊಂದಿಗೆ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲಾರಂಭಿಸಿದ್ದರು. ಪೋಲೀಸರ ಹಿಂಸೆ ತಾಳಲಾರದೆ ಇವರ ಕುಟುಂಬ 1928ರಲ್ಲಿ ವಿಜಾಪುರದಿಂದ ಸೊಲ್ಲಾಪುರಕ್ಕೆ ಸ್ಥಳಾಂತರಗೊಂಡರು. ಅಲ್ಲಿ ಸೇಂದಿ ಅಂಗಡಿ ಪಿಕೆಟಿಂಗ್, ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಅಲ್ಲಿನ ಪೋಲೀಸರು ಇವರನ್ನು ಬೆನ್ನು ಹತ್ತಿದ್ದರಿಂದ ಪುನಃ ವಿಜಾಪುರಕ್ಕೆ ಸ್ಥಳಾಂತರಗೊಂಡರು. 1932ರ ಕರನಿರಾಕರಣ ಚಳುವಳಿಯಲ್ಲಿ ಭಾಗವಹಿಸಿದಾಗ ಒಂದು ವರ್ಷ ಕಠಿಣ ಶಿಕ್ಷೆ ಹಾಗೂ ರೂ. 75 ದಂಡ ವಿಧಿಸಲಾಯಿತು. ದಂಡ ತೆರಲಾಗದ ಇವರಿಗೆ ಇನ್ನೂ ಮೂರು ತಿಂಗಳ ಶಿಕ್ಷೆ ಅಧಿಕಗೊಂಡಿತು. ಗಾಂಧಿ ಅವರು 21 ದಿನಗಳ ಉಪವಾಸ ಸತ್ಯಾಗ್ರಹಕ್ಕೆ ಬೆಂಬಲ ಪೂರ್ಣ ಸತ್ಯಾಗ್ರಹವನ್ನು ಇವರು ಬಿಜಾಪುರದಲ್ಲಿ ಕೈಗೊಂಡರು. 'ಚಲೇಜಾವ್' ಚಳುವಳಿಯ ಸಂದರ್ಭದಲ್ಲಿ ಇವರು ಭೂಗತರಾಗಿ ಕೆಲಸ ನಿರ್ವಹಿಸಿದರು.

ದೇವಯಾನಿ ಯಾನೆ ಲಕ್ಷ್ಮಿ ಹರಿಪೈ

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿಯೇ 1913ರಲ್ಲಿ ಬೀಳಗಿಯಲ್ಲಿ ದೇವಯಾನಿ ಅವರು ಜನಿಸಿದರು. ಮನೆಯಲ್ಲಿನ ಸ್ವಾತಂತ್ರ್ಯ ಹೋರಾಟದ, ಸತ್ಯಾಗ್ರಹದ ಚರ್ಚೆಗಳೊಂದಿಗೆ ಬೆಳೆದ ದೇವಯಾನಿ ಪತಿಯೊಂದಿಗೆ ಅರಣ್ಯ ಸತ್ಯಾಗ್ರಹದಲ್ಲಿ 1930ರಲ್ಲಿಯೇ ಭಾಗವಹಿಸಿದರು. ಪತಿ ಹರಿ ಪೈ ಅವರಿಗೆ ಒಂದು ತಿಂಗಳ ಶಿಕ್ಷೆ ಮತ್ತು ನೂರು ರೂ. ದಂಡ ವಿಧಿಸಲಾಯಿತು. ದಂಡ ಕಟ್ಟಲಾಗದ್ದರಿಂದ ಮನೆ ಜಪ್ತಿ, ಪಾತ್ರೆ ಪಗಡಗಳ ಹರಾಜು ಆಯಿತು. ಇದರಿಂದಾಗಿ ಇನ್ನಷ್ಟು ಧರ್ಯದಿಂದ ಇವರು ಪ್ರಭಾತ್‌ಪೇರಿ, ಮನೆ ಅಂಗಳದಲ್ಲಿ ಧ್ವಜವಂದನೆ, ಮಹಿಳೆಯರು ಮತ್ತು ಮಕ್ಕಳ ಸಂಘಟನೆಯಲ್ಲಿ ತೊಡಗಿದರು. ಪೋಲೀಸರು ಇವರ ಮನೆ ಅಂಗಳದ ಧ್ವಜ ಕಿತ್ತೆಸದಾಗ, ಗೋಡೆಯ ಮೇಲೆ ಧ್ವಜ ಚಿತ್ರ ಬರೆದು ಅದರ ಮುಂದೆ ಧ್ವಜ ವಂದನೆ ಮಾಡಿಸಲಾರಂಭಿಸಿದರು. ಕರನಿರಾಕರಣೆ ಚಳುವಳಿಯ ಸಂದರ್ಭದಲ್ಲಿ ಗಾಂಜಾ ಅಂಗಡಿ ಅನಂತರಾಯರ ಮನೆ ಮುಂದೆ ಸತ್ಯಾಗ್ರಹದಲ್ಲಿ ಹೂಡಿದ್ದ ಲಕ್ಷ್ಮಿ ಅವರ ಮಡಿಲಲ್ಲಿದ್ದ ಮಗುವನ್ನು ಎತ್ತಿಹಾಕಿದ್ದರಿಂದ ಮಗು ಬಿದ್ದು ರಕ್ತಸ್ರಾವವಾಗಿತ್ತು. ಇದರಿಂದ ಉಳಿದ ಕಡೆ ಸತ್ಯಾಗ್ರಹದಲ್ಲಿದ್ದವರು ಇವರ ನೆರವಿಗೆ ಆಗಮಿಸಿದರು. ಅವರೆಲ್ಲರೊಂದಿಗೆ ಇವರನ್ನೂ ಬಂಧಿಸಿ, ಹಿಂಡಲಗಾ ಜೈಲಿನಲ್ಲಿಟ್ಟರು. ಗರ್ಭಿಣಿಯಾಗಿದ್ದ ಇವರಿಗೆ ಸರಿಯಾದ ಊಟದ ವ್ಯವಸ್ಥೆಯಿಲ್ಲದೆ, ಜೈಲಿನಲ್ಲಿಯೇ ಗರ್ಭಪಾತವಾಯಿತು. ಇವರ ಜೊತೆಯಲ್ಲಿದ್ದ ಕಮಲಾದೇವಿ, ಸೀತಾಬಾಯಿ ಅವರು ಲಕ್ಷ್ಮಿ ಹಾಗೂ ಮಗುವಿನ ಆರೈಕೆ ಮಾಡಿದರು. 1930ರಲ್ಲಿ ಒಂದು ತಿಂಗಳು ಮತ್ತು ನಾಲ್ಕು ತಿಂಗಳು, 1942ರಲ್ಲಿ ಎರಡು ವರ್ಷ ಇವರಿಗೆ ಮತ್ತು ಪತಿಗೆ ಶಿಕ್ಷೆಯಾಯಿತು. ಕುಟುಂಬಸ್ಥರು ಸಹ ಚಳುವಳಿ ಮಾಡುತ್ತಿರುವ ಕಾರಣದಿಂದ ಲಕ್ಷ್ಮಿ ಅವರಿಗೆ ಅನೇಕ ರೀತಿಯಲ್ಲಿ ತೊಂದರೆ ಕೊಡುತ್ತಿದ್ದರೂ ಲೆಕ್ಕಿಸದೆ ರಾಷ್ಟ್ರೀಯ ಚಳುವಳಿಯಲ್ಲಿ ಇವರು ಭಾಗವಹಿಸುತ್ತಿದ್ದರು.

ಮುಂದುವರಿಯುವುದು....

Chronology of events of personal & Public life of Mahatma Gandhi

(year wise - from 1869)

1898 November 3. Cabled Colonial Secretary protesting against Visitors' and Embarkation Fees imposed under the Immigration Act.

November 19. Locations Notice published in the Government Gazette.

November 28. Gandhi represented to the Indian National Congress about serious financial loss from enforcement of the Locations order. WAH

November 29. Participated in inaugural ceremony of the International Printing tiePress in Durban set up at his suggestion.

December 31. Drew up petition to Secretary of State for Colonies regarding Dealers' Licences Act, 1897.

1899 January 11. Forwarded to Natal Governor Indian petition regarding licences. January 21. Addressed to the Press and public in India general letter, calling for urgent attention to Indian grievances regarding licences.

January 22. Sought, by petition, Viceroy's intervention in regard to licensing law.

March 20. Contributed to The Times of India a special article on plague panic in Natal, the first of a series by him on the position of Indians in South Africa.

April 25. The Transvaal Government ordered Asiatics to move to the Locations before July 1.

September 9. Cabled Colonial Secretary for facilities to Indians to leave the Transvaal, in view of imminence of British-Boer hostilities.

October 17. Meeting of English-speaking Indians decided to offer Indians' services to the Natal Government on the outbreak of the Boer War. Gandhi had a medical check-up by Dr Prince and was found fit for service in ambulance work

October 19. Communicated Indian offer to Government, forwarding list of volunteers headed by himself.

October 23. Indian offer welcomed by Government who indicated their willingness to avail of it on suitable occasions.

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.

ಕನ್ನಡ... ಕನ್ನಡಿಗ... ಕರ್ನಾಟಕ : ರಾ.ಹ. ದೇಶಪಾಂಡೆ

– ಡಾ. ರಾಮಲಿಂಗೇಶ್ವರ (ಸಿಸಿರಾ)

ಕರ್ನಾಟಕ ಏಕೀಕರಣವಾಗಿ 2021ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತೈದು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

"ಸಿರಿಗನ್ನಡಂ ಗೆಲ್ಗೆ" ಮಂತ್ರದ್ರಷ್ಟಾರರಾದ ಹಾಗು ರಾ.ಹ. ದೇಶಪಾಂಡೆ ಎಂದೇ ಪ್ರಸಿದ್ಧರಾದ ರಾಮಚಂದ್ರ ಹಣಮಂತರಾವ ದೇಶಪಾಂಡೆ ಅವರು ಧಾರವಾಡದ ನರೇಂದ್ರ ಗ್ರಾಮದಲ್ಲಿ ಜನಿಸಿದ್ದರು. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಪಡೆದು, 1878ರಲ್ಲಿ ಸರಕಾರಿ ಹೈಸ್ಕೂಲಿನಲ್ಲಿ ಮೆಟ್ರಿಕ್, ಧಾರವಾಡ ಕೇಂದ್ರಕ್ಕೆ ಪ್ರಥಮನಾಗಿ ಹಾಗು ಮುಂಬಯಿ ವಿಭಾಗಕ್ಕೆ 21ನೆಯವರಾಗಿ ಉತ್ತೀರ್ಣರಾದರು. ಕಾಲೇಜು ಶಿಕ್ಷಣಕ್ಕಾಗಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್‌ನಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಎರಡನೆಯ ಸ್ಥಾನ ಪಡೆದರು. 1881ರಲ್ಲಿ ಇಂಗ್ಲೀಷ್ ಭಾಷೆಯಲ್ಲಿಯ ಪರಿಣಿತಿಗಾಗಿ ಹ್ಯಾವಲಾಕ್ ಬಹುಮಾನ ದೊರೆಯಿತು. ಸಂಸ್ಕೃತ ಭಾಷೆಯಲ್ಲಿಯೂ ಪರಿಣಿತರಾಗಿದ್ದ ಇವರು 1882ರಲ್ಲಿ ಬಿ.ಎ. (ಆನರ್ಸ್)ನಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಕ್ಕಾಗಿ ಮುಂಬಯಿ ಸರಕಾರ ಇವರನ್ನು "ದಕ್ಷಿಣಾ ಫೆಲೊ" ನೀಡಿ ಗೌರವಿಸಿತು. 1884ರಲ್ಲಿ ಕನ್ನಡ ಭಾಷಿಕರಲ್ಲಿ ಎಂ.ಎ. ಪದವಿ ಗಳಿಸಿದ ಪ್ರಥಮರೆಂದು "ಎಂ.ಎ. ದೇಶಪಾಂಡೆ" ಎಂದೂ ಸಹ ಪ್ರಸಿದ್ಧರಾಗಿದ್ದರು.

ದಕ್ಷಿಣ ಮುಂಬಯಿ ಭಾಗದ ಶಿಕ್ಷಣಾಧಿಕಾರಿಗಳಾಗಿದ್ದ ರಸೆಲ್ ಅವರು ರಾ.ಹ.ದೇಶಪಾಂಡೆ ಅವರನ್ನು, ಶಿಕ್ಷಣ ಇಲಾಖೆಯ ನಿರ್ದೇಶಕ ಚಾಟ್‌ಫೀಲ್ಡ್ ಅವರ ಮುಖಾಂತರ ಬೆಳಗಾವಿಯಲ್ಲಿಯ ಸರದಾರ ಹೈಸ್ಕೂಲಿಗೆ ಸಹಾಯಕ ಹೆಡ್ ಮಾಸ್ತರ ಆಗಿ ನೇಮಿಸಿದರು. ಕಾರವಾರದಲ್ಲಿ ಇವರು ಉಪಶಿಕ್ಷಣ ನಿರೀಕ್ಷಕರಾಗಿ, ತರಬೇತಿ ಪಡೆದು ಕಾಲೇಜಿನ ಉಪಪ್ರಿನ್ಸಿಪಾಲರಾಗಿ, ಪ್ರಿನ್ಸಿಪಾಲ ಆಗಿ, ಕನ್ನಡ ಭಾಷಾಂತರಕಾರರಾಗಿ, ಮುಂಬಯಿ ಶಿಕ್ಷಕರ ತರಬೇತಿ ಕಾಲೇಜಿನ ಪ್ರಾಧ್ಯಾಪಕರಾಗಿ, ಪಠ್ಯಪುಸ್ತಕಗಳ ಪರಿಷ್ಕರಣ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ದಕ್ಷ ಅಧಿಕಾರಿಯೆಂದು ಹೆಸರಾಗಿದ್ದ ರಾ.ಹ. ದೇಶಪಾಂಡೆ ಅವರು ಕನ್ನಡಕ್ಕಾಗಿ ನಡೆಸಿದ ಹೋರಾಟವನ್ನು ಸಹಿಸದ ಮರಾಠಿ ಅಧಿಕಾರಿಗಳ ಕನ್ನಡ ವಿರೋಧಿ ಯೋಜನೆಗಳಿಂದಾಗಿ, ಇವರು 20 ವರ್ಷಗಳ ಅವಧಿಯಲ್ಲಿ 22 ಸಲ ಹುದ್ದೆಯಿಂದ ಹುದ್ದೆಗೆ ವರ್ಗಾವಣೆಗೆ ಗುರಿಯಾಗಬೇಕಾಯಿತು.

ಉತ್ತರ ಕರ್ನಾಟಕದಲ್ಲಿ ಕನ್ನಡದ ಧ್ವನಿಯಾಗುವಂತಹ ಸಂಸ್ಥೆಯೊಂದನ್ನು ಕಟ್ಟಲು ಸತತ ಮೂರು ವರ್ಷಗಳವರೆಗೆ ಪರಿಶ್ರಮಪಟ್ಟ ರಾ.ಹ. ದೇಶಪಾಂಡೆಯವರು 1890ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಅದರ ಪ್ರಥಮ ಕಾರ್ಯದರ್ಶಿಯಾದರು. ಮೊದಮೊದಲು ಪತ್ರವ್ಯವಹಾರಗಳಲ್ಲೆಲ್ಲ "ಕನ್ನಡ ಬೆಳೆಯಲಿ" ಎನ್ನುವ ಘೋಷ ವಾಕ್ಯವನ್ನು ಬರೆಯುತ್ತಿದ್ದ ಇವರು "ಸಿರಿಗನ್ನಡಂ ಗೆಲ್ಗೆ" ಎನ್ನುವ ಘೋಷವಾಕ್ಯವನ್ನು 1893ರಲ್ಲಿ ಬಳಸಲು ಪ್ರಾರಂಭಿಸಿದರು. ನಂತರ ಈ ಘೋಷವಾಕ್ಯದಿಂದ ಪ್ರಭಾವಿತರಾದ ಬಿ.ಎಮ್. ಶ್ರೀಕಂಠಯ್ಯ ಅವರೂ ಇದನ್ನು ತಾವೂ ಬಳಸಿ ಜನಪ್ರಿಯಗೊಳಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು 1907ರಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಮೊಟ್ಟ ಮೊದಲ ಬಾರಿಗೆ ಸಂಘಟಿಸಿತು. ಈ ಮೂಲಕ ಉತ್ತರ ಕರ್ನಾಟಕದಲ್ಲಿ ಕನ್ನಡವನ್ನು ಪುನರುಜ್ಜೀವನಗೊಳಿಸಲು ಅವರ ಪರಿಶ್ರಮವು ಅಮೂಲ್ಯವಾದುದಾಗಿದೆ. ಕನ್ನಡ ಭಾಷಾ ಅಭಿವೃದ್ಧಿಗಾಗಿ 1915 ಮೇನಲ್ಲಿ ಕನ್ನಡ ಲೇಖಕರ ಸಂಘವೊಂದನ್ನು ಕಟ್ಟುವ ಸಲಹೆಯನ್ನಿತ್ತರು. ಮರು ವರ್ಷವೇ ಮೈಸೂರು ಸರಕಾರದವರು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಸಂವಿಧಾನ ರಚಿಸುವ ಉಪಸಮಿತಿಯಲ್ಲಿ ಪ್ರಧಾನ ಪಾತ್ರ ವಹಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಪರಿಶ್ರಮಪಟ್ಟವರಲ್ಲಿ ಅಗ್ರಪಂಕ್ತಿಯಲ್ಲಿ ರಾ.ಹ.ದೇಶಪಾಂಡೆಯವರಿದ್ದಾರೆ.



ಸಾಹಿತ್ಯಿಕವಾಗಿ ರಾ.ಹ.ದೇಶಪಾಂಡೆ ಅವರು ಬಾಲಕರಿಗೆ ಹಾಗು ತರುಣರಿಗೆ ಅವಶ್ಯಕವಿರುವ ಸುಮಾರು 30 ಚರಿತ್ರಗ್ರಂಥಗಳನ್ನೂ, ಪಠ್ಯಗಳನ್ನೂ 'ಚೈತನ್ಯ ಚರಿತ್ರೆ', 'ಗ್ರೇಟ್ ಬ್ರಿಟನ್ ಅಯರ್ಲ್ಯಾಂಡ ದೇಶಗಳ ಸಂಕ್ಷಿಪ್ತ ವರ್ಣನೆ', 'ಚರಿತ್ರ ಸಂಗ್ರಹ', 'ಅಕ್ಬರ ಚಕ್ರವರ್ತಿಯ ಚರಿತ್ರೆ', 'ಮೊಗಲ ಬಾದಶಾಹಿ', ಭರತ ಖಂಡದ ಧರ್ಮಸ್ಥಾಪಕರೂ ಧರ್ಮಸುಧಾರಕರೂ', 'ಬಾಯಿಲೆಕ್ಕದ ಮೊದಲನೆಯ ಪುಸ್ತಕ', ಕಥೆಗಳನ್ನೊಳಗೊಂಡ 'ಬೀರಬಲ್ಲನ ಚರಿತ್ರೆ' (ಪೂರ್ವಾರ್ಧ), 'ಛತ್ರಪತಿ ಶಿವಾಜಿ ಮಹಾರಾಜ' ಮತ್ತು 'ಕರ್ನಾಟಕ ಸಾಮ್ರಾಜ್ಯ' (3 ಸಂಪುಟಗಳು) ಹಾಗೂ ಇನ್ನಿತರ ಕೃತಿಗಳನ್ನು ರಚಿಸಿದ್ದಾರೆ.

ಮೈಸೂರಿನಿಂದ ಧಾರವಾಡಕ್ಕೆ ಬರುತ್ತಿದ್ದ ಅನೇಕ ಸಾಹಿತಿಗಳಿಗೆ ದೇಶಪಾಂಡೆಯವರ ಮನೆ ಅತಿಥಿಗೃಹವಾಗಿತ್ತು. ಬಾಲ ಗಂಗಾಧರ ತಿಲಕ ಹಾಗು ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾದ ದೇಶಪಾಂಡೆಯವರು ಖಾದಿ ಹಾಗು ಸ್ವದೇಶಿ ವ್ರತವನ್ನು ಅಖಂಡವಾಗಿ ಪಾಲಿಸಿದರು. ಅವರ ವ್ಯಕ್ತಿತ್ವದ ಅತ್ಯಂತ ಪ್ರಮುಖ ಗುಣ ಅವರ ಕನ್ನಡಪ್ರೇಮ. ಕನ್ನಡ ಪುಸ್ತಕಗಳ ಮಾರಾಟದ ಉದ್ದೇಶದಿಂದ, ತಮ್ಮ ವಿಜ್ಞಾನ ಪದವೀಧರ ಮಗನನ್ನು ಉಪನ್ಯಾಸಕ ಹುದ್ದೆಗೆ ಹೋಗಗೊಡದೆ, ತಮ್ಮ ಮನೆಯ "ಶಂಕರ ಪುಸ್ತಕ ಭಂಡಾರ"ದಲ್ಲಿ ತೊಡಗಿಸಿದ್ದರು.

ನಾಡೋಜ ಪಾಟೀಲ ಪುಟ್ಟಪ್ಪನವರು ಹೇಳುವಂತೆ "ರಾ.ಹ. ದೇಶಪಾಂಡೆ ಅವರು ತಮ್ಮ ಕನ್ನಡ ಹಾಗೂ ಕರ್ನಾಟಕಗಳ ಅಭಿಮಾನಕ್ಕೋಸುಗ ಮುಂಬಯಿ ಸರಕಾರದಿಂದ ದಂಡನೆಗೆ ಒಳಗಾಗಿದ್ದರು. ಶಿಕ್ಷಣ ಇಲಾಖೆಯ ನಿರ್ದೇಶಕರಾಗುವುದಕ್ಕೆ ಬದಲಾಗಿ ಹೈಸ್ಕೂಲ್ ಹೆಡ್ ಮಾಸ್ತರ ಆಗಿ ನಿವೃತ್ತರಾದರು. ರಾ.ಹ.ದೇ. ತಮ್ಮ ಜೀವನದುದ್ದಕ್ಕೂ ನಿರ್ಮಲ, ನೈತಿಕ ವೈಭವ ಮೆರೆದರು. ಅಸಾಮಾನ್ಯ ಧೈರ್ಯ ಸ್ಥೈರ್ಯಗಳಿಂದ ಕನ್ನಡದ ಪರವಾಗಿ ಧ್ವನಿ ಹಾಗೂ ಧ್ವಜ ಎತ್ತಿ ಹಿಡಿದರು. ಕನ್ನಡಾಂಬೆಯ ಏಳ್ಗೆಗಾಗಿ ಕನ್ನಡದ ಗುಡಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಪೋಷಿಸಿದರು. ನಾಡ ಪ್ರೇಮದ ಜೊತೆಗೆ ರಾಷ್ಟ್ರಪ್ರೇಮವನ್ನು ನಾಡವರ ಹೃದಯದಲ್ಲಿ ನೆಟ್ಟರು. ಪ್ರಖ್ಯಾತಿಗೆ, ಪ್ರಲೋಭನೆಗೆ, ಪದವಿಗೆ ತಡಕಾಡದೆ ಆಸೆ ಮಾಡದೆ ಕನ್ನಡಿಗರ ಆಳುಮಗನಾಗಿ ಅಪಾರ ಸೇವೆ ಸಲ್ಲಿಸಿದರು."

ಹೆಮ್ಮೆಯ ಕನ್ನಡಿಗ : ಕಡಲತೀರದ ಭಾರ್ಗವ ಶಿವರಾಮ ಕಾರಂತ
(10.10.1902 – 09.12.2021)

– ಮಹೇಶ್

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

"ಕಡಲತೀರದ ಭಾರ್ಗವ", "ನಡೆದಾಡುವ ವಿಶ್ವಕೋಶ" ಎಂದೇ ಖ್ಯಾತರಾಗಿದ್ದ ಕನ್ನಡ ಸಾಹಿತ್ಯ-ಸಂಸ್ಕೃತಿಯ ವಕ್ತಾರ, ಕವಿ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರೇ ಶಿವರಾಮ ಕಾರಂತರಾಗಿದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ. ಹಾಗೆಯೇ ಕಾರಂತರು ಬರೆಯದ ಸಾಹಿತ್ಯ ಪ್ರಕಾರವೇ ಇಲ್ಲವೆನ್ನಲಾಗಿದೆ. ಡಾ. ಶಿವರಾಮ ಕಾರಂತರು ಶೇಷ ಕಾರಂತರು ಮತ್ತು ತಾಯಿ ಲಕ್ಷ್ಮೀ ಕಾರಂತರ ಮಗನಾಗಿ ಉಡುಪಿ ಜಿಲ್ಲೆಯಲ್ಲಿ ಜನಿಸಿದರು. ಜೀವಿತಾವಧಿಯಲ್ಲಿ ಸುಮಾರು 427 ಪುಸ್ತಕಗಳನ್ನು ರಚಿಸಿದರು. ಅವುಗಳಲ್ಲಿ ಕಾದಂಬರಿಗಳು 47. 96ನೆಯ ವಯಸ್ಸಿನಲ್ಲಿ ಬರೆದ ಹಕ್ಕಿಗಳು ವಿಶ್ವ ದಾಖಲೆಯಾಗಿದೆ. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸುತ್ತಾ ಹಲವು ಹೊಸ ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು, ಬ್ಯಾಲೆಯಲ್ಲೂ ಗಂಭೀರ ಪ್ರಯೋಗಗಳನ್ನು ಮಾಡಿದ್ದರು.

ಯುವಕರಾಗಿದ್ದಾಗ, ಸಮಾಜ ಸುಧಾರಣೆಯಲ್ಲಿ ತೊಡಗಿದ್ದು, ವೇಶ್ಯೆಯರನ್ನು, ವೇಶ್ಯಾವೃತ್ತಿಯಿಂದ ವಿಮುಕ್ತರಾಗಲು ಪ್ರೇರೇಪಿಸಿ ವಿವಾಹಗಳನ್ನು ಮಾಡಿಸಿದ್ದರು. ಯಕ್ಷಗಾನ ತಂಡಗಳನ್ನು ಕಟ್ಟಿಕೊಂಡು ದೇಶ ವಿದೇಶಗಳಲ್ಲಿ ಈ ಕಲೆಯನ್ನು ಪ್ರಚುರಪಡಿಸಲು ಯತ್ನಿಸಿದರು. ಮಕ್ಕಳಲ್ಲಿದ್ದ ಪ್ರತಿಭೆ ಅರಳಿಸಲು ಪುತ್ತೂರಿನಲ್ಲಿ 'ಬಾಲವನ'ವೆಂಬ ಶೈಕ್ಷಣಿಕ ಕೇಂದ್ರವನ್ನು ತೆರೆದಿದ್ದರು. ಪುತ್ತೂರಿನಲ್ಲಿ ಮುದ್ರಣಾಲಯ ತೆರೆದು, ತಮ್ಮ ಪುಸ್ತಕಗಳನ್ನು ಮುದ್ರಿಸುತ್ತಿದ್ದರಲ್ಲದೆ, ತಮ್ಮ ಹಲವು ಕಾದಂಬರಿಗಳಿಗೆ ತಾವೇ ಮುಖಪುಟದ ಚಿತ್ರಗಳನ್ನೂ ಬರೆದ ಬಹುಮುಖ ಪ್ರತಿಭೆ ಇವರಾಗಿದ್ದಾರೆ. ಬಹುಶಃ ಮುಖಪುಟ ಚಿತ್ರ ಬರೆದು ಪ್ರಕಟಿಸಿದ ಕನ್ನಡದ ಪ್ರಥಮ ಸಾಹಿತಿ ಇವರೊಬ್ಬರೇ ಎನ್ನಬಹುದು.

ನಿರಂತರ ಪ್ರಯೋಗಶೀಲರಾಗಿದ್ದ ಕಾರಂತರು ಕನ್ನಡ ಚಿತ್ರರಂಗದಲ್ಲಿ ಹಲವು ಪ್ರಯೋಗಗಳನ್ನು ಆರಂಭ ಮಾಡಿದ್ದು. ಮೂಕಿ ಚಿತ್ರ ಹರಿಜನರ ಬದುಕನ್ನು ಆಧರಿಸಿದ್ದ ಡೊಮಿಂಗೋ ಚಿತ್ರವನ್ನು ತಾವೇ ಚಿತ್ರೀಕರಿಸಿ, ಅಭಿನಯಿಸಿ ನಿರ್ದೇಶಿಸಿದ್ದರು. ಅನಂತರ ಭೂತರಾಜ್ಯ ಎಂಬ ಮೂಕಿ ಚಿತ್ರವನ್ನೂ ಸಹ ನಿರ್ಮಿಸಿದರು.

ಕಾರಂತರ ಕಾದಂಬರಿಗಳಲ್ಲಿ ಪರಿಸರದ ಚಿತ್ರಣ ಗಾಢವಾಗಿದೆ. ನಿಜ ಜೀವನದಲ್ಲೂ ಪರಿಸರದ ಉಳಿವಿಗೆ ಹೋರಾಡಿದ ಕಾರಂತರು, ಕೈಗಾ ಅಣುವಿದ್ಯುತ್ ಸ್ಥಾವರದ ವಿರುದ್ಧ ಹೋರಾಟಕ್ಕೆ ನಾಯಕತ್ವ ವಹಿಸಿರುವುದು ಉಲ್ಲೇಖಾರ್ಹವಾಗಿದೆ. ಮಕ್ಕಳಿಂದ, ವಯೋವೃದ್ಧರವರೆಗೂ ಚಿಂತಿಸಿದ ಕಾರಂತರು ವಯಸ್ಸಿನ ದಣಿವು ಮರೆತು, ಜ್ಞಾನದಾರಿಯಲ್ಲಿ ಕೊಂಡೊಯ್ದ ಪ್ರೀತಿಯ "ಕಾರಂತಜ್ಜ" ಆಗಿದ್ದರು. ವಿಶ್ವ ಪ್ರೇಮಿ ಹಾಗೂ ಮಹಾನ್ ಮಾನವತಾವಾಗಿದ್ದ ಕಾರಂತರು ಜ್ಞಾನ ಕ್ಷಿತಿಜವನ್ನು ಎಂಟು ದಿಕ್ಕಿಗೆ ಚಾಚಿದ ಅಕ್ಷರ ಪ್ರೇಮಿಯಾಗಿದ್ದರು. ಡಾ. ಕಾರಂತರ ಹುಟ್ಟೂರಾದ ಸಾಲಿಗ್ರಾಮದಲ್ಲಿ (ಉಡುಪಿ ಜಿಲ್ಲೆ), "ಕಾರಂತ ಸ್ಮೃತಿಚಿತ್ರ ಶಾಲೆ"ಯು ಕಾರಂತರ ವಸ್ತು ಸಂಗ್ರಹಾಲಯವಾಗಿದೆ. ಅವರ ಕಾದಂಬರಿಗಳ ಆಶಯದ ದೊಡ್ಡ ಭಿತ್ತಿ ಚಿತ್ರಗಳು, ಯಕ್ಷಗಾನದ ದಿರಿಸುಗಳು, ಕಾದಂಬರಿಗಳ ಹಳೆಯ ಪ್ರತಿಗಳು, ಕಾರಂತರು ಬರೆದ ಚಿತ್ರಗಳು, ಅವರು ಉಪಯೋಗಿಸುತ್ತಿದ್ದ ಲೇಖನಿ ಮತ್ತಿತರ ವಸ್ತುಗಳನ್ನೊಳಗೊಂಡ ಸುಂದರ ವಸ್ತು ಸಂಗ್ರಹಾಲಯವಿದೆ. ಪರಿಸರಪ್ರೇಮಿ ಕಾರಂತರು ಬಾಲ್ಯದಲ್ಲಿ ಕೆರೆಗಳ ಏರಿ, ಸಮುದ್ರತೀರ, ಮರದ ನೆರಳಿನ ಪ್ರದೇಶಗಳಲ್ಲಿ ಸಮಯವನ್ನು ಕಳೆಯುತ್ತಿದ್ದರು. ಆಧುನಿಕ ವಿದ್ಯಾಭ್ಯಾಸ ಕೇವಲ ಹೊಟ್ಟೆಪಾಡಿಗಾಗಿ, ನಿಜವಾದ ವ್ಯಕ್ತಿತ್ವ ವಿಕಸನವಾದರೆ ಅದೇ ನಿಜವಾದ ಶಿಕ್ಷಣವೆನ್ನುವುದು ಅವರ ಅಭಿಪ್ರಾಯವಾಗಿತ್ತು. 1920ರಲ್ಲಿ ಗಾಂಧೀಜಿ ಅವರು ಸ್ವಾತಂತ್ರ ಹೋರಾಟದಲ್ಲಿ ಶಾಲಾ ಮಕ್ಕಳು ಬಾಗವಹಿಸಬೇಕೆಂದು ಕರೆಕೊಟ್ಟಾಗ ಕಾರಂತರೂ ಚಳವಳಿಯಲ್ಲಿ ಭಾಗವಹಿಸಿದ್ದರು.



ಚಿಕ್ಕಂದಿನಲ್ಲೇ ಶಾಲೆ ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದ ಅವರು ಮುಂದೆ ಎಲ್ಲ ಜ್ಞಾನಶಾಖೆಗಳಲ್ಲೂ ಆಸಕ್ತಿ ಬೆಳೆಸಿಕೊಂಡು, ಸ್ವಂತವಾಗಿ ಕಲಿತದ್ದನ್ನು ಸರಳವಾದ ಕನ್ನಡದಲ್ಲಿ ಮಾತನಾಡಿದ್ದು, ಬರೆದದ್ದು ಈಗ ದಾಖಲೆಯಾಗಿದೆ. ಸಾಹಿತ್ಯ, ರಂಗಭೂಮಿ, ಚಲನಚಿತ್ರ, ವಿಜ್ಞಾನ, ಚಿತ್ರಕಲೆ, ಸಂಗೀತ, ಶಿಕ್ಷಣ, ರಾಜಕೀಯ, ಪತ್ರಿಕೋದ್ಯಮ, ಭಾಷೆ, ಸಂಸ್ಕೃತಿ ಹೀಗೆ ಪಟ್ಟಿ ಬೆಳೆಯುತ್ತದೆ. ಕಾರಂತರು ' ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ' ಹಾಗೂ ಸಿರಿಗನ್ನಡ ಅರ್ಥಕೋಶವನ್ನು ರಚಿಸಿದ್ದಾರೆ. ಶಿಲ್ಪಕಲೆ, ಚಿತ್ರಕಲೆ ಕುರಿತ ಪುಸ್ತಕಗಳನ್ನು ಬರೆದಿದ್ದಾರೆ, ಚಲನಚಿತ್ರ ನಿರ್ಮಿಸಿದ್ದಾರೆ. ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾರೆ.

ಇವರಿಗೆ ಹಲವಾರು ವಿಶ್ವವಿದ್ಯಾಲಯುಗಳ ಗೌರವ ಡಾಕ್ಟರೇಟುಗಳು, ಜ್ಞಾನಪೀಠ ಪ್ರಶಸ್ತಿಯೂ ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳು ಸಂದಿವೆ. ಅಸಂಖ್ಯ ಗೋಷ್ಠಿಗಳ, ಸಮ್ಮೇಳನಗಳ ಅಧ್ಯಕ್ಷ ಪಟ್ಟಗಳು, ಸನ್ಮಾನಗಳು ಕಾರಂತರನ್ನು ಹುಡುಕಿಕೊಂಡು ಬಂದಿವೆ. ತುರ್ತುಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ಅವರ ಸರ್ವಾಧಿಕಾರವನ್ನು ಧಿಕ್ಕರಿಸಿ ಕಾರಂತರು ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

"ನನಗೆ ಒಂದಿಷ್ಟು ಜರೂರೀ ಕೆಲಸ ಇದೆ. ಎರಡು ನಿಮಿಷಗಳಿಗಿಂತ ಹೆಚ್ಚು ಬೇಕಿಲ್ಲ" ಎಂದೆ. "ಒಳ್ಳೆಯದು, ಹಾಗಾದರೆ ಎರಡು ನಿಮಿಷ ಮಾತ್ರ ಒಳಗೆ ಹೋಗು" ಎಂದರು. ನಾನೂ ಹೆಚ್ಚಿನ ವೇಳೆ ತೆಗೆದುಕೊಳ್ಳಲಿಕ್ಕಿಲ್ಲ ಎಂದು ಆಶ್ವಾಸನೆ ಕೊಟ್ಟೆ. ಅವರ ಹೃದಯವು ಕರಗಿತ್ತು. ನನ್ನ ಮೇಲೆ ಅವರಿಗೆ ಅಷ್ಟೊಂದು ವಿಶ್ವಾಸವೂ ಇದ್ದಿರಬಹುದು. ಅವರು ನನಗೆ ಗಾಂಧಿ ಅವರ ಬಳಿಗೆ ಹೋಗಲು ಬಿಟ್ಟರು. ಎರಡೇ ನಿಮಿಷದಲ್ಲಿ ನಾನು ಹೊರಗೆ ಬರುತ್ತಿರುವುದು ಕಂಡು ಕಸ್ತೂರ್‌ಬಾ ತುಂಬ ಸಂತುಷ್ಟರಾದರು. ತುಂಬಾ ಪ್ರೇಮದಿಂದ ನನ್ನನ್ನು ಬೀಳ್ಕೊಟ್ಟರು. "ಇಷ್ಟೊಂದು ಮಳೆ ಹಾಗೂ ಕೆಸರಿನಲ್ಲಿ ಹೇಗೆ ಬಂದಿ? ಕತ್ತಲೆಯಾಗುವ ಮೊದಲೇ ವಾರ್ಧಾಕ್ಕೆ ಮುಟ್ಟಲು ನಿನ್ನಿಂದ ಸಾಧ್ಯವೇ?" ಎಂದೆಲ್ಲ ಕೇಳಿದರು. ಅವರಿಗೆ ನಿಶ್ಚಿಂತರಾಗಿರಲು ಹೇಳಿ ನಾನು ಅಲ್ಲಿಂದ ಹೊರಟೆ. ಸೇವಾಗ್ರಾಮಕ್ಕೆ ಹೋಗುತ್ತಲೇ ನಾನು ಯಾವಾಗಲೂ ಸ್ನಾನ ಮಾಡಿ ಕಸ್ತೂರ್‌ಬಾ ಅವರ ಪ್ರೇಮದ ಸ್ವಾಗತ ಪಡೆಯಲಿಕ್ಕೆ ಕುಟೀರಕ್ಕೆ ಹೋಗುತ್ತಿದ್ದೆ. ಹೊರಗೆ ಹೋಗುವಾಗಲೂ ಅವರಿಂದ ಆದೇಶ ತೆಗೆದುಕೊಳ್ಳುತ್ತಿದ್ದೆ. 1941ರಲ್ಲಿ ಅನಾರೋಗ್ಯದ ಮೂಲಕ ನಾನು ಸೇವಾಗ್ರಾಮ ಬಿಟ್ಟು ಬೇರೊಂದು ಕ್ಷೇತ್ರಕ್ಕೆ ಹೋಗಬೇಕಾಗಿ ಬಂತು. ಆಗ ಕಸ್ತೂರ್‌ಬಾ ಅವರು ತುಂಬಾ ಪ್ರೀತಿ ಹಾಗೂ ಚಿಂತೆಯಿಂದ ನನಗೆ ಆರೋಗ್ಯ ವಿಷಯದಲ್ಲಿ ಮುಂಜಾಗ್ರತೆ ಕೊಟ್ಟರು. ಮತ್ತು ಆಗಾಗ ಬಂದು ಹೋಗುತ್ತಲಿರಲು ತಿಳಿಸಿದರು. ಆದರೆ ಅದೇ ಕಸ್ತೂರ್‌ಬಾ ಅವರ ಕೊನೆಯ ದರ್ಶನ ಹಾಗೂ ಆದೇಶವೆಂಬ ಕಲ್ಪನೆಯೂ ನನಗಿರಲಿಲ್ಲ.

1944ರಲ್ಲಿ ನಾನು ಅಲ್ಮೋಡಾ ಜೈಲಿನಲ್ಲಿ ಇದ್ದಾಗ ಆಗಖಾನ್ ಮಹಲಿನಲ್ಲಿ ಕಸ್ತೂರ್‌ಬಾ ಅವರ ಆರೋಗ್ಯ ಕೆಡುತ್ತಲಿದೆ ಎಂಬ ಸಮಾಚಾರ ಓದಿದೆ. ಮತ್ತು ಕೊನೆಗೆ ಫೆಬ್ರವರಿ 22ಕ್ಕೆ ಅವರು ತೀರಿಕೊಂಡ ಸುದ್ದಿಯನ್ನೂ ಓದಿದೆ. ಗಾಂಧಿ ಅವರು ನೂರಾರು ಇನ್ನಿತರ ಸಂಗಡಿಗರಂತೆ ನನಗೂ ಅಂದೇ ಜೈಲಿನಲ್ಲಿ ತಾಯಿಯನ್ನು ಕಳೆದುಕೊಂಡಂತೆ ಅನಿಸಿತು. ಕಸ್ತೂರ್‌ಬಾ ಅವರ ಸಾಹಸ, ದೃಢತೆ ಮತ್ತು ತಾಳ್ಮೆ ಮೊದಲನೆಯ ಸತ್ಯಾಗ್ರಹ ದಕ್ಷಿಣ ಆಫ್ರಿಕದ



ಕಾಯಿದೆಯಂತೆ ಆಗದ ವಿವಾಹಗಳನ್ನು ಕಾಯಿದೆಬದ್ಧವೆಂದು ತಿಳಿಯಲಾಗಲಿಕ್ಕಿಲ್ಲ ಎಂಬುದಾಗಿ ಅಲ್ಲಿನ ಸರಕಾರವು ಶಾಸನ ಮಾಡಿತ್ತು. ಅರ್ಥಾತ್ ಭಾರತೀಯ ಸಂಸ್ಕೃತಿಯ ಪರಂಪರೆಗೆ ಅನುಸರಿಸಿ ಆದ ವಿವಾಹಗಳಿಗೆ ಸರಕಾರದ ಮಾನ್ಯತೆ ಸಿಗಲಾರದು ಎಂದು ಇತ್ತು. ಇದು ನಮ್ಮ ಭಗಿನಿಯರಿಗೊಂದು ದೊಡ್ಡ ಅಪಮಾನವೆನಿಸಿತ್ತು. ಇದನ್ನು ಪ್ರತಿಭಟಿಸಿ ಸತ್ಯಾಗ್ರಹ ನಡಿಸಲೇಬೇಕೆಂದು ಗಾಂಧಿ ಅವರು ನಿರ್ಧರಿಸಿದರು. ಇದು ಹೆಣ್ಣು ಮಕ್ಕಳಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ಗಾಂಧಿ ಅವರು ಆಶ್ರಮದಲ್ಲಿದ್ದ ಯಾವತ್ತು ಭಗಿನಿಯರಿಗೆ ಈ ಸತ್ಯಾಗ್ರಹದಲ್ಲಿ ಧುಮುಕಲು ಆಹ್ವಾನಿಸಿದರು. ಅವರೆಲ್ಲರೂ ಒಪ್ಪಿದರು. ಆದರೆ ಗಾಂಧಿ ಅವರು ಈ ಯಾವ ವಿಷಯವನ್ನೂ ಕಸ್ತೂರ್‌ಬಾ ಅವರಿಗೆ ತಿಳಿಸಿರಲಿಲ್ಲ. ಆದ್ದರಿಂದ ಅವರು ಬಹಳ ನೊಂದುಕೊಂಡರು. ಎಲ್ಲ ಭಗಿನಿಯರು ಗಾಂಧಿ ಅವರ ಜೊತೆಯಲ್ಲಿ ಸತ್ಯಾಗ್ರಹಕ್ಕೆ ಹೊರಡಲು ತಯಾರಾದಾಗ ಕಸ್ತೂರ್‌ಬಾರಿಂದ ಸುಮ್ಮನಿರಲಾಗಲಿಲ್ಲ ನಿರೋಪಕೊಡುವ ಹೊತ್ತಿನಲ್ಲಿ ಅವರು ಗಾಂಧಿ ಅವರ ಮುಂದೆ ನಿಂತು ನೀರೂರಿದ ಕಣ್ಣಿನಿಂದ ಕೇಳಿದರು. "ನನ್ನಲ್ಲಿ ಯಾವ ದುರ್ಬಲತೆಯನ್ನು ಕಂಡು ನನಗೆ ಸತ್ಯಾಗ್ರಹದಲ್ಲಿ ಸೇರಲು ತಿಳಿಸಲಿಲ್ಲ ಎಂಬುದನಿಷ್ಟು ದಯಮಾಡಿ ತಿಳಿಸಿ."ಅವರಿಗೆ ಗಾಂಧಿ ಅವರು ಉತ್ತರ ಕೊಟ್ಟರು. "ನಿನ್ನಲ್ಲಿ ಯಾವುದೇ ದೌರ್ಬಲ್ಯ ಇಲ್ಲ. ಆದರೆ ಭಗಿನಿಯರೆಲ್ಲ ನನ್ನ ಮಿತ್ರರು. ಅವರ ಮೇಲೆ ನನ್ನ ಅಧಿಕಾರ ನಡೆಯುತದೆ. ನೀನಾದರೂ ನನ್ನ ಪತ್ನಿ. ನಿನ್ನ ಮೇಲೆ ನನ್ನದೇನೂ ಅಧಿಕಾರ ಇಲ್ಲ. ನೀನು ಅವರ ಜೊತೆಯಲ್ಲಿ ಬರಲು ಇಚ್ಛಿಸುತ್ತಿದ್ದರೆ ಬರಲಿಕ್ಕೆ ಏನೂ ಅಡ್ಡಿಯಿಲ್ಲ. ಆದರೆ ಒಂದು ಸಂಗತಿ ಮಾತ್ರ ನೆನಪಿಡು. ಜೈಲಿನಲ್ಲಿಯ ಕಷ್ಟಗಳಿಗೆ ಹೆದರಿ ನೀನು ಸರಕಾರದ ಹತ್ತಿರ ಕ್ಷಮೆ ಬೇಡಿ ಹೊರಗೆ ಬಂದರೆ ನಿನ್ನ ಅಪಕೀರ್ತಿಯಷ್ಟೇ ಅಲ್ಲ. ನನ್ನ ಅಪಕೀರ್ತಿಯೂ ಆದೀತು. ಎಂದರು.

ಮುಂದುವರಿಯುವುದು....

ಫಿರಂಗಿ ಗಾಡಿ



1942ರ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ 5 ಅಡಿ ಉದ್ದ ಹಾಗೂ 4 ಅಡಿ ಅಗಲದ ಸುಸಜ್ಜಿತ ಫಿರಂಗಿ ಗಾಡಿಯನ್ನು ನೀವು ಈಗಿನ ದಾವಣಗೆರೆ ಕಾರ್ಪೊರೇಷನ್ ಕಚೇ–ರಿಯ ಆವರಣದಲ್ಲಿ ಕಾಣಬಹುದು! ಫಿರಂಗಿ ಈಗಲೂ ಹೊಸದರಂತೆ ಕಾಣುತ್ತಿದ್ದು ನೋಡಲು ನಿಜಕ್ಕೂ ಹೆಮ್ಮೆಯೆನಿಸುತ್ತದೆ. ಆದರೆ ಈ ಫಿರಂಗಿ ಗಾಡಿಯ ಬಗ್ಗೆ ಪುರಾತತ್ವ ಇಲಾಖೆಯವರು ಹೆಚ್ಚಿನ ಮಾಹಿತಿ ಒದಗಿಸುವ ಫಲಕ ಹಾಕಿದರೆ, ಸಂಶೋಧನಾ ವಿದ್ಯಾರ್ಥಿಗಳಿಗೂ ಹಾಗೂ ಆಸಕ್ತರಿಗೂ ಹೆಚ್ಚಿನ ಮಾಹಿತಿ ದೊರಕುತ್ತದೆ.

ಸೌಜನ್ಯ : ಕರ್ಮವೀರ – ಸಂಗ್ರಹ : ಅಖಿಲಾ ವಿದ್ಯಾಸಂದ್ರ

The Mahatma by the River - Sarvodaya Mela

Varsha Gowda



Seventy-two years ago, while the nation was freshly mourning the loss of Mahatma Gandhi, his ashes were being transported across the nation to be immersed in India's most sacred rivers. In Karnataka, his mortal remains were dispersed at Paschima Vahini, a pious section of River Cauvery at Srirangapatna. Thousands of followers gathered on the river bank to pay respects to the stalwart. HSDoreswamy, 102-year-old freedom fighter, recalls how, in February 1948, the villages near by thronged a building at Paschima Vahini that the Wadiyar family lent to the Sarvodaya karyakartas to celebrate Gandhi's life. Since then, Sarvodaya workers have been organising a mela annually, in the second week of February, to celebrate the life and teachings of Mahatma Gandhi. "The word Sarvodaya means 'progress for all' and that is the intention of the mela, "Doreswamy explains, adding that Gandhi was not just a freedom fighter but also, primarily, a social worker. "His intention was not just to acquire freedom. According to him, poorna swaraj meant the upliftment of all people. So, we apply this principle to the current sociopolitical situation and have discussions based on policy and the freedom strug gle," he says.

PARTICIPATION


Since Dr Bandi Gowda started organising the mela in the 1960s, the villages around have been actively involved in it. "Most events are attended by the villagers. They also cook food for the attendees out of respect for Gandhiji," says Doreswamy. G. Made Gowda, 78, an ex-MLC from the area, says the villages Kumbarakoppalu and Somawar apete have been organising breakfast for the attendees on the first day of the event since the early 1980s. "It is not a lot of money compared to the satisfac tion that you will get out of contributing to a good cause," he adds. Each year, a senior Sarvodaya karyakarta is chosen to head the three-day event and will speak about the teachings and life of Gandhi. In a show of solidarity for Gandhi's love for handspun khadi, he or she will lead close to 100 karyakartas in the spinning of the charkha. The thread spun will be offered to god. A khadi exhibition is also organised to support artisans.

ROOT PROBLEM

"The problem is with what children have been taught in schools and at home. For them development only has an economic dimension; the social and spiritual dimensions are non-existent. As a result, 'progress for all' is a principle that not many people think too much of. Gandhian activism is dying a slow death," points out Santosh Koulagi, a Gandhian and an activist from Melukote. "Because of this, the youth will not take events like this forward," Koulagi adds. "Such events are important," Doreswamy argues. "Gandhi was also a symbol of exhaustive, well-intentioned discussions. One cannot become a follower of Gandhi merely by invoking his name.

Courtecy : Deccan Herald : 15.02.2020
Collection by Dr. V. Prashanta

ಗರೋಡಿಯಲ್ಲಿ ಗಾಂಧಿ ಪೂಜೆ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನಿಂದ ಬಂಟ್ವಾಳಕ್ಕೆ ಹೋಗುವ ಮಾರ್ಗದಲ್ಲಿ ಕಂಕವಾಡಿ ಎಂಬಲ್ಲಿ ಕೋಟೆ ಚೆನ್ನಯ್ಯ ಸಹೋ ಸಹೋದರರ ಬ್ರಹ್ಮಬೈದರ್ಕಳ ಗರಡಿ ಕ್ಷೇತ್ರವಿದೆ. ಇದರ ಆವರಣದಲ್ಲಿ ಮಹಾತ್ಮಗಾಂಧೀಜಿ ಅವರ ಅಮೃತಶಿಲೆಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಬಳಿ ಪ್ರತೀ ದಿನ ದೀಪಹಚ್ಚಿ ಹೂಗಳನ್ನಿಟ್ಟು ಆರತಿ ಬೆಳಗುವ ಕ್ರಮವನ್ನು ಇಲ್ಲಿಯ ಅರ್ಚಕರು ನಡೆಸಿಕೊಂಡು ಬಂದಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನಾಯಕತ್ವ ವಹಿಸಿ ದೇಶದ ಜನರಿಗೆ ಹುರಿದುಂಬಿಸಿದ ಖಾದಿಧಾರಿಯಾದ ಗುಡಿ ಕೈಗಾರಿಕೆಗೆ ಪ್ರಾಮುಖ್ಯತೆ ಕೊಟ್ಟ ಗಾಂಧೀಜಿ ಅವರಿಗೆ ಸಲ್ಲಿಸುವ ಗೌರವಾಗಿದೆ

ಸೌಜನ್ಯ : ಕರ್ಮವೀರ

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

'ಭಂಗಿ'ಗಳು ಮಾನವ ಮಲವನ್ನು ತಮ್ಮ ತಲೆ ಮೇಲೆ ಬಕೇಟುಗಳಲ್ಲಿ ಹೊತ್ತೊಯ್ಯುವ ದೃಶ್ಯ ಗಾಂಧಿ ಅವರನ್ನು ದುಃಖಕ್ಕೀಡು ಮಾಡಿತ್ತು. ಕೆಲವು ಸೂಕ್ತ ವಿಧಾನಗಳ ಮೂಲಕ ಹೇಗೆ ಸ್ವಚ್ಛತೆ ಕಾಪಾಡಬಹುದು ಎಂಬುದನ್ನು ಅವರು ವಿವರಿಸುತ್ತಿದ್ದರು. ಸ್ವಚ್ಛತಾ ಕಾರ್ಯವೂ ಒಂದು ಕಲೆ ಎಂಬುದನ್ನು ಗಾಂಧಿ ತಮ್ಮನ್ನು ತಾವು ಮಲಿನಗೊಳಿಸಿಕೊಳ್ಳದೇ ತೋರಿಸಿಕೊಟ್ಟರು. ಅವರು ಬರೆಯುತ್ತಾರೆ "ಹಳ್ಳಿಯ ಸ್ವಚ್ಛ ಕೆರೆಯ ನೀರನ್ನು ಸ್ನಾನಕ್ಕೆ, ಬಟ್ಟೆ ಒಗೆಯಲು, ಕುಡಿಯಲು ಮತ್ತು ಅಡುಗೆಗೆ ಬಳಸುತ್ತಾರೆ. ಹಲವು ಕೆರೆಗಳಲ್ಲಿ ಹಸು, ಕರು, ಎಮ್ಮೆಗಳು ಮುಳುಗೇಳುತ್ತವೆ. ಆಶ್ಚರ್ಯಕರ ವಿಷಯವೆಂದರೆ, ಕೆರೆಗಳ ಈ ರೀತಿಯ ದುರ್ಬಳಕೆಯ ನಂತರವೂ ಹಳ್ಳಿಯ ಜನರು ಸಾಂಕ್ರಾಮಿಕ ರೋಗಗಳಿಂದ ಮುಕ್ತರಾಗಿರುವುದು!. ವೈದ್ಯಕೀಯ ಸಾಕ್ಷಿಗಳು ಸ್ವಚ್ಛ ಕುಡಿಯುವ ನೀರಿನ ಪೂರೈಕೆಯ ಕೊರತೆಯೇ ಹಲವು ಕಾಯಿಲೆಗಳಿಗೆ ಕಾರಣ ಎಂದು ಹೇಳುತ್ತವೆ. ವಿಶ್ವ ಆರೋಗ್ಯ ಸಂಸ್ಥೆಯು (WHO) ಭಾರತದ ಸ್ವಚ್ಛ ಭಾರತ ಮಿಶನ್‌ನ ಕಾರ್ಯಕ್ಕೆ ಶ್ಲಾಘನೆಯನ್ನು ವ್ಯಕ್ತಪಡಿಸಿದೆ. "ವಿಶ್ವ ಆರೋಗ್ಯ ಸಂಸ್ಥೆಯು ಸುರಕ್ಷಿತ ನೈರ್ಮಲ್ಯ ಸೇವೆಯನ್ನು ನೀಡುವಲ್ಲಿ ಭಾರತದ ಬದ್ಧತೆಯನ್ನು ಶ್ಲಾಘಿಸುತ್ತದೆ. 2014ರಲ್ಲಿ ದೇಶದಲ್ಲಿ ಆರಂಭವಾದ ಸ್ವಚ್ಛ ಭಾರತ ಮಿಶನ್ ಒಂದು ಉತ್ತಮ ಯೋಜನೆ. ಈ ಯೋಜನೆಯಲ್ಲಿ ಹೇಳಿರುವ ಪ್ರಕಾರ 2019ರ ಅಕ್ಟೋಬರ್‌ಗೆ ಪ್ರತಿಶತ ವ್ಯಾಪ್ತಿಯನ್ನು ಸಾಧಿಸಿದರೆ, ಅತಿಸಾರ ಸಂಬಂಧೀ ಕಾಯಿಲೆ ಹಾಗೂ ಪ್ರೋಟೀನ್ ಎನರ್ಜಿ ಮಾಲ್ ನ್ಯೂಟ್ರಿಷನ್ (PEM) ನಿಂದಾಗುತ್ತಿತ್ತು. ಸುಮಾರು 3,00,000ಸಾವನ್ನು ತಡೆದಂತಾಗುತ್ತದೆ."

ಸ್ವಚ್ಛ ಭಾರತ ಮಿಶನ್ ವೆಬ್‌ಸೈಟ್ ಪ್ರಕಾರ 2018–19ರಲ್ಲಿ ಮನೆ ಬಳಕೆಯ ಶೌಚಾಲಯದ ವ್ಯಾಪ್ತಿಯು 90.14% ಇತ್ತು. ಓರಿಸ್ಸಾ 60.76%, ಬಿಹಾರ 63.32%, ಗೋವಾ 76.22% ಹಾಗೂ ಜಾರ್ಖಂಡ್‌ನಲ್ಲಿ 85.57% ಇತ್ತು. ಖುಷಿಯ ವಿಚಾರ ಎಂದರೆ ಆಂಧ್ರಪ್ರದೇಶ, ಛತ್ತೀಸ್‌ಗಡ್, ಅರುಣಾಚಲ ಪ್ರದೇಶ ರಾಜ್ಯಗಳು 100% ವ್ಯಾಪ್ತಿಯನ್ನು ಪೂರೈಸಿವೆ. ಭಾರತದಲ್ಲಿ ವಾರ್ಷಿಕ 2.64 ಕೋಟಿ ಶಿಶುಗಳು ಜನಿಸುತ್ತಿದ್ದು, 1000ಕ್ಕೆ 34 ಶಿಶುಗಳು ಮರಣ ಹೊಂದುವ 'ಶಿಶು ಮರಣ ಪ್ರಮಾಣ' ದಾಖಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರ 'ಸ್ವಚ್ಛ ಭಾರತ ಮಿಶನ್‌ನ ಪರಿಣಾಮಗಳನ್ನು ಮೌಲ್ಯೀಕರಿಸುವಾಗ ನೈರ್ಮಲ್ಯದ ಸುಧಾರಣೆಯಿಂದಾದ ಆರೋಗ್ಯದ ಲಾಭಗಳನ್ನು ಮಾತ್ರ ಪರಿಗಣಿಸಲಾಗಿದೆ. ಆದರೆ ಈ ಯೋಜನೆಯಿಂದ ವೈಯಕ್ತಿಕ ನೈರ್ಮಲ್ಯದಲ್ಲಿ ಬದಲಾವಣೆ ಹಾಗೂ ಸುರಕ್ಷಿತ ಕುಡಿಯುವ ನೀರಿನ ಸೇವನೆ ಮೂಲಕ ಮತ್ತಷ್ಟು ಹೆಚ್ಚುವರಿ ಆರೋಗ್ಯದ ಲಾಭಗಳಾಗುವ ಸಾಧ್ಯತೆ ಇದೆ. ಶುದ್ಧ ಕುಡಿಯುವ ನೀರಿನ ಪೂರೈಕೆಯಲ್ಲಿ, ನೈರ್ಮಲ್ಯ ಸೇವೆಯಲ್ಲಿ ಮತ್ತು ವೈಯಕ್ತಿಕ ನೈರ್ಮಲ್ಯದಲ್ಲಿ ಸುಧಾರಣೆಯಾದರೆ ಅದು ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ. ಎನ್ನುವುದಕ್ಕೆ ಸಾಕ್ಷಿಗಳಿವೆ. ಪೋಷಕಾಂಶ ಸ್ಥಿತಿ ಮತ್ತು ಅದರ ಲಾಭದಲ್ಲಿ ಏಳಿಗೆ, ಸಾಂಕ್ರಾಮಿಕ ರೋಗಗಳು, ನಿರ್ಲಕ್ಷಿತ ಉಷ್ಣವಲಯದ ಕಾಯಿಲೆಗಳು, ಅತಿಸಾರ, ಉಸಿರಾಟ ಸಂಬಂಧೀ ಸೋಂಕುಗಳ ಪ್ರಮಾಣದಲ್ಲಿ ಇಳಿಕೆ ಇತ್ಯಾದಿ. ಆದ್ದರಿಂದ ಈ ಎಲ್ಲ ಅಂಶಗಳನ್ನು ಪರಿಗಣಿಸಿದರೆ ಸ್ವಚ್ಛ ಭಾರತ ಮಿಶನ್, ಸಾರ್ವಜನಿಕ ಆರೋಗ್ಯದ ಮೇಲೆ ದೊಡ್ಡ ಪ್ರಮಾಣದಲ್ಲಿ ಸಕಾರಾತ್ಮಕ ಪ್ರಭಾವ ಬೀರಿರುವ ಸಾಧ್ಯತೆ ಇದೆ. 2014ರ ಸ್ವಚ್ಛ ಭಾರತ ಮಿಶನ್ ಆರಂಭಕ್ಕೂ ಮುನ್ನ, ಅಸುರಕ್ಷಿತ ನೈರ್ಮಲ್ಯದಿಂದಾಗಿ ವಾರ್ಷಿಕ 199 ಕೋಟಿ ಅತಿಸಾರದ ಪ್ರಕರಣಗಳು ದಾಖಲಾಗುತ್ತಿದ್ದವು. ಈಗ ಇದರ ಪ್ರಮಾಣ ನಿಧಾನವಾಗಿ ಇಳಿಮುಖವಾಗುತ್ತಿದೆ. 2019ರ ಅಕ್ಟೋಬರ್ ವೇಳೆಗೆ ಎಲ್ಲರಿಗೂ ಸುರಕ್ಷಿತ ನೈರ್ಮಲ್ಯ ಸೇವೆ ಲಭ್ಯವಾದರೆ ಈ ಸಮಸ್ಯೆ ಸಂಪೂರ್ಣವಾಗಿ ನಿವಾರಣೆ ಆಗುವ ಸಾಧ್ಯತೆ ಇದೆ.

ವಿಶ್ವ ಬ್ಯಾಂಕ್‌ನ ಅಧ್ಯಯನವೊಂದರ ಪ್ರಕಾರ ಭಾರತದ ಶೇ 40% ರಷ್ಟು ಮಕ್ಕಳು ನೈರ್ಮಲ್ಯದ ಕೊರತೆಯ ಕಾರಣದಿಂದಾಗಿ ದೈಹಿಕವಾಗಿ ಮತ್ತು ಗ್ರಹಿಕಾ ಸಾಮರ್ಥ್ಯದಲ್ಲಿ ಕುಂಠಿತಗೊಂಡಿದ್ದಾರೆ. ನಮ್ಮ ಭವಿಷ್ಯದ ದುಡಿಮೆಯ ಬಲವು, ಇಷ್ಟು ದೊಡ್ಡ ಪ್ರಮಾಣದಲ್ಲಿ ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲಾರದ ಸ್ಥಿತಿಗೆ ತಲುಪಿರುವುದು ಶೋಚನೀಯವೇ ಸರಿ. ನಮ್ಮ ಪ್ರಧಾನಶಕ್ತಿಯಾದ ಮಾನವ ಸಂಪನ್ಮೂಲಕ್ಕೆ ಇದು ಬಹುದೊಡ್ಡ ಆತಂಕದ ವಿಷಯವಾಗಿದೆ. ಈ ಸಮಸ್ಯೆಯ ನಿವಾರಣೆಯು ಅಭಿವೃದ್ಧಿಯ ಮೂಲ ಮಂತ್ರ. ನಾವು ಜಾಗತಿಕವಾಗಿ ಆರ್ಥಿಕ ಸೂಪರ್ ಪವರ್ ಆಗುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕಾದರೆ, ಆದಷ್ಟು ಬೇಗ ಈ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಅನಿವಾರ್ಯ. ವಿಶ್ವ ಬ್ಯಾಂಕಿನ ಮತ್ತೊಂದು ಅಂದಾಜಿನ ಪ್ರಕಾರ ನೈರ್ಮಲ್ಯದ ಕೊರತೆಯು ನಮ್ಮ ಜಿ.ಡಿ.ಪಿ.ಯ ಸುಮಾರು 6 ಪ್ರತಿಶತ ವೆಚ್ಚಕ್ಕೆ ಕಾರಣವಾಗಿದೆ. ನೈರ್ಮಲ್ಯೀಕರಣದಿಂದಾಗುವ ಆರ್ಥಿಕ ಪರಿಣಾಮಗಳ ಬಗ್ಗೆ ಇತ್ತೀಚೆಗೆ ಯುನಿಸೆಫ್ ಒಂದು ವರದಿಯನ್ನು ನೀಡಿತ್ತು. ಆ ವರದಿಯ ಪ್ರಕಾರ ಬಯಲು ಶೌಚದಿಂದ ಮುಕ್ತವಾಗಿರುವ ಹಳ್ಳಿಯ ಪ್ರತಿ ಕುಟುಂಬ, ವಾರ್ಷಿಕ ಸುಮಾರು 50,000 ರೂಪಾಯಿಗಳನ್ನು ಉಳಿಸುತ್ತದೆ. (ವೈದ್ಯಕೀಯ ವೆಚ್ಚ, ಸಮಯದ ಉಳಿತಾಯ ಇತ್ಯಾದಿ) ಜೊತೆಗೆ, ಆ ಹಳ್ಳಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ಸಂಪನ್ಮೂಲ ನಿರ್ವಹಣೆಯ ಮೂಲಕ ಬಹಳ ದೊಡ್ಡ ಪ್ರಮಾಣದಲ್ಲಿ 'ಕಸದಿಂದ ರಸ' ಉತ್ಪಾದಿಸಲು ಸಾಧ್ಯವಿದೆ. ಈ ಅಧ್ಯಯನದ ಪ್ರಕಾರ ನೈರ್ಮಲ್ಯೀಕರಣದಿಂದಾಗಿ ಪ್ರತಿ ಕುಟುಂಬಕ್ಕೆ ದೊರಕುವ ಆರ್ಥಿಕ ಲಾಭ, ಸಂಚಿತ ಬಂಡವಾಳಕ್ಕಿಂತ (ಸರ್ಕಾರಗಳು ಮಾಡುವ ಖರ್ಚು ಹಾಗೂ ಹಣಕಾಸಿನ ಮೂಲಗಳು) 4.7 ಪಟ್ಟು ಹೆಚ್ಚಿದೆ. ನೈರ್ಮಲ್ಯೀಕರಣಕ್ಕೆ ಬಂಡವಾಳ ಹೂಡುವ ವಿಷಯಕ್ಕೆ ಸಂಬಂಧಿಸಿದಂತೆ ಇದು ಅತ್ಯಂತ ಸಂತಸದ ವಿಷಯ.

ಮುಂದುವರಿಯುವುದು...

ನಾಡು ಕಟ್ಟಿದ ನಾಡಪ್ರಭು

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಕೆಲವರು ಇತಿಹಾಸಕಾರರು ಕೆಂಪೇಗೌಡನನ್ನು ಸಾಮಾನ್ಯ ಪಾಳೇಗಾರನೆಂದು ಕರೆದಿದ್ದಾರೆ. ಅಂತಹವರಿಗೆ ಈ ಶಾಸನ ಉತ್ತರವಾಗಬಲ್ಲದು. ಈ ಸಾಮಂತಾಧಿಪತಿಯಾದ ಕೆಂಪೇಗೌಡನಿಗೆ ಪಟ್ಟವಾದ ಕೆಲವೇ ತಿಂಗಳುಗಳಲ್ಲಿ ಸಾಮ್ರಾಟ ಅಚ್ಯುತದೇವರಾಯನು ಯಲಹಂಕ ಮಹಾನಾಡಿಗೆ ಬಂದು ದೇವರುಗಳ ಪ್ರತಿಷ್ಠಾಪನೆಯನ್ನು ಮಾಡಿ ಕೆಂಪೇಗೌಡನಿಗೆ ಆಶೀರ್ವಾದವನ್ನು ಮಾಡಿದ್ದಾನೆ. ಇದರಿಂದ ಸಾಮ್ರಾಟನು ಕೆಂಪೇಗೌಡನ ಮೇಲೆ ಇಟ್ಟಿದ್ದ ವಾತ್ಸಲ್ಯವನ್ನು ತಿಳಿಸುತ್ತದೆ

ಶ್ರೀಮತುರಾಜ ಮಾನ್ಯ ಕೆಂಪೇಗೌಡರು, ಮಠದ ವೀರಪ ದೇವರಿಗೆ ದಯಪಾಲಿಸಿದ ಮಾನ್ಯದ ಹೊಲ. (ಮುಂದಿನ ಭಾಗ ಗೋಚರಿಸುತ್ತಿಲ್ಲ)

ಯಾವುದೇ ಒಂದು ರಾಜ್ಯಕ್ಕೆ ಒಬ್ಬ ವ್ಯಕ್ತಿ ರಾಜನಾಗಿ ಪಟ್ಟಾಭಿಷಿಕ್ತನಾದರೆ ಆ ವ್ಯಕ್ತಿ ದೇವಾಲಯಕ್ಕೆ ಮಠಕ್ಕೆ ಮತ್ತು ಬ್ರಾಹ್ಮಣರಿಗೆ ದಾನ ಕೊಡುವುದು ಸಂಪ್ರದಾಯ. ಅದರಂತೆ ಕ್ರಿಶ. ಸುಮಾರು 1540 ಎಂದು ಅಂದಾಜಿಸಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿಯ ಬಿಸ್ಸನಹಳ್ಳಿ ಗ್ರಾಮದ ಶಾಸನದ ಒಕ್ಕಣೆಯಂತೆ ವಿಜಯನಗರ ಸಾಮ್ರಾಟರಿಂದ ಯಲಹಂಕ ಮಹಾನಾಡಿನ ಸಾಮಂತ ರಾಜ ಎಂದು ಮಾನ್ಯತೆಯನ್ನು ಪಡೆದಿರುವುದರಿಂದ ಕೆಂಪೇಗೌಡನು ಅಭಿಮಾನದಿಂದ ರಾಜಮಾನ್ಯ ಎಂದು ಹೇಳಿಕೊಳ್ಳುತ್ತಾ ಹೆಮ್ಮೆಯಿಂದ ಮಠದ ವೀರಪ್ಪ ದೇವರಿಗೆ ದಾನವನ್ನು ನೀಡಿ ಈ ಮೇಲಿನ ಶಾಸನವನ್ನು ಹಾಕಿಸಿದ್ದಾನೆ. [ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶಾಸನ ಸಂಖ್ಯೆ–18]

ಬೆಂಗಳೂರು ನಗರ ನಿರ್ಮಾಣ ದಕ್ಷಿಣ ಭಾರತದಲ್ಲಿ ಕರ್ನಾಟಕ ಅದರಲ್ಲೂ ಯಲಹಂಕ ಮಹಾನಾಡು ವ್ಯಾಪಾರ ವಹಿವಾಟಿಗೆ ಪ್ರಶಸ್ಥವಾದ ಸ್ಥಳವಾಗಿತ್ತು. ಪೂರ್ವಪಶ್ಚಿಮ ಮತ್ತು ದಕ್ಷಿಣ ಸಮುದ್ರದ ಮೂಲಕ ಹೊರ ದೇಶಗಳೊಂದಿಗೆ ನಡೆಯುತ್ತಿದ್ದ ವ್ಯಾಪಾರದ ಸರಕುಗಳು ಮತ್ತು ಸರಂಜಾಮುಗಳು ಯಲಹಂಕ ಮಹಾನಾಡಿನ ಮೂಲಕವೇ ಹೆಚ್ಚಿನ ಪ್ರಮಾಣದಲ್ಲಿ ರವಾನೆಯಾಗುತ್ತಿದ್ದವು. ಇದರಿಂದ ಸುಂಕದ ರೂಪದಲ್ಲಿ ಬರುತ್ತಿದ್ದ ತೆರಿಗೆಯೂ ಸಹ ಹೆಚ್ಚಿನ ಪ್ರಮಾಣದಲ್ಲಿರುತ್ತಿತ್ತು. ಆದುದರಿಂದ ವ್ಯಾಪಾರಗಾರರಿಗೆ ಇನ್ನು ಹೆಚ್ಚಿನ ಅನುಕೂಲಗಳಾದ ವಸತಿ ಸೌಕರ್ಯಗಳನ್ನು ಒದಗಿಸಿಕೊಡಲು ನಗರ ನಿರ್ಮಾಣವಾಗಬೇಕಿತ್ತು ಅದಕ್ಕಾಗಿ ಒಂದು ಪ್ರಶಸ್ಥವಾದ ಸ್ಥಳದ ಅವಶ್ಯಕತೆ ಇತ್ತು. ಇದಕ್ಕಾಗಿ ನಗರ ನಿರ್ಮಾತೃ ಕೆಂಪೇಗೌಡರು ಆಯ್ಕೆ ಮಾಡಿಕೊಂಡ ಜಾಗದ ವೈಜ್ಞಾನಿಕ ಹಿನ್ನೆಲೆಯು ಪ್ರಶಂಸನಿಯವಾದುದು.

ವಿಜಯನಗರ ಸಾಮ್ರಾಜ್ಯದ ಸಾಮಂತ ದೊರೆಯಾದ ಕೆಂಪೇಗೌಡನು ನೂತನ ನಗರ ನಿರ್ಮಾಣದ ಉದ್ದೇಶವನ್ನು ಸಾಮ್ರಾಟ ಅಚ್ಯುತರಾಯನಿಗೆ ತಿಳಿಸಿ ಅನುಮತಿಯನ್ನು ಪಡೆದುಕೊಂಡನು. ನೂತನ ನಗರ ನಿರ್ಮಾಣದ ವೆಚ್ಚಕ್ಕಾಗಿ

ಸಾಮ್ರಾಟನು ಯಲಹಂಕ ಮಹಾನಾಡಿನ ಹನ್ನೆರಡು ಹೋಬಳಿಗಳಿಂದ ಉತ್ಪತ್ತಿಯಾಗುತ್ತಿದ್ದ ಸಾಮ್ರಾಜ್ಯದ ಭಾಗದ ತೆರಿಗೆ ಹಣವನ್ನು ಯಲಹಂಕ ಮಹಾನಾಡಿಗೆ ಬಿಟ್ಟುಕೊಟ್ಟನು. ಆ ಹೋಬಳಿಗಳು ಈ ಕೆಳಗಿನಂತಿವೆ.

1. ಕಸಬಾ ಹಳೆ ಬೆಂಗಳೂರು
2. ವರ್ತೂರು ಹೋಬಳಿ
3. ಯಲಹಂಕ ನಾಡು
4. ಬೇವೂರು ಹೋಬಳಿ
5. ಹಲಸೂರು ಹೋಬಳಿ
6. ತೆಂಗರ (ಕೆಂಗೇರಿ) ಹೋಬಳಿ
7. ತಲಘಟ್ಟಪುರ ಹೋಬಳಿ
8. ಜಿಗಣಿ ಹೋಬಳಿ
9. ಕುಂಬಳಗೋಡು ಹೋಬಳಿ
10. ಕನ್ನೇಲ್ಲಿ ಹೋಬಳಿ
11. ಬಾಣಾವರ ಹೋಬಳಿ
12. ಹೆಸರುಘಟ್ಟ ಹೋಬಳಿ

ಈ ಹನ್ನೆರಡು ಹೋಬಳಿಗಳಿಂದ ಒಟ್ಟು ಮೂವತ್ತು ಸಾವಿರ ಪಗೋಡಗಳ ಕಂದಾಯ ಬರುತಿತ್ತು. ಕಂದಾಯದ ಉತ್ಪತ್ತಿಯನ್ನು ಯಲಹಂಕ ನಾಡಿಗೆ ಬಿಟ್ಟುಕೊಟ್ಟನು. ಕೆಂಪೇಗೌಡನು ಅದನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು ಎಂದು ಅರ್ಥೈಸಿಕೊಳ್ಳಬೇಕಾಗಿದೆ.

ಮುಂದುವರಿಯುವುದು...

ಆಧಾರಿತ ಕೃತಿ : ಯಲಹಂಕ ನಾಡಪ್ರಭುಗಳು
ಲೇಖಕರು : ಎಚ್.ಎಂ. ಬೋರಯ್ಯ



ಮಾಗಡಿ ಸೋಮೇಶ್ವರ ದೇವಾಲಯದ
ಸಂಕೀರ್ಣದಲ್ಲಿರುವ ಪಾರ್ವತಿ ಅಮ್ಮನವರ ದೇವಾಲಯ



ಮಾಗಡಿ ಸೋಮೇಶ್ವರ ದೇವಾಲಯದ
ಸಂಕೀರ್ಣದೊಳಗಿರುವ ನರ್ತನ ಶಾಲೆ

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗಾಂಜಾ : ಹಲವು ರೂಪಗಳು

ರಾಮಪ್ಪನಿಗೆ ಬುದ್ಧಿಭ್ರಮಣೆ ಆಗಿದೆಯೇ ಎಂದು ಹಳ್ಳಿಯವರೆಲ್ಲಾ ಚಿಂತಿತರಾಗಿದ್ದಾರೆ. ಈಗ ಗಾಂಜಾದ ಅಮಲಿನಲ್ಲಿಲ್ಲದಿದ್ದರೂ, ಬಾಯಿಗೆ ಬಂದಂತೆ ಮಾತಾಡುತ್ತಾನೆ. ಅವನಿಗೀಗ ಎಲ್ಲರ ಮೇಲೆ ಸಂಶಯ. ತನ್ನನ್ನು ಯಾರೋ ಹಿಂಬಾಲಿಸುತ್ತಿದ್ದಾರೆ, ತನ್ನ ನಡೆವಳಿಕೆಗಳನ್ನು ಯಾರೋ ಗಮನಿಸುತ್ತಿದ್ದಾರೆ, ತನ್ನನ್ನು ಕೊಲ್ಲಲು ಸಂಚು ಮಾಡುತ್ತಿದ್ದಾರೆ ಎನ್ನುತ್ತಾನೆ. ನಿನ್ನನ್ನು ಯಾರು ಏಕೆ ಕೊಲ್ಲಬೇಕು. ಕೊಂದರೆ ಅವರಿಗೇನು ಲಾಭ' ಎಂದರೆ, ಆ ಪ್ರಶ್ನೆ ಕೇಳಿದವರನ್ನೇ ಅನುಮಾನ ದೃಷ್ಟಿಯಿಂದ ನೋಡುತ್ತಾ, 'ನನ್ನ ಆಸ್ತಿಯನ್ನು ಲಪಟಾಯಿಸಲು' ಎನ್ನುತ್ತಾನೆ. ಕೇಳಿದವರಿಗೆ ನಗು ಬರುತ್ತದೆ. ರಾಮಪ್ಪನಿಗೆ ಇರುವ ಆಸ್ತಿಯೆಂದರೆ ಒಂದು ಮುರುಕಲು ಮನೆ ಮತ್ತು ಅರ್ಧ ಎಕರೆ ಮಳೆ ಹನಿಗಳನ್ನೇ ನಂಬಿರುವ ಹೊಲ, ಜೊತೆಗೆ ಊರ ಶೆಟ್ಟಿಯ ಬಳಿ ತೆಗೆದು ಕೊಂಡಿರುವ ಮೂರುಸಾವಿರ ರೂಪಾಯಿ ಸಾಲ ! ಇತ್ತೀಚಿಗೆ ಪ್ರತಿದಿನ ಹೆಂಡತಿಯನ್ನು ಹಿಡಿದು ಬಡಿಯುತ್ತಾನೆ. 'ನೀನು ನನಗೆ ಮೋಸ ಮಾಡಿದ್ದೀಯಾ. ನೆರೆಮನೆಯ ಕುಶಾಲಪ್ಪನನ್ನು ಇಟ್ಟುಕೊಂಡಿದ್ದೀಯಾ, ನನಗೆ ವಿಷ ಉಣಿಸಿ, ಮಿಂಡನ ಜೊತೆ ಮಜಾ ಮಾಡಲು ಹೊರಟಿದ್ದಿ' ಎಂದು ಕೂಗು ಹಾಕುತ್ತಾನೆ. ಅವಳ ರೋದನ ನೋಡಿದವರ ಮನವನ್ನು ಕರಗಿಸುತ್ತದೆ. ನಲವತ್ತು ವರ್ಷದ ಈ ಸಭ್ಯ ಹೆಂಗಸಿಗೆ ಕೈ ಹಿಡಿದ ಗಂಡನಿಂದ ಇಂತ ಬಳುವಳಿಯೇ ಎಂದು ಪರಿತಾಪಪಡುತ್ತಾರೆ. ರಾಮಪ್ಪ ಇಡೀ ರಾತ್ರಿ ಮಲಗದೆ, ಹಳ್ಳಿಯಲ್ಲಿ ಅಲೆಯುತ್ತಾನೆ. ಊಟ, ದೇಹದ ಸ್ವಚ್ಛತೆ ಬಗ್ಗೆ ಗಮನವಿಲ್ಲ. ಕೆಲಸ ಮಾಡುವುದನ್ನು ನಿಲ್ಲಿಸಿ ಮೂರು ತಿಂಗಳಾಯಿತು. ಕಳೆದ ಮೂರು ದಿವಸಗಳಿಂದ ಅವನ ಮಾತು ವರ್ತನೆ ಹುಚ್ಚುಚ್ಚಾಗಿದೆ. 'ನೋಡಿ, ಆ ಗೋಡೆಯ ಹಿಂದೆ ಹತ್ತು ಜನ ಮರೆಯಾಗಿ ನಿಂತು ನನ್ನನ್ನು ಹೆದರಿಸುತ್ತಿದ್ದಾರೆ. ಚೂರಿಯಿಂದ ನನ್ನ ಹೊಟ್ಟೆಯನ್ನು ಇರಿದು ಕರುಳನ್ನು ಮಾಲೆಯಾಗಿ ಹಾಕಿಕೊಳ್ಳುತ್ತಾರಂತೆ. ನನ್ನ ಬಿಸಿ ರಕ್ತ ಕುಡಿಯುತ್ತಾರಂತೆ. ನನ್ನನ್ನು ರಕ್ಷಿಸಿ' ಎನ್ನುವುದು ಹೆಚ್ಚಾಗಿದೆ. ವಾಸ್ತವದಲ್ಲಿ ಗೋಡೆಯ ಹಿಂದೆ ಯಾರೂ ಇರುವುದಿಲ್ಲ. ಯಾವಾಗಲೂ 'ನನಗೆ ಭಯ. ಮನೆಯ ಬಾಗಿಲನ್ನು, ಕಿಟಕಿಗಳನ್ನೆಲ್ಲಾ ಮುಚ್ಚಿ, ನಾನು ಬದುಕಬೇಕು. ಸಾಯಲು ಇಚ್ಛೆಯಿಲ್ಲ' ಎಂದು ಬಡಬಡಿಸುತ್ತಾನೆ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಸ್ಥಿರ ಆಹಾರ : ಆಹಾರ ಉತ್ಪಾದಕರು ಕೆಲವು ಕಳೆದು ಹೋದ ಲವಣಗಳನ್ನು ಸೇರಿಸುತ್ತಾರಾದರೂ ಪೂರ್ಣ ಪ್ರಮಾಣದಲ್ಲಿ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಬಿಳಿ ಬ್ರೆಡ್ ಬದಲಾಗಿ ಪೂರ್ಣ ಧಾನ್ಯದ ಬ್ರೆಡ್ ಕೊಡುತ್ತಾರೆ. ಇದರಲ್ಲಿ ಮೆಗ್ನೇಷಿಯಂ ಅಂಶ ಶ್ರೀಮಂತವಾಗಿದ್ದು, ನಿಮ್ಮ ದೇಹದಲ್ಲಿ ಎನ್‌ಜೈಮ್‌ಗಳ ಸೃಷ್ಟಿಗೆ ಕಾರಣವಾಗಿ ಗ್ಲುಕೋಸನ್ನು ಶಕ್ತಿಯಾಗಿ ಬದಲಾಯಿಸಲು ನೆರವಾಗುತ್ತದೆ. ಟೈಪ್ 2 ಮಧುಮೇಹ ಇದ್ದವರು ಕಡಿಮೆ ಮಟ್ಟವನ್ನು ಕಾಪಾಡಿಕೊಳ್ಳಲು ಈ ಪ್ರಮುಖ ಲವಣವನ್ನು ತಮ್ಮ ದೇಹದಲ್ಲಿ ಶ್ರೀಮಂತವಾಗಿ ಇಡಬೇಕಾಗುತ್ತದೆ. ಹುಡಿ ಮಾಡಿದ ಧಾನ್ಯಗಳಲ್ಲಿ ಮತ್ತೊಂದು ಮಹತ್ವದ ಕೊರತೆಯಿದೆ. ಈ ಧಾನ್ಯಗಳು ಹುಡಿಯಾದ ಮೇಲೆ ಅವುಗಳಲ್ಲಿ ನಾರಿನಂಶಅಂಶಗಳು ಕಡಿಮೆಯಾಗಿ ಬಿಡುತ್ತವೆ. ಇಡೀ ಧಾನ್ಯವು ಒಂದು (ನಾರಿನಂಶನ ಮೂಲವಾಗಿರುತ್ತದೆ. ಆದರೆ ಬಹುತೇಕ ಮಂದಿ ತಜ್ಞರ ಸಲಹೆಯಾಗಿರುವ 20ರಿಂದ 35 ಗ್ರಾಂಗಳಷ್ಟು (ನಾರಿನಂಶನ್ನು ದಿನವೊಂದಕ್ಕೆ ಸೇವಿಸುವುದಿಲ್ಲ. ಆದರೆ ಈ ಧಾನ್ಯಗಳಲ್ಲಿ ಸಿಗುವ ಹೆಚ್ಚು ನಾರಿನಂಶಗಳು ದೇಹಕ್ಕೆ ಅತ್ಯಗತ್ಯವಾಗಿದೆ.

ಪ್ರಾಕೃತಿಕ ರಹಸ್ಯ (ನಾರಿನಂಶ)

ತಾಂತ್ರಿಕವಾಗಿ ಹೇಳಬೇಕೆಂದರೆ ನಾರಿನಂಶ ಪೌಷ್ಠಿಕಾಂಶವಲ್ಲ. ಇದು ಜೀರ್ಣಕ್ರಿಯೆಯಲ್ಲಿ ಭಾಗವಹಿಸುವುದಿಲ್ಲವಾದ್ದರಿಂದ ಇದನ್ನು ಪೌಷ್ಠಿಕಾಂಶವೆಂದು ಹೇಳಲಾಗದು. ಹಾಗೆಯೇ ನಾರಿನಂಶ ಯಾವತ್ತೂ ರಕ್ತದೊಳಗೆ ಪ್ರವೇಶಿಸುವುದಿಲ್ಲ. ಹಾಗಿದ್ದರೂ ದೇಹಕ್ಕೆ ನಾರಿನಂಶ ಅತ್ಯಗತ್ಯವಾಗಿದೆ. ಆದರೆ ದೇಹದ ಕ್ರಿಯೆಗಳನ್ನು ನಿತ್ಯವೂ ಯಾವುದೇ ಸಮಸ್ಯೆ ಇಲ್ಲದೆ ಸಾಗುತ್ತಿರಲು ನಾರಿನಂಶಗಳು ಅಗತ್ಯವಾಗಿದೆ. ಈ ನಾರಿನಂಶಗಳು ಧಾನ್ಯಗಳಲ್ಲಿ ಶ್ರೀಮಂತವಾಗಿರುವ ಕಾರಣಕ್ಕೇ ಹುಡಿ ಮಾಡಿದ ದವಸಗಳ ಬದಲಾಗಿ ಇಡೀ ಧಾನ್ಯಗಳನ್ನು ಸೇವಿಸಬೇಕು ಎನ್ನುವ ಸಲಹೆ ನೀಡಲಾಗುತ್ತದೆ. ಕರಗದ ನಾರಿನಂಶಗಳು ಬ್ರೆಡ್ ಅಥವಾ ಇಡಿಯಾಗಿ ಇರುತ್ತವೆ. ಈ ನಾರಿನಂಶಗಳು ದೇಹದೊಳಗೆ ನೀರನ್ನು ಹೀರಿಟ್ಟುಕೊಂಡು ಸ್ಪಾಂಜ್‌ನಂತೆ ಕಾರ್ಯ ನಿರ್ವಹಿಸುತ್ತವೆ. ಜಠರದಿಂದ ಗುದದ್ವಾರದವರೆಗೆ ಹೋಗುವ ಅನ್ನನಾಳದ ಭಾಗ ಅಥವಾ ಕರುಳಿನಲ್ಲಿ ನೀರಿಗೆ ಜಾಲರಿಗಳಾಗಿ ಕೆಲಸ ಮಾಡುತ್ತವೆ. ಇವುಗಳು ಮಲವನ್ನು ಮೆದುವಾಗಿ ಭಾರವಾಗಿರುವಂತೆ ಪರಿವರ್ತಿಸುತ್ತವೆ. ಕರಗುವ ನಾರಿನಂಶಗಳು ನಿಮ್ಮ ಕರುಳಿನಲ್ಲಿ ದಪ್ಪನೆಯ ಅಂಟು ದ್ರವವಾಗಿ ಬದಲಾಗುತ್ತವೆ. ಈ ಅಂಟು ದ್ರವವು ದೇಹದಲ್ಲಿ ಮುಂದೆ ಸಾಗುವಾಗ ಕೊಲೆಸ್ಟರಾಲ್‌ನ್ನು ತನ್ನ ಜೊತೆ ತೆಗೆದುಕೊಂಡು ಹೋಗುತ್ತದೆ. ಆ ಮೂಲಕ ಕೊಲೆಸ್ಟರಾಲ್ ರಕ್ತದ ನಾಳಗಳು ಮತ್ತು ಹೃದಯದ ನಾಳಗಳನ್ನು ಪ್ರವೇಶಿಸದಂತೆ ತಡೆಯುತ್ತವೆ. ಅಲ್ಲದೆ ಈ ಅಂಟು ದ್ರವವು ಕೊಲೆಸ್ಟರಾಲ್‌ನಿಂದ ಉತ್ಪತ್ತಿಯಾಗುವ ಬೈಲ್ ಆಸಿಡ್ ಎನ್ನುವ ಜೀರ್ಣ ರಸವನ್ನೂ ನಿವಾರಿಸುತ್ತದೆ.

ಮುಂದುವರಿಯುವುದು...

ನಮಗಾಗಿ ನಾವು ಏನು ಮಾಡತ್ತೇವೆಂಬುದು ನಮ್ಮೊಂದಿಗೆ ಕೊನೆಗೊಳ್ಳುತ್ತದೆ. ಇತರರಿಗೆ ಏನು ಮಾಡುತ್ತೇವೆಂಬುದು ಶಾಶ್ವತವಾಗಿ ಉಳಿಯುತ್ತದೆ.

– ಮಹಾತ್ಮ ಗಾಂಧಿ


ಚಳಿಗಾಲದಲ್ಲಿ ಕಾಣುವ ದೇಹದ ಬಾಧೆಗಳು ಅದಕ್ಕೆ ನೈಸರ್ಗಿಕ ಪರಿಹಾರಗಳು

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಈಗ ತಾನೆ ಮಳೆಗಾಲದಿಂದ ಚಳಿಗಾಲಕ್ಕೆ ಕಾಲಿಟ್ಟಿದ್ದೇವೆ. ಆಯಾ ಕಾಲಗಳು ಬದಲಾದಂತೆ ಪ್ರಕೃತಿಯಲ್ಲಿ ಹವಾಮಾನ ವೈಪರೀತ್ಯ ಇದ್ದೇ ಇರುತ್ತದೆ. ಹೊರಗಿನ ಪ್ರಕೃತಿಯಲ್ಲಿ ಆಗುವ ಬದಲಾವಣೆಗಳ ಜೊತೆಗೆ ಒಳಗಿನ ಪ್ರಕೃತಿಯಲ್ಲಿ (ಆರೋಗ್ಯದಲ್ಲಿ) ಬದಲಾವಣೆಗಳು ಸಹಜವಾಗಿ ಕಂಡುಬರುತ್ತವೆ ಅದಕ್ಕೆ ಋತು ನಡುವಿನ ಬಾಧೆಗಳು (ಕಾಯಿಲೆ) ಎನ್ನುತ್ತಾರೆ. ಕ್ರಮೇಣ ಶರೀರವು ಬಾಹ್ಯ ಪ್ರಕೃತಿಗೆ ಹೊಂದಿಕೊಂಡಂತೆ ಕಾಯಿಲೆಗಳು ಶಮನವಾಗುತ್ತದೆ,ಉತ್ತಮ ಸ್ವಾಸ್ಥ್ಯ ಶರೀರವಾಗುತ್ತದೆ. ಹಾಗಾದರೆ ಚಳಿಗಾಲದಲ್ಲಿ ಬರುವಂತಹ ಕಾಯಿಲೆಗಳು ಯಾವುವು?

ಶೀತ, ಕೆಮ್ಮು, ನೆಗಡಿ ಇದರಿಂದಾಗಿ ಜ್ವರದ ಲಕ್ಷಣಗಳು ಇರಬಹುದು. ಇದು ವೈರಲ್ ಲಕ್ಷಣವೂ ಆಗಿರಬಹುದು. ಒಣ ಚರ್ಮ–ಚಳಿಯಿಂದ ಚರ್ಮ ಸುಕ್ಕುಗಟ್ಟುವುದು ಹಾಗೂ ತುರಿಸುವುದು. ಹಸಿವು ಕಡಿಮೆಯಾಗುವುದು–ಮಲಬದ್ಧತೆಯಿಂದ ಬಳಲುವುದು ಅದರಿಂದ ತಲೆನೋವು ಕಾಣಿಸುವುದು. ಚಳಿಯಿಂದ ನಿದ್ದೆ ಕಡಿಮೆ ಆಗುವುದು ಮತ್ತು ನೀರಡಿಕೆ ಕಡಿಮೆಯಾಗಿ ಅದರಿಂದ ಸಹಜವಾಗಿ ಉರಿಮೂತ್ರ, ವಿರಳ ಮೂತ್ರದಿಂದ ಬಳಲುತ್ತಾರೆ. ಮೈಯಲ್ಲಿ ಸುಸ್ತು, ಜಡ್ಡುಗಟ್ಟುವುದು, ಆಲಸ್ಯತನ ಆಗುವುದು. ಈ ಎಲ್ಲಾ ಕಾರಣಗಳು ಋತುಗಳ ಮಧ್ಯೆ ಸಹಜವಾಗಿ ಬರುತ್ತವೆ, ಯಾರು ಹೆದರಬೇಕಾಗಿಲ್ಲ. ಒಂದು ಸಲ ಒಗ್ಗಿಕೊಂಡರೆ 10–15 ದಿನಗಳಲ್ಲಿ ಎಲ್ಲವೂ ಸರಿ ಹೋಗುತ್ತದೆ. ಆದ್ದರಿಂದ ಈ ಕೆಳಗಿನ ನೈಸರ್ಗಿಕ ಪರಿಹಾರ ಮಾರ್ಗಗಳನ್ನು ಪಾಲಿಸಬೇಕಾಗುತ್ತದೆ. ವಿಶೇಷವಾಗಿ ಇಂದಿನ ಕೊರೋನ ವೈರಸ್ ಮಾರ್ಪಾಡು ಆಗಿ "ಒಮಿಕ್ರೋನ್" ವೈರಸ್ ಬೆಳವಣಿಗೆಯ ದಿನಗಳಲ್ಲಿ ನಾವೆಲ್ಲರೂ ಜಾಗ್ರತೆಯಿಂದ ಇರಬೇಕಾಗುತ್ತದೆ. ಮುಖ್ಯವಾಗಿ ಕೋವಿಡ್ ನಿಯಮಾವಳಿಗಳನ್ನು ತಪ್ಪದೇ ಪಾಲಿಸುವುದು. ಆದಷ್ಟು ಬಿಸಿನೀರನ್ನು ಸೇವಿಸಿ. ದಿನಕ್ಕೆ ಎರಡು ಬಾರಿ ಮುಖಕ್ಕೆ ಸ್ಟೀಮ್ 2–5 ನಿಮಿಷ ತೆಗೆದುಕೊಳ್ಳಿ. ದಿನಕ್ಕೆ 3 ಲೀಟರಿನಷ್ಟು ಬಿಸಿ ನೀರನ್ನು ಸೇವಿಸಿ. ಇದರಿಂದ ಮಲಬದ್ಧತೆ ಮೂತ್ರ ದೋಷ ನಿವಾರಣೆ ಆಗುತ್ತದೆ. ಉಗಿಯಲ್ಲಿ ಬೇಯಿಸಿದ ತರಕಾರಿ ಮತ್ತು ಸೂಕ್ತ ತರಕಾರಿಗಳನ್ನು ಯಥೇಚ್ಛವಾಗಿ ಸೇವಿಸಿ. ಇದರಿಂದ ಜೀರ್ಣಕ್ರಿಯೆಗೆ ಸರಾಗವಾಗಿ ಆಗುತ್ತದೆ ಮತ್ತು ಹಸಿವು ಹೆಚ್ಚಾಗುತ್ತದೆ. ಮೈ ಕೈಗಳಲ್ಲಿ ತೆಂಗಿನ ಎಣ್ಣೆ ಅಥವಾ ಎಳ್ಳೆಣ್ಣೆ ತೀಡಿಕೊಂಡು (ಸವರಿಸಿಕೊಂಡು) 30 ನಿಮಿಷ ಬಿಟ್ಟು ಸ್ನಾನ ಮಾಡಿ. ವಾರಕ್ಕೊಮ್ಮೆ ಅಥವಾ ಎರಡು ಬಾರಿ ಪ್ರಕೃತಿ ಚಿಕಿತ್ಸಾ ಕೇಂದ್ರಗಳಲ್ಲಿ ಎಣ್ಣೆ ಮಾಲೀಶು, ಸ್ಟೀಮ್ ಬಾತ್ ಅಗತ್ಯವಾಗಿ ಮಾಡಿಸಿ. ಇದರಿಂದ ಮೈಕೈ ನೋವು ಕೂಡ ಕಡಿಮೆಯಾಗುತ್ತದೆ. ತಪ್ಪದೇ ಸೂರ್ಯ ನಮಸ್ಕಾರ, ಯೋಗಾಸನ, ಪ್ರಾಣಾಯಾಮ ಮಾಡಿರಿ ವಿಶೇಷವಾಗಿ ಸೂರ್ಯ ನಾಡಿ ಪ್ರಾಣಾಯಾಮ, ಕಪಾಲಭಾತಿ ತಪ್ಪದೇ ಮಾಡಬೇಕು. ಸೂರ್ಯನ ಬಿಸಿಲಿಗೆ 20 ನಿಮಿಷ ಮೈ ಕೊಡಬೇಕು. ಸೂರ್ಯನ ಕಿರಣದಿಂದ ವಿಟಮಿನ್ ಡಿ ದೇಹಕ್ಕೆ ಸಿಗುತ್ತದೆ. ವಿಟಮಿನ್ ಸಿ ಇರುವ ಆಹಾರಗಳನ್ನು ಸೇವಿಸಬೇಕು ಅಂದರೆ ಆಮ್ಲ, ಲಿಂಬೆರಸ, ಪಪ್ಪಾಯ, ಬೇಯಿಸಿದ ಸೊಪ್ಪು, ಪಾಲಕ್ ಇತ್ಯಾದಿಗಳು. ಮೊಸರು ಮಜ್ಜಿಗೆ ಗಿಂತ ಬಿಸಿ ಹಾಲಿನಲ್ಲಿ ಒಂದು ಚಿಟಿಕೆ ಅರಿಶಿನ ಸೇರಿಸಿ ಕುಡಿಯಬೇಕು. ಶುಂಠಿ– ಕಾಳುಮೆಣಸು– ಜೀರಿಗೆ–ಕೊತ್ತಂಬರಿ –ಪುಡಿಮಾಡಿ ಕಾಯಿಸಿ ಕುದಿಸಿ ಇಳಿಸಿ, ಬೆಲ್ಲವನ್ನು ಹಾಲಿಗೆ ಸೇರಿಸಿ ಕಷಾಯ ಮಾಡಿ ಕುಡಿಯಬೇಕು ಕುದಿಸುವಾಗ ಮಜ್ಜಿಗೆ ಹುಲ್ಲು ಸ್ವಲ್ಪ ಹಾಕಬಹುದು. ರಾತ್ರಿ ಮಲಗುವ ಮುಂಚೆ ಬಕೇಟಿನಲ್ಲಿ ಬಿಸಿನೀರು ಹಾಕಿ 10–15 ನಿಮಿಷ ಪಾದವನ್ನು ಇಟ್ಟು ನಂತರ ಮಲಗುವುದರಿಂದ ನಿದ್ದೆ ಚೆನ್ನಾಗಿ ಬರುತ್ತದೆ. ಈ ಅಭ್ಯಾಸಗಳನ್ನು ಅಳವಡಿಸಿಕೊಂಡರೆ ಚಳಿಗಾಳಿಯಿಂದ ದೂರವಿರಲು ಸಾಧ್ಯವಾಗುತ್ತದೆ.

ಯುರೋಪ್‌ನಲ್ಲಿ ಕೊರೊನಾ ಹೆಚ್ಚಳದಿಂದ ಜಗತ್ತಿಗೆ ಆತಂಕ



ಯುರೋಪಿಯನ್ ರಾಷ್ಟ್ರಗಳಲ್ಲಿ ಕೊರೊನಾ ಸೋಂಕು ಹೆಚ್ಚಳವಾಗಿದ್ದು, ಆಸ್ಟ್ರಿಯಾದಲ್ಲಿ ಲಾಕ್ ಡೌನ್ ಘೋಷಿಸಲಾಗಿದೆ. ನೆದರ್‌ಲ್ಯಾಂಡ್ಸ್‌ನಲ್ಲಿ ಭಾಗಶಃ ಲಾಕ್‌ಡೌನ್ ಹೇರಿಕೆ ಮಾಡಲಾಗಿದೆ. ಜರ್ಮನಿಯ ಆರೋಗ್ಯ ಸಚಿವರು, "ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ ನಾವಿದ್ದೇವೆ" ಎಂದು ಹೇಳಿಕೆ ನೀಡಿದ್ದಾರೆ. ಭಾರತದಲ್ಲಿ ಕೊರೋನ ವೈರಸ್ ಸಾಂಕ್ರಾಮಿಕವು ಪ್ರಸ್ತುತ ನಿಯಂತ್ರಣದಲ್ಲಿದ್ದರೂ ಕೂಡ, ಯುರೋಪಿನಲ್ಲಿ ಸೋಂಕು ಹೆಚ್ಚಾಗುತ್ತಿರುವುದು ಜಾಗತಿಕವಾಗಿ ಕಳವಳ ಸೃಷ್ಟಿ ಮಾಡಿದೆ. ಸೋಂಕು ಹೆಚ್ಚಳದಿಂದಾಗಿ ಹಲವಾರು ಯುರೋಪಿಯನ್ ದೇಶಗಳು ನಿರ್ಬಂಧಗಳನ್ನು ಬಿಗಿಗೊಳಿಸಿವೆ. ಆಸ್ಟ್ರಿಯಾ, ನೆದರ್‌ಲ್ಯಾಂಡ್ಸ್ ಸಹ ಲಾಕ್‌ಡೌನ್ ಅನ್ನು ಜಾರಿಗೊಳಿಸಿದೆ. ಇದರೊಂದಿಗೆ ನೆದರ್‌ಲ್ಯಾಂಡ್ಸ್‌ನಲ್ಲಿ ಲಸಿಕೆ ಪಡೆಯದ ವ್ಯಕ್ತಿಗಳ ಮೇಲೆ ಕೆಲವು ನಿರ್ಬಂಧಗಳನ್ನು ಹಾಕಲು ಯೋಜಿಸಲಾಗುತ್ತಿದ್ದು, ಇದರಿಂದ ಅಸಮಾಧಾನಗೊಂಡ ನಾಗರಿಕರು ಪ್ರತಿಭಟನೆಗೆ ಮುಂದಾಗಿದ್ದಾರೆ. ಯುರೋಪಿನ ಅತ್ಯಂತ ದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರ ಜರ್ಮನಿಯಲ್ಲೂ ಕೊರೊನಾ ಸೋಂಕಿನ ಪ್ರಮಾಣ ಏರಿಕೆಯಾಗುತ್ತಿದ್ದು, ಸರ್ಕಾರ, ಲಸಿಕೆಯೊಂದೇ ಸೋಂಕು ಕಡಿಮೆಗೊಳಿಸಲು ಸಾಧ್ಯವಿಲ್ಲ ಎಂದಿದೆ. ಈ ಮೂಲಕ ಮುಂದೆ ಲಾಕ್ ಡೌನ್ ಜಾರಿ ಮಾಡಬೇಕಾಗಬಹುದು ಎಂದು ಅದು ನೇರವಾಗಿಯೇ ಎಚ್ಚರಿಕೆ ನೀಡಿದೆ. ಜರ್ಮನಿಯಲ್ಲಿ ಕಳೆದ 24 ಗಂಟೆಗಳಲ್ಲಿ 42,000 ಹೊಸ ಕೋವಿಡ್ –19 ಪ್ರಕರಣಗಳು ವರದಿಯಾಗಿದ್ದು, 75 ಜನರು ಮೃತಪಟ್ಟಿದ್ದಾರೆ. ಜರ್ಮನಿಯ ಆರೋಗ್ಯ ಸಚಿವ ಜೆನ್ಸ್ ಸ್ಪಾನ್ ಅವರಿಗೆ ಇತ್ತೀಚಿನ ಸುದ್ದಿಗೋಷ್ಠಿಯಲ್ಲಿ ಆಸ್ಟ್ರಿಯಾದಲ್ಲಿ ಜಾರಿ ಮಾಡಲಾದ ಲಾಕ್‌ಡೌನ್‌ನಂತೆ ಜರ್ಮನಿಯಲ್ಲೂ ಜಾರಿಗೊಳಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಅವರು, "ಏನನ್ನೂ ತಳ್ಳಿಹಾಕಲು ಸಾಧ್ಯವಿಲ್ಲ. ನಾವು ರಾಷ್ಟ್ರೀಯ ತುರ್ತುಪರಿಸ್ಥಿಯ ಸಂದರ್ಭದಲ್ಲಿದ್ದೇವೆ" ಎಂದು ಉತ್ತರಿಸಿದ್ದಾರೆ. ಏತನ್ಮಧ್ಯೆ, ಭಾರತದಲ್ಲಿ ಸೋಂಕು ಪೀಡಿತರಲ್ಲಿ 98.2% ಕ್ಕಿಂತ ಹೆಚ್ಚಿನ ಚೇತರಿಕೆಯ ಪ್ರಮಾಣ ದಾಖಲಾಗುತ್ತಿದೆ. ಇದು ಮಾರ್ಚ್ 2020 ರಿಂದ ಅತ್ಯಧಿಕವಾಗಿದ್ದು, ವ್ಯಾಕ್ಸಿನೇಷನ್ ಕೂಡ ತ್ವರಿತ ಗತಿಯಲ್ಲಿ ಸಾಗುತ್ತಿದೆ. ಈ ವಾರ ದೈನಂದಿನ ಸೋಂಕುಗಳು 10,000ರ ಆಸುಪಾಸಿನಲ್ಲಿವೆ. ಶನಿವಾರ, ಭಾರತವು ಲಸಿಕೆಯಲ್ಲಿ 116 ಕೋಟಿ ಡೋಸ್ ಮೈಲಿಗಲ್ಲನ್ನು ದಾಟಿದೆ. ಆದರೂ ಯುರೋಪಿಯನ್ ರಾಷ್ಟ್ರಗಳಲ್ಲಿ ಸೋಂಕು ಹೆಚ್ಚಾಗುತ್ತಿರುವುದು ಮತ್ತು ಅನಿವಾರ್ಯವಾಗಿ ಲಾಕ್ ಡೌನ್ ಹೇರಿರುವುದು, ಜಾಗತಿಕವಾಗಿ ಆತಂಕ ಹೆಚ್ಚಿಸಿದೆ.

ಸೌಜನ್ಯ : ಟಿವಿ9 ನ್ಯೂಸ್ (ಸಂಗ್ರಹ – ನಳಿನಾ ಡಿ.)

ಕೋರೆಗಾಂವ – ಅಸ್ಪೃಶ್ಯರ ವೀರಗಾಥೆ

– ಡಾ. ಸರಜೂ ಕಾಟ್ಕರ್
ಸಂಗ್ರಹ : ಅಖಿಲಾ ವಿದ್ಯಾಸಂದ್ರ

(ಪುಣೆಯ ಸಮೀಪದ ಭೀಮಾನದಿಯ ದಂಡೆಯ ಮೇಲಿರುವ ಕೋರೆಗಾಂವದಲ್ಲಿ ಪೇಶ್ವೆಗಳು ಮತ್ತು ಬ್ರಿಟಿಷರ ನಡುವೆ ನಡೆದ ಘೋರ ಯುದ್ಧದಲ್ಲಿ ಅಸ್ಪೃಶ್ಯರು ಮೆರೆದ ವೀರಗಾಥೆಯ ಸ್ಮರಣೆ

ಮೊದಲನೆಯ ಮಹಾಯುದ್ಧದ ಕಾವು ಇಡೀ ಜಗತ್ತನ್ನು ಆವರಿಸಿದ್ದಾಗ ಆಯಾ ರಾಷ್ಟ್ರಗಳು ತಮ್ಮ ಸೈನಿಕ ಬಲವನ್ನು ಹೆಚ್ಚಿಸಿಕೊಳ್ಳಲು ಮತ್ತು ಆಧುನೀಕರಣಗೊಳಿಸಲು ಹೆಣಗುತ್ತಿದ್ದರು. ತಮ್ಮ ದೇಶದ ಶೂರ ವೀರ ಮತ್ತು ನಿರ್ಭೀತರೆಂದು ಹೆಸರು ಮಾಡಿದ್ದ ಜನಾಂಗಗಳನ್ನು ಮಿಲಿಟರಿಗೆ ಸೇರಿಸಿಕೊಂಡು ಅವರ ಮೂಲಕ ವೈರಿ ರಾಷ್ಟ್ರಗಳನ್ನು ಸದೆಬಡಿಯಲು ಎಲ್ಲ ರಾಷ್ಟ್ರಗಳು ಪ್ರಯತ್ನಿಸಿ ಯಶಸ್ವಿಯಾದವು, ಆಗ ಭಾರತವನ್ನು ಆಳುತ್ತಿದ್ದ ಬ್ರಿಟಿಷ್ ಸರಕಾರವು ಮಹಾರರನ್ನು ಮಿಲಿಟರಿಗೆ ಸೇರಲು ಪ್ರೋತ್ಸಾಹಿಸಿ, ಮಿಲಿಟರಿಗೆ ಸೇರಿಸಿಕೊಂಡಿತು. ಈ ಮೊದಲು ಮಿಲಿಟರಿಯಲ್ಲಿ ಇರಲಿಲ್ಲವೆಂದಲ್ಲ; ಆದರೆ ಈ ಬಾರಿ ಇವರಿಗೆ ಪ್ರತ್ಯೇಕವಾದ ಕಂಪನಿಯನ್ನು ಸೃಷ್ಟಿಸುವಷ್ಟು ಮಹಾರರು ಮಿಲಿಟಿಯನ್ನು ಸೇರಿದರು. ಬ್ರಿಟಿಷರಿಗಾಗಿ ಜಗತ್ತಿನ ಅನೇಕ ಕಡೆಗಳಲ್ಲಿ, ವೈರಿ ರಾಷ್ಟ್ರಗಳೊಂದಿಗೆ ಹೋರಾಡಿದರು. ಈ ಯುದ್ಧದಲ್ಲಿ ಅನೇಕರು ಮಡಿದರು. ಕೊನೆಗೆ ಗೆಲುವು ಬ್ರಿಟಿಷರದ್ದಾಯಿತು.

ತಮ್ಮ ಜೀವದ ಹಂಗು ತೊರೆದು ಹೋರಾಡಿ ಮಡಿದ ಸೈನಿಕರನ್ನು ಬ್ರಿಟಿಷ್ ಸರ್ಕಾರ ಮರೆತುಹೋಯಿತು. 1926 ರಲ್ಲಿ ಬ್ರಿಟಿಷ್ ಸರ್ಕಾರ ಒಂದು ವಿಚಿತ್ರವಾದ ಆಜ್ಞೆಯನ್ನು ಹೊರಡಿಸಿತು. ಈ ಆಜ್ಞೆಯ ಪ್ರಕಾರ ಇನ್ನು ಮುಂದೆ ಮಹಾರರನ್ನು ಮಿಲಿಟರಿಯಲ್ಲಾಗಲಿ ಅಥವಾ ಪೊಲೀಸ್ ಇಲಾಖೆಯಲ್ಲಾಗಲಿ ಸೇರಿಸಿಕೊಳ್ಳುವಂತಿರಲಿಲ್ಲ. ಈ ಆಜ್ಞೆಯಿಂದಾಗಿ ಈಗಾಗಲೇ ಮಿಲಿಟರಿ ಮತ್ತು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಮಹಾರರನ್ನು ತೆಗೆದು ಹಾಕಲಾಯಿತು. ಹಣಕಾಸಿನ ತೊಂದರೆ ಹಾಗೂ ಆರ್ಥಿಕ ಬಿಕ್ಕಟ್ಟಿನಿಂದ ಈ ಕ್ರಮವನ್ನು ಕೈಗೊಳ್ಳುತ್ತಿರುವುದಾಗಿ ಬ್ರಿಟಿಷ್ ಸರ್ಕಾರ ಹೇಳಿತು. ಸೇವೆಯಿಂದ ಕೇವಲ ಮಹಾರರನ್ನು ಮಾತ್ರ ತೆಗೆದರೆ, ಅದರಿಂದ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆಂಬುವುದು ಕೇವಲ ಒಂದು ಕುಂಟು ನೆಪವಾಗಿತ್ತು. ಸರ್ಕಾರದ ಈ ವಿಚಿತ್ರ ನಿರ್ಣಯದ ಹಿಂದೆ ಲೋಕಮಾನ್ಯ ಟಿಳಕರು ಇದ್ದರೆಂದು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿರುವ ಡಾ. ಎಸ್.ಕೆ. ಕಲ್ಲೋಳಿಕರ್ ಅಭಿಪ್ರಾಯಪಡುತ್ತಾರೆ. ಏನೇ ಇರಲಿ, ಬ್ರಿಟಿಷರಿಗೆ ಅಸಾಧ್ಯವಾದ ಜಯವನ್ನು ತಂದುಕೊಟ್ಟ ಜನಾಂಗವನ್ನು ಈ ರೀತಿಯಾಗಿ ಶಸ್ತ್ರವಿಹೀನನ್ನಾಗಿ ಮಾಡಲಾಯಿತು. ಈ ಆಜ್ಞೆಯಿಂದ ಅನೇಕ ಮಹಾರರು ಈಗಾಗಲೇ ಇದ್ದ ತಮ್ಮ ನೌಕರಿಗಳನ್ನು ಕಳೆದುಕೊಂಡರು. ಸಾಮಾಜಿಕವಾಗಿ ಬಹಿಷ್ಕಾರಗೊಂಡಿದ್ದ ಈ ಜನಾಂಗ, ಇತರರಂತೆ ನೌಕರಿ ಮಾಡುವಂತಿರಲಿಲ್ಲ. ಮಿಲಿಟರಿ ಅಥವಾ ಪೊಲೀಸ್ ಇಲಾಖೆ ಸೇರಿ ತಮ್ಮ ಹೊಟ್ಟೆ ಹೊರೆದುಕೊಳ್ಳಬೇಕೆಂದರೆ ಈಗ ಅದಕ್ಕೂ ಕಲ್ಲು ಬಿದ್ದಂತಾಯಿತು. ಇದರಿಂದ ಇಡೀ ದಲಿತವರ್ಗ ರೊಚ್ಚಿಗೆದ್ದಿತು. ದೇಶಾದ್ಯಂತ ಪ್ರತಿಭಟನೆಗಳು ಆರಂಭವಾದವು. ದಲಿತ ವರ್ಗದ ನಾಯಕರಾಗಿ ರೂಪುಗೊಳ್ಳುತ್ತಿದ್ದ ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರು ಈ ಪ್ರತಿಭಟನೆಯಲ್ಲಿ ಭಾಗವಹಿಸದೇ ಇದ್ದಿದ್ದರೆ ಮಹಾರರು ಸೈನಿಕ ಮತ್ತು ಪೊಲೀಸ್ ಖಾತೆಯನ್ನು ಶಾಶ್ವತವಾಗಿಯೇ ಕಳೆದುಕೊಳ್ಳುತ್ತಿದ್ದರು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಡಾ. ಅಂಬೇಡ್ಕರ್‌ರು ಈ ಅನ್ಯಾಯದ ವಿರುದ್ಧ ಹೋರಾಡಲು ನಿರ್ಧರಿಸಿದರು. ಅಲ್ಲಲ್ಲಿ ಹೋರಾಟ ಸಮಿತಿಗಳನ್ನೂ ರಚಿಸಲಾಯಿತು. ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರಿಗೆ ಮಿಲಿಟರಿಯಲ್ಲಿಯ ವಿವಿಧ ಅವಕಾಶಗಳ ಬಗ್ಗೆ ಸಂಪೂರ್ಣವಾದ ಅರಿವು ಇತ್ತು. ಹೊರ ಪ್ರಪಂಚದಲ್ಲಿ ಅಸ್ಪೃಶ್ಯರೆಂದು, ಯಾರಿಂದಲೂ ಮುಟ್ಟಿಸಿಕೊಳ್ಳದಿದ್ದವರು ಮಿಲಿಟರಿಯಲ್ಲಿ ಸೇರಿ ಸುಭೇದಾರ್, ಜಮಾದಾರ್, ಮೇಜರ್‌ಗಳಾಗಿ ಶಿಸ್ತಿನ ಜೀವನವನ್ನು ಸಾಗಿಸುವುದನ್ನೂ ಅವರು ಬಲು ಸಮೀಪದಿಂದ ಕಂಡಿದ್ದರು. ಅಂಬೇಡ್ಕರ್ ಅವರ ತಂದೆ ರಾಮಜೀ ಮಿಲಿಟ್ರಿಯಲ್ಲೇ ಇದ್ದವರು. ತಮ್ಮ ತಂದೆ ಮಿಲಿಟರಿಯಲ್ಲಿ ಇದ್ದುದರಿಂದ ತಮಗೆ ನಾರ್ಮಲ್ ಶಾಲೆಯಲ್ಲಿ ಕಲಿಯಲು ಅವಕಾಶ ಸಿಕ್ಕಿತ್ತೆಂದು ಡಾ. ಅಂಬೇಡ್ಕರ್ ಭಾವಿಸಿದ್ದರು. ಮಿಲಿಟ್ರಿಯಲ್ಲಿಯ ಕೆಲಸವೆಂದರೆ ಅಸ್ಪೃಶ್ಯರಿಗೆ ಸಿಗುವ ಸಾಮಾಜಿಕ ಪ್ರಗತಿಯ ಹರದಾರಿಯೆಂದೂ ಅಂಬೇಡ್ಕರ್‌ರ ಅಭಿಪ್ರಾಯವಾಗಿತ್ತು. ಅಸ್ಪೃಶ್ಯ ಸೈನಿಕರ ನೆರವಿಲ್ಲದೇ ಬ್ರಿಟಿಷರು ಎರಡನೆಯ ಮಹಾಯುದ್ಧವನ್ನು ಗೆಲ್ಲುವುದು ಅಸಾಧ್ಯವಾಗಿತ್ತೆಂದೂ ಅವರು ಅರಿತಿದ್ದರು ಆದರೆ ಅದೇ ಬ್ರಿಟಿಷ್ ಸರಕಾರ ಈಗ ತಮಗೆ ಗೆಲುವನ್ನು ತಂದುಕೊಟ್ಟ ಅಸ್ಪೃಶ್ಯರನ್ನು ಮಿಲಿಟರಿಯಲ್ಲಿ ಭರ್ತಿಯಾಗುವುದನ್ನು ನಿಷೇಧಿಸಿದ್ದರಿಂದ ಅಸ್ಪೃಶ್ಯರ ಪಾಡು ಇನ್ನೂ ಕಠಿಣವಾಗುತ್ತದೆಂದು ಡಾ. ಅಂಬೇಡ್ಕರ್ ಚಳುವಳಿಯ ನಾಯಕರಾಗಲು ಸಮ್ಮತಿಸಿದರು.

ಡಾ. ಅಂಬೇಡ್ಕರ್‌ರು ಭಾರತದ ಇತಿಹಾಸವನ್ನು ಬ್ರಿಟಿಷ್ ಮತ್ತು ಮರಾಠರ ಇತಿಹಾಸವನ್ನು ಆಮೂಲಾಗ್ರವಾಗಿ ಓದಿ ಅಧ್ಯಯನ ಮಾಡಿದವರು. ಬ್ರಿಟಿಷ್ ಮತ್ತು ಪೇಶ್ವೆಗಳ ನಡುವೆ ಜನೇವರಿ 1, 1818ರಲ್ಲಿ ಕೋರೆಗಾಂವದಲ್ಲಿ ಭಯಂಕರವಾದ ಯುದ್ಧ ನಡೆದಿತ್ತು. ಆ ಯುದ್ಧದಲ್ಲಿ ಬ್ರಿಟಿಷರ ಸೈನ್ಯದಲ್ಲಿದ ಕೆಲವೇ ಜನ ಮಹಾರ್ ಸೈನಿಕರು ಪೇಶ್ವೆಗಳ ದೊಡ್ಡ ಸಂಖ್ಯೆಯ ಸೈನಿಕರನ್ನು ಸೋಲಿಸಿ ಬ್ರಿಟಿಷರಿಗೆ ಗೆಲುವನ್ನು ತಂದುಕೊಟ್ಟಿದ್ದರು. ಈ ಕೋರೆಗಾಂವ ಯುದ್ಧವು ಇತಿಹಾಸದಲ್ಲಿ ವಿಶಿಷ್ಟ ಗೌರವಕ್ಕೆ ಪಾತ್ರವಾದ ಯುದ್ಧವಾಗಿತ್ತು. ಒಂದು ವೇಳೆ ಈ ಯುದ್ಧದಲ್ಲಿ ಬ್ರಿಟಿಷರಿಗೆ ಸೋಲುಂಟಾಗಿದ್ದರೆ, ಅವರ ಸಾಮ್ರಾಜ್ಯದ ಸ್ಥಾಪನೆ ಭಾರತದಲ್ಲಿ ಆಗುತ್ತಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಅಳಿವು ಉಳಿವಿನ ಈ ಯುದ್ಧದಲ್ಲಿ ಮಹತ್ವದ ಪಾತ್ರವನ್ನಾಡಿದವರು ಅಸ್ಪೃಶ್ಯ ಸೈನಿಕರು, ಅವರ ಶೂರತ್ವ, ವೀರತ್ವಗಳ ಎದುರು ಪೇಶ್ವೆ ಸೈನಿಕರು ಸೋತು ಹೋದರು. ಪೇಶ್ವೆಗಳ 30,000 ಸೈನಿಕರ ಎದುರು ಕೇವಲ 500 ಅಸ್ಪೃಶ್ಯ ಸೈನಿಕರು. ಪೇಶ್ವೆಗಳ ಸೈನ್ಯವನ್ನು ಧೂಳೀಪಟ ಮಾಡಿ, ಒರೆಸಿ ಹಾಕಿದ್ದರು.

ಮುಂದುವರಿಯುವುದು...

ಸೌಜನ್ಯ : ಅನ್ವೇಷಣೆ : ಜುಲೈ – ಆಗಸ್ಟ್ 2002ರ ಸಂಚಿಕೆ
ಸಂಪಾದಕರು : ಆರ್.ಜಿ. ಹಳ್ಳಿ ನಾಗರಾಜ

FREEDOM MOVEMENT IN BENGALURU

Suresh Moona, (Noted Historian, Author and Columnist on the History of Bangalore

We are really fortunate to witness the platinum jubilee of our Independence Day celebration. Thousands of freedom fighters, both men and women have laid their lives to get this invaluable possession. However, there is some misconception that Bangalore has not played a very active role in this struggle. On the other hand, during the Quit India movement combined effort of students and laborers of various industries of the city gave a boost to the struggle which had receded for some time in a few other states Locations like Banappa Park, Mysore Bank Circle, Kempe Gowda Road, Tulsi Thota, Central Jail, National College Circle T.Siddalingaiah Circle, Bhashyam Circle, and a few other locations are still existing as mute witnesses to the freedom struggle staged by various leaders, factory workers, civilians and students followed by police excesses, lathi charges, firings and deaths. They are the freedom movement memorials of the city.

Biographical works of Some veterans like HS Doreswamy, Nitturu Srinivasa Rao, Tirumale Tata Sharma, Dr. H. Srinivasaiah, Sri S. Nijalingappa, Dr. H Narasimhaiah, K. Hanumanthaiah give a vivid picture of the scenario of freedom struggle at these locations including the Central jail which was transformed into freedom park in 2008. Even a glimpse of what happened at that time at some of these Cover from Bangalore show spaces should make the present generation to feel proud for the prominent role played by the city in the great movement. An introduction to three such locations is given here.

BANAPPA PARK: Towards the end of 1937, KF Nariman, the President of the Bombay Municipal Council and a well-known Congressman, was invited to preside over the All India Local Self-Government Conference at Mysore, during Dasara Festival. In Bangalore, he had to address a public meeting on October 24, 1937. Even as Nariman was going to the dais, he was pulled down from the stage by a



Police Inspector. Nariman was arrested, taken outside the borders of the state and released. To protest the ill-treatment of the state guest, a hartal was held. The police chief, Hamilton, not only abused the people but also ordered firing.

Several were injured and many were arrested. The Police also entered the intermediate college and beat up students and teachers. V. Seetharamaiah, renowned teacher and poet, got injured on his knees.

KEMPEGOWDA ROAD: During the Quit India Movement, when Gandhiji and other leaders were arrested on 9 August 1942, there was widespread agitation and many people assembled in Banappa Park, and agitation went on for some time. Though the park was so important, the ever-increasing traffic on the adjacent KG Road relegated it to the background. However, the government built a beautiful stupa in 1985 in black granite stone on a big platform. On the top, there is a spinning wheel. This structure is called the Freedom fighters Memorial'

Diagonally opposite to the Mysore Bank building, is a small circle. There is a martyr's memorial behind a temple on this traffic island. On an elevated pedestal, a granite stone slab of about four feet high has been erected. It carries the names of four martyrs: Shamanna Bin Bete Rangappa, G V Thirumalaiah, Prahallada Shetty, and Gundappa. Of these, Thirumalllaiiah died when the police fired on agitating students in Malleshwaram Circle. It is said that for some time the Malleshwaram Circle was called the Thirumallaiah circle. Gundappa died during the Nariman episode.

To be continued...

ಅಂತರರಾಷ್ಟ್ರೀಯ ಸುದ್ದಿ ಸಮಾಚಾರಗಳು

ಸಂಗ್ರಹ : ಡಾ. ಅಶೋಕ್ ಕುಮಾರ್)


ಸ್ವೀಡನ್ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ಪ್ರಧಾನಿ ಮ್ಯಾಗ್ಡಲಿನಾ ಆಂಡರ್ಸನ್ ಆಯ್ಕೆ



ಸ್ವೀಡನ್‌ನ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳೆಯೊಬ್ಬರು ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಸ್ವೀಡಿಷ್ ಸಂಸತ್ತು ಇದೇ ಮೊದಲ ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ನಾಯಕಿ ಹಾಗೂ ಪ್ರಸ್ತುತ ಸರ್ಕಾರದಲ್ಲಿ ಹಣಕಾಸು ಸಚಿವೆಯಾಗಿದ್ದ ಮ್ಯಾಗ್ಡಲೀನಾ ಆಂಡರ್ಸನ್ ಅವರನ್ನು ಪ್ರಧಾನಿಯಾಗಿ ಆಯ್ಕೆ ಮಾಡಿದೆ. ಸ್ವೀಡನ್ ದೇಶದ ಇತಿಹಾಸದಲ್ಲಿ ಉನ್ನತ ಅಧಿಕಾರ ವಹಿಸಿಕೊಂಡ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಮ್ಯಾಗ್ಡಲೀನಾ ಪಾತ್ರರಾಗಿದ್ದಾರೆ. ಸ್ವೀಡನ್ ಸಂಸತ್ತು ರಿಕ್ಸ್‌ಡಾಗ್ 349 ಸದಸ್ಯ ಬಲ ಹೊಂದಿದ್ದು, ಮ್ಯಾಗ್ಡಲೀನಾ ಆಂಡರ್ಸನ್ ಅವರ ಪರವಾಗಿ 117, ಅವರ ವಿರುದ್ಧವಾಗಿ 174 ಮಂದಿ ಮತ ಚಲಾಯಿಸಿದ್ದಾರೆ. ನವೆಂಬರ್ 10ರಂದು ತಮ್ಮ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 7 ವರ್ಷಗಳ ಕಾಲ ಸ್ವೀಡನ್ ಪ್ರಧಾನಮಂತ್ರಿಯಾಗಿದ್ದ ಅವರ ಸ್ಥಾನಕ್ಕೆ ಆಂಡರ್ಸನ್ ಅವರನ್ನು ಆಯ್ಕೆ ಮಾಡಲಾಗಿದೆ. ಲಿಂಗ ಸಂಬಂಧಿ ವಿಚಾರಗಳಲ್ಲಿ ಯುರೋಪಿನ ಅತ್ಯಂತ ಪ್ರಗತಿಪರ ರಾಷ್ಟ್ರಗಳಲ್ಲಿ ಒಂದಾಗಿರುವ ಸ್ವೀಡನ್‌ನಲ್ಲಿ ಇದುವರೆಗೆ ರಾಜಕೀಯದ ಉನ್ನತ ಹುದ್ದೆಯಲ್ಲಿ ಮಹಿಳೆಯರಿಗೆ ಸ್ಥಾನ ದೊರೆತಿರಲಿಲ್ಲ. ಹೀಗಾಗಿ, ಈ ಬೆಳವಣಿಗೆಯು ಸ್ವೀಡನ್‌ನಲ್ಲಿ ಒಂದು ಮೈಲಿಗಲ್ಲು ಎನ್ನಲಾಗಿದೆ. ಮ್ಯಾಗ್ಡಲೀನಾ ಆಂಡರ್ಸನ್ ಅವರ ಹೆಸರನ್ನು ಪ್ರಧಾನ ಮಂತ್ರಿ ಹುದ್ದೆಗೆ ಘೋಷಣೆ ಮಾಡುತ್ತಿದ್ದಂತೆ ಸಂಸತ್ತಿನ ಎಲ್ಲಾ ವಿಭಾಗಗಳ ಪ್ರತಿನಿಧಿಗಳು, ಅಧಿಕಾರಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ ಗೌರವ ಸಲ್ಲಿಸಿದ್ದಾರೆ ಎಂದು ಸ್ವೀಡನ್ ಮಾಧ್ಯಮಗಳು ತಿಳಿಸಿವೆ. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿರುವ ಮಾಜಿ ಈಜು ಚಾಂಪಿಯನ್ ಮ್ಯಾಗ್ಡಲೀನಾ 1996ರಲ್ಲಿ ಪ್ರಧಾನ ಮಂತ್ರಿ ಗೋರನ್ ಪರ್ಸನ್ ಅವರ ರಾಜಕೀಯ ಸಲಹೆಗಾರರಾಗಿ ತಮ್ಮ ರಾಜಕೀಯ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದರು.

ಸೌಜನ್ಯ : ಟಿವಿ9 ಕನ್ನಡ ನ್ಯೂಸ್

ವಿಶ್ವದಲ್ಲಿಯೇ ಅತ್ಯಂತ ಅಪಾಯಕಾರಿ ಮರ!



ಬಿಸಿಲಿಗೆ ದಣಿದಿದ್ದಾಗ, ತಂಪಾದ ಜಾಗದಲ್ಲಿ ನಿಲ್ಲಬೇಕೆಂಬ ಪರಿಸ್ಥಿತಿ ಬಂದಾಗ ಎಲ್ಲರೂ ಮರಗಳಡಿಯಲ್ಲಿ ಹೋಗಿ ನಿಲ್ಲುತ್ತಾರೆ. ಮರ, ಗಿಡಗಳು ನಮ್ಮ ಬದುಕಿನಲ್ಲಿ ಎಷ್ಟು ಮುಖ್ಯ ಎಂದು ಎಲ್ಲರಿಗೂ ಗೊತ್ತಿದೆ. ಆದರೆ, ಎಂದಾದರೂ ಮರವೇ ಮಾರಣಾಂತಿಕವಾಗಿ ಪರಿಣಮಿಸುವುದನ್ನೂ ಕೇಳಿದ್ದೀರಾ...? ಅಂತಹದ್ದೊಂದು ಅಪಾಯಕಾರಿ ಮರ ಇದೆ. 'ವಿಶ್ವದ ಅತ್ಯಂತ ಅಪಾಯಕಾರಿ' ವೃಕ್ಷ ಎಂಬ ಕುಖ್ಯಾತಿಗೆ ಪಾತ್ರವಾಗಿರುವ ವಿಷಕಾರಿ 'ಮಂಚಿನೀಲ್' ಎಂಬ ಮರದ ಕಥೆ. ಇದನ್ನು 'ಸಾವಿನ ಮರ' ಎಂದೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ಫ್ಲೋರಿಡಾ ಮತ್ತು ಕೆರಿಬಿಯನ್ ಕರಾವಳಿ ಪ್ರದೇಶದಲ್ಲಿ ಕಂಡು ಬರುವ ಮರ ಇದು. ಈ ಭಾಗದ ಜೌಗು ಪ್ರದೇಶದಲ್ಲಿ ಸುಮಾರು 50 ಅಡಿ ಎತ್ತರ ಬೆಳೆಯುವ ಈ ಮರದ ಬಳಿ ಹೋಗುವುದಕ್ಕೇ ಜನ ಹೆದರುತ್ತಾರೆ. 'ಮಂಚಿನೀಲ್' ಮರ ಅದೆಷ್ಟು ವಿಷಕಾರಿಯಾಗಿದೆ ಎಂದರೆ ಮಳೆಯ ಸಮಯದಲ್ಲಿ ಈ ವೃಕ್ಷದ ಕೆಳಗೆ ನಿಂತರೆ ಚರ್ಮವು ಸುಟ್ಟಂತಹ ಅನುಭವವಾಗುತ್ತದೆ. ಈ ಮರದ ಹಣ್ಣನ್ನು ತಿಂದರಂತು ಆಂತರಿಕ ರಕ್ತಸ್ರಾವ ಉಂಟಾಗುತ್ತದೆ. ಒಮ್ಮೊಮ್ಮೆ ಸಾವಿಗೂ ಕಾರಣವಾಗಬಹುದು...! ಈ ಮರದ ತೊಗಟೆ, ಎಲೆ ಮತ್ತು ಹಣ್ಣುಗಳಲ್ಲಿ ಹಾಲಿನಂತಹ ದಪ್ಪ ದ್ರವವನ್ನು ಬರುತ್ತದೆ. ಈ ದ್ರವ ಚರ್ಮದ ಸಂಪರ್ಕಕ್ಕೆ ಬಂದರೆ ತೀವ್ರವಾದ ಸುಟ್ಟಂತಹ ಗುಳ್ಳೆಗಳು ಉಂಟಾಗುತ್ತವೆ. ಬರೀ ಅಷ್ಟೇ ಅಲ್ಲ ಮಂಚಿನೀಲ್ ಮರದ ಕಟ್ಟಿಗೆ ಸುಟ್ಟಾಗ ಬರುವ ಹೊಗೆಯಿಂದ ಕಣ್ಣಿನ ಉರಿಯೂತ ಮತ್ತು ತಾತ್ಕಾಲಿಕ ಕುರುಡುತನ ಕಾಡಿದ್ದೂ ಇದೆ ಎಂದು ಹೇಳಲಾಗುತ್ತಿದೆ. ಆದರೆ, ಈ ಮರಗಳು ಇಲ್ಲಿನ ಪರಿಸರ ವ್ಯವಸ್ಥೆಗೆ ಬಹಳ ಅಗತ್ಯವೂ ಆಗಿದೆ. ಸಮುದ್ರದ ಅಲೆಗಳಿಂದ ಉಂಟಾಗುವ ಮಣ್ಣಿನ ಸವೆತವನ್ನು ಇವುಗಳು ತಡೆಯಲು ಸಹಾಯ ಮಾಡುತ್ತವೆ. ಈ ಸಾವಿನ ಮರ ಈ ಭಾಗದಲ್ಲಿ ಅದೆಷ್ಟು ಭೀತಿ ಮೂಡಿಸಿದೆ ಎಂದರೆ ಈ ಮರ ಇರುವ ಪ್ರದೇಶಗಳಲ್ಲಿ ಎಚ್ಚರಿಕೆಯ ಫಲಕಗಳನ್ನೂ ಅಳವಡಿಸಲಾಗಿದೆ.

ಸೌಜನ್ಯ : ವಿಜಯ ಕರ್ನಾಟಕ

ಚೀನಾದ ಸಾಲದ ಬಲೆಗೆ ಸಿಕ್ಕಿದ ಉಗಾಂಡ : ಏಕೈಕ ವಿಮಾನ ನಿಲ್ದಾಣವೂ ಡ್ರ್ಯಾಗನ್ ವಶಕ್ಕೆ?



ವಿಶ್ವದ ಬಡ ದೇಶಗಳಿಗೆ ನೆರವಿನ ಹೆಸರಿನಲ್ಲಿ ಸಾಲ ನೀಡಿ ಬಳಿಕ ಆ ದೇಶದ ಆಸ್ತಿಯನ್ನು ವಶಪಡಿಸಿಕೊಳ್ಳುವ ಚೀನಾದ ಕುತಂತ್ರಕ್ಕೆ ಇದೀಗ ಪೂರ್ವ ಆಫ್ರಿಕಾದ ಉಗಾಂಡ ಸಹ ಸಿಲುಕಿಕೊಂಡಿದೆ. ಪರಿಣಾಮ ತನ್ನ ದೇಶದ ಏಕೈಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನೂ ಕಳೆದುಕೊಳ್ಳುವ ಭೀತಿಯಲ್ಲಿ ಉಗಾಂಡ ಸರ್ಕಾರ ಇದೆ. ಈ ನಡುವೆ ಈಗಾಗಲೇ ಉಗಾಂಡದಿಂದ ಚೀನಾ ವಿಮಾನ ನಿಲ್ದಾಣ ವಶಪಡಿಸಿಕೊಂಡಿದೆ ಎಂಬ ವರದಿಗಳನ್ನು ಚೀನಾ ಮತ್ತು ಉಗಾಂಡ ಎರಡೂ ದೇಶಗಳು ಸ್ಪಷ್ಟವಾಗಿ ತಳ್ಳಿಹಾಕಿವೆ. ತನ್ನ ಎಂಟೆಬ್ಬೆ ವಿಮಾನ ನಿಲ್ದಾಣ ವಿಸ್ತರಣೆ ಮತ್ತು ಅಭಿವೃದ್ಧಿ ನಿಟ್ಟಿನಲ್ಲಿ ಉಗಾಂಡ ಸರ್ಕಾರ ಚೀನಾದ ಎಕ್ಸ್‌ಪೋರ್ಟ್– ಇಂಪೋರ್ಟ್ ಬ್ಯಾಂಕ್‌ನಿಂದ 1550 ಕೋಟಿ ರು. ಸಾಲ ಪಡೆದುಕೊಂಡಿತ್ತು. ಈ ಸಾಲ ಮರುಪಾವತಿಗೆ ಮೊದಲ 7 ವರ್ಷ ಮಾರಟೋರಿಯಂ ಇತ್ತು. ನಂತರ ಶೇ.2ರಷ್ಟುಬಡ್ಡಿಯೊಂದಿಗೆ ಹಣ ಮರುಪಾವತಿ ಮಾಡಬೇಕಿತ್ತು. ಒಂದು ವೇಳೆ ಹಣ ಮಾರುಪಾವತಿ ಮಾಡದೇ ಇದ್ದರೆ, ಯಾವುದೆ ಅಂತಾರಾಷ್ಟ್ರೀಯ ಮಧ್ಯಸ್ಥಿಕೆ ಇಲ್ಲದೆಯೇ, ವಿಮಾನ ನಿಲ್ದಾಣವನ್ನು ತನ್ನ ವಶಕ್ಕೆ ಪಡೆಯುವ ಷರತ್ತನ್ನು ಚೀನಾ ಹಾಕಿತ್ತು. ಈ ನಡುವೆ ನಾನಾ ಕಾರಣಗಳಿಂದಾಗಿ ಉಗಾಂಡ ಸರ್ಕಾರ ಹಣ ಮರುಪಾವತಿ ಮಾಡಲು ವಿಫಲವಾಗಿತ್ತು. ಹೀಗಾಗಿ ಅದು ನಿಲ್ದಾಣವನ್ನು ಚೀನಾಕ್ಕೆ ಒಪ್ಪಿಸುವ ಭೀತಿ ಎದುರಿಸುತ್ತಿತ್ತು. ಇದನ್ನು ತಪ್ಪಿಸಲು ಕೆಲ ತಿಂಗಳ ಹಿಂದೆ ಉಗಾಂಡ ಅಧಿಕಾರಿಗಳು ಚೀನಾಕ್ಕೆ ತೆರಳಿ ಕೆಲವೊಂದು ವಿನಾಯ್ತಿ ಕೋರಿದ್ದರು. ಆದರೆ ಯಾವುದೇ ವಿನಾಯ್ತಿಗೆ ಚೀನಾ ಸ್ಪಷ್ಟವಾಗಿ ನಿರಾಕರಿಸಿತ್ತು. ಹೀಗಾಗಿ ಯಾವುದೇ ಕ್ಷಣದಲ್ಲಿ ವಿಮಾನ ನಿಲ್ದಾಣ ಕಳೆದುಕೊಳ್ಳುವ ಭೀತಿಯಲ್ಲಿ ಆ ದೇಶವಿದೆ.

ಸೌಜನ್ಯ : ಸುವರ್ಣ ನ್ಯೂಸ್

ಪರಿಸರದೊಂದಿಗೆ ನಾವು

ಸಂಗ್ರಹ : ಡಾ. ಮುನಿಯಪ್ಪ


ಪ್ರಕೃತಿಯ ಪಾಠಕ್ಕೆ ಮಕ್ಕಳನ್ನು ಒಡ್ಡಿದ ಅರಿವು ಶಾಲೆ



ಮೈಸೂರಲ್ಲಿ ಲಿಂಗಾಂಬುದಿ ಪಾಳ್ಯದ ರಸ್ತೆಯಲ್ಲಿ ಒಂದು ಶಾಲೆಯಿದೆ. 'ಒಳ್ಳೆಯ ಕಲಿಕೆಯಿಂದಲೇ ಮುಂದಿನ ಜನಾಂಗ, ನಾಡು, ನುಡಿ, ಪರಿಸರ ಇವುಗಳ ಬೆಳವಣಿಗೆ' ಎಂದು ನಂಬಿರುವ ಕೆಲವು ಸಮಾನ ಮನಸ್ಕರು ಒಟ್ಟಾಗಿ "ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್" ಮಾಡಿಕೊಂಡು ಈ ಶಾಲೆಯನ್ನು ನಡೆಸುತ್ತಿದ್ದಾರೆ. ಸದ್ಯಕ್ಕೆ ಎಲ್.ಕೆ.ಜಿಯಿಂದ 2ನೇ ತರಗತಿಯವರೆಗೆ ಇರೋ ಈ ಶಾಲೆಗೆ ಈಗ 3 ವರ್ಷ ತುಂಬಿದ್ದು ಮುಂದಿನ ವರ್ಷದಿಂದ 3ನೇ ಹಾಗು 8ನೇ ತರಗತಿಗಳು ಪ್ರಾರಂಭವಾಗುವುದರಲ್ಲಿದೆ. ಕಲಿಕೆಯ ಹೊಸತಂತ್ರ! ಮಕ್ಕಳಲ್ಲಿ ಸಾಮಾಜಿಕ ಕಳಕಳಿ, ಸಾಂಸ್ಕೃತಿಕ ಬದ್ಧತೆ, ಪರಿಸರದೊಂದಿಗೆ ಹೊಂದಾಣಿಕೆ, ನಾಯಕತ್ವ ಮತ್ತು ಸಹಕಾರದ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಇಲ್ಲಿ ಪರಿಸರಕ್ಕೂ, ಮಕ್ಕಳಿಗೂ ಹಿತವೆನ್ನಿಸೋ ಕಲಿಕೆಯನ್ನು ನೀಡುತ್ತಿದೆ. ಮಕ್ಕಳಿಗೆ ತಾವಿರುವ ಪರಿಸರದಿಂದಲೇ ಶಿಕ್ಷಣ ನೀಡುತ್ತಾ ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ತಮ್ಮತನ ಕಾಯ್ದುಕೊಳ್ಳುವಂತಹ ಸುಲಭ – ಸಹಜ ಕಲಿಕೆಗೆ ಅನುವು ಮಾಡಿಕೊಡುತ್ತಿದೆ. ಪರಿಸರದ ಮೂಲಕ ಕಲಿಕೆ ಎಂದೇ ಹೊರಟಿರುವ ಅರಿವು ಶಾಲೆ ಪ್ರಕೃತಿಯ ಪಾಠಕ್ಕೆ ಮಕ್ಕಳನ್ನು ಒಡ್ಡಿದೆ. ತರಗತಿಯಲ್ಲಿ ನಡೆಯುವ ಪಠ್ಯಪುಸ್ತಕ ಶಿಕ್ಷಣದ ಜೊತೆಯಲ್ಲೇ ಪ್ರತಿವಾರ ಕೆರೆ, ಗುಡ್ಡ, ಪಕ್ಷಿ ವೀಕ್ಷಣೆ, ಸುತ್ತಲ ಗಿಡಮರಗಳ ಅಧ್ಯಯನಕ್ಕೆ ಹೋಗುತ್ತಾರೆ. ಪೊಲೀಸ್ ಸ್ಟೇಷನ್, ಇಟ್ಟಿಗೆ ಕಾರ್ಖಾನೆ, ಮ್ಯೂಸಿಯಂಗಳು, ಎಣ್ಣೆ ಗಾಣ ಹೀಗೆ ಊರಿನಲ್ಲಿರುವ ಎಲ್ಲ ಬಗೆಯ ಸ್ಥಳಗಳಿಗೆ ಹೋಗಿ ತಿಳಿವು ಹೆಚ್ಚಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಈ ರೀತಿ ತಮ್ಮ ಕಣ್ಣಿಗೆ ಕಾಣುವ ವಿಷಯಗಳ ಬಗ್ಗೆ ತಿಳಿದುಕೊಳ್ಳುವ ಮಕ್ಕಳಲ್ಲಿ ಸಹಜವಾಗಿಯೇ ಕಲಿಯುವ ಆಸಕ್ತಿ ಹೆಚ್ಚುತ್ತದೆ. "ಅರಿವು ಶಾಲೆ" ಮಕ್ಕಳಿಗೆ ವಿವಿಧ ಕ್ಷೇತ್ರದಲ್ಲಿ ವಿಪುಲ ಅವಕಾಶಗಳನ್ನು ಒದಗಿಸುತ್ತಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಸುಮಾರು 8 ತರಬೇತುದಾರರು ನಿಜವಾದ ಶಿಕ್ಷಣದತ್ತ ಮಕ್ಕಳನ್ನು ಒಯ್ಯುತ್ತಿದ್ದಾರೆ. ಈಜು, ತಬಲಾ, ರಂಗಗೀತೆಗಳು, ಶಾಸ್ತ್ರೀಯ ಸಂಗೀತ, ದೇಸಿ ಆಟಗಳು, ಇಂಗ್ಲಿಷ್ ಸಂವಹನ, ಚಾರಣ ಮುಂತಾದ ಹಲವು ಕ್ಷೇತ್ರಗಳನ್ನು ಮಕ್ಕಳಿಗೆ ಪರಿಚಯಿಸುತ್ತಾ, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರಹಾಕಿಸುತ್ತಾರೆ. ಹಾಂ... ನೀವು ಈ ಶಾಲೆಯ 1–2ನೇ ತರಗತಿಯಲ್ಲಿ ಕಲಿಯುತ್ತಿರುವ ಮಕ್ಕಳು ರಕ್ತ ಪರಿಚಲನೆ, ಮೂತ್ರೋತ್ಪತ್ತಿ, ಅಯಸ್ಕಾಂತ, ಮಸೂರಗಳ ಬಗ್ಗೆ ಮಾತನಾಡಿದರೆ ಅಚ್ಚರಿ ಪಡಬೇಕಿಲ್ಲ! ಆಡುನುಡಿಯಲ್ಲಿ ಕಲಿಯುವುದರಿಂದ ಮತ್ತು ಅನುಭವಗಳ ಸಮೇತ ಕಲಿಸುವ ಪದ್ಧತಿ ಇರುವುದರಿಂದ ಅರ್ಥವಾಗುವಷ್ಟನ್ನು ಹೇಳುತ್ತಾರೆ. ಈ ಮಕ್ಕಳಲ್ಲಿ ಕಂಡದ್ದನ್ನೆಲ್ಲಾ ಇದೇನು? ಇದೇನು? ಎಂದು ತಿಳಿದುಕೊಳ್ಳಬೇಕೆನ್ನುವ ಕುತೂಹಲ ತೋರಿಸುವುದು ಹೆಚ್ಚಿದೆ. ಮಕ್ಕಳ ಸಹಜವಾದ ಈ ಕುತೂಹಲವನ್ನು ತುಳಿಯದೆ ತಣಿಸುವ ವಾತಾವರಣ ಇಲ್ಲಿದೆ. ಸಾಹಸ ಕ್ರೀಡೆಗಳು, ಪರ್ವತಾರೋಹಣ, ಕೆರೆ ಓಡಾಟ ಮಕ್ಕಳಿಗೆ ಸಾಕಷ್ಟು ಧೈರ್ಯ ಕಲಿಸಿದೆ. ಜೀವ ಸಂಕುಲದ ಬಗ್ಗೆ ಪ್ರೀತಿ ಬೆಳೆಸಿಕೊಂಡಿರುವ ಮಕ್ಕಳು ಮುಂದೆ ಪರಿಸರ ಹಾನಿಯ ಕೆಲಸ ಮಾಡಲಾರರು ಎಂಬ ಭರವಸೆ ಮೂಡುತ್ತದೆ.

ಸೌಜನ್ಯ : ಒನ್ ಇಂಡಿಯಾ

ನೇತಾಡುವ ನೀರ್ಗಲ್ಲು ಒಡೆದು ಬಿದ್ದದ್ದೇ ಹಿಮಪ್ರವಾಹಕ್ಕೆ ಕಾರಣವಾಯಿತೇ?



ಫೆಬ್ರುವರಿ 10: ಉತ್ತರಾಖಂಡದ ಚಾಮೋಲಿ ಜಿಲ್ಲೆಯಲ್ಲಿ ಭಾನುವಾರ ಸಂಭವಿಸಿದ ಹಿಮಪ್ರವಾಹಕ್ಕೆ ನಿಖರ ಕಾರಣ ಇನ್ನೂ ಪತ್ತೆಯಾಗಿಲ್ಲ. ಹಲವು ತಜ್ಞರು ಈ ಘಟನೆ ಹಿಂದಿನ ನೈಜ ಕಾರಣದ ಬೆನ್ನು ಬಿದ್ದಿದ್ದು, ವಿಶ್ಲೇಷಣೆಗಳನ್ನು ಮಾಡುತ್ತಿದ್ದಾರೆ. ರೌಂತಿ/ಮೃಗುಥನಿ ಪರ್ವತಕ್ಕೆ ಹೊಂದಿಕೊಂಡಂತಿರುವ ನೇತಾಡುವ ಬೃಹತ್ ನೀರ್ಗಲ್ಲು ಕಳಚಿ ಬಿದ್ದಿರುವುದು ಈ ಹಿಮಪ್ರವಾಹ ಸಂಭವಿಸಲು ಕಾರಣ ಎಂದು ವಾಡಿಯಾ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಜಿಯಾಲಜಿಯ ನಿರ್ದೇಶಕ ಕಲಾಚಂದ್ ಸೇನ್ ತಿಳಿಸಿದ್ದಾರೆ. ನಂದಾದೇವಿ ಎಂಬಲ್ಲಿ ಒಡೆದಿರುವ ನೀರ್ಗಲ್ಲು ಹಿಮಪರ್ವತದ ಭಾಗವೇ ಆಗಿರುವ ನೀರ್ಗಲ್ಲು ಒಮ್ಮೆ ಒಡೆದರೆ ಪ್ರಪಾತಕ್ಕೆ ಜಾರಿ ಅನಾಹುತವನ್ನು ಸೃಷ್ಟಿಸುತ್ತದೆ ಎಂದು ವಿವರಿಸಿದ್ದಾರೆ ಅವರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಾಯದೊಂದಿಗೆ ವಾಡಿಯಾ ಸಂಸ್ಥೆ ಘಟನೆ ನಡೆದ ಸ್ಥಳದಲ್ಲಿನ ಹಲವು ಅಂಶಗಳನ್ನು ಅಧ್ಯಯನ ಮಾಡುವುದರೊಂದಿಗೆ ಈ ಹಿಮಪ್ರದೇಶದಲ್ಲಿ ಭೂಕಂಪನದ ಸಾಧ್ಯತೆಯ ಕುರಿತು ಪರಿಶೀಲಿಸಿದ್ದಾರೆ. 2013ರಲ್ಲಿಯೂ ಇದೇ ರೀತಿ ಹಿಮಪ್ರವಾಹ ಸಂಭವಿಸಿ ಸುಮಾರು ಐದು ಸಾವಿರ ಮಂದಿ ಸಾವನ್ನಪ್ಪಿದ್ದರ ಕುರಿತು ಸಂಸ್ಥೆ ಈ ಹಿಂದೆ ಅಧ್ಯಯನ ನಡೆಸಿತ್ತು. ಈ ಬಾರಿಯೂ ಅಧ್ಯಯನ ನಡೆಸಿ ಪ್ರಾಥಮಿಕ ಅಂಶಗಳನ್ನು ನೀಡಿದೆ. ವಿಜ್ಞಾನಿಗಳು ಗ್ರಹಿಕೆ ಪ್ರಕಾರ ಈ ಬೃಹತ್ ನೀರ್ಗಲ್ಲು ಕೆಲವು ಸಮಯದಿಂದ ದುರ್ಬಲವಾಗಿದ್ದು, ಕರಗುತ್ತಿರುವ ಹಿಮದಿಂದಾಗಿ ದುರ್ಬಲ ವಲಯ ಸೃಷ್ಟಿಯಾಗಿದೆ. ಈ ನೀರ್ಗಲ್ಲು ಕರಗಿ ಕಾಲಕ್ರಮೇಣ ತಾತ್ಕಾಲಿಕ ಅಣೆಕಟ್ಟಿನಂತೆ ಕಟ್ಟಿಕೊಂಡಿದ್ದು, ಒಮ್ಮೆಲೇ ಆ ನೀರು ಒಡೆದು ಪ್ರವಾಹ ಸೃಷ್ಟಿಯಾಗಿದೆ ಎನ್ನಲಾಗಿದೆ. ರಿಷಿಗಂಗಾಗೆ ಈ ಹಿಮನದಿ ಸೇರುತ್ತಿದ್ದು, ರಿಷಿಗಂಗಾ ಧೌಲಿಗಂಗಾ ನದಿ ಸೇರುತ್ತದೆ. ಹೀಗಾಗಿ ಈ ನದಿಗಳಲ್ಲಿ ಪ್ರವಾಹ ಸಂಭವಿಸಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸೌಜನ್ಯ : ಒನ್ ಇಂಡಿಯಾ (ಸಂಗ್ರಹ : ಡಾ. ಮುನಿಯಪ್ಪ)

ಸಾಧಕರು

ಸಂಗ್ರಹ : ಡಾ. ವಸುಂಧರಾ ಭೂಪತಿ

ಟ್ವಿಟರ್‌ನ ಹೊಸ ಸಾರಥಿ : ಪರಾಗ್ ಅಗರವಾಲ್



ಭಾರತೀಯ ಮೂಲದ ಪರಾಗ್ ಅಗರವಾಲ್ ಅವರು ಟ್ವಿಟರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಗೂಗಲ್, ಮೈಕ್ರೋಸಾಫ್ಟ್, ಅಡೋಬ್ ಮತ್ತು ಐಬಿಎಂ ನಂತಹ ವಿಶ್ವದ ಕೆಲವು ಉನ್ನತ ಟೆಕ್ ಕಂಪನಿಗಳನ್ನು ಮುನ್ನಡೆಸುತ್ತಿರುವ ಭಾರತೀಯ ಮೂಲದ ಸಿಇಒ ವ್ಯಕ್ತಿಗಳ ಬಗೆಗೆ ಪ್ಯಾಟ್ರಿಕ್ ಕಾಲಿಸನ್ ಎಂಬುವವರು ಒಂದು ಟ್ವೀಟ್ ಮಾಡಿದ್ದರು. ಆ ಟ್ವೀಟ್ ಗೆ ಉತ್ತರಿಸಿರುವ ವಿಶ್ವದ ಶ್ರೀಮಂತರಲ್ಲೊಬ್ಬರಾದ ಎಲಾನ್ ಮಸ್ಕ್ ಅವರು, "ಭಾರತೀಯ ಪ್ರತಿಭೆಗಳಿಂದ USA ಹೆಚ್ಚು ಪ್ರಯೋಜನ ಪಡೆಯುತ್ತದೆ!" ಎಂದು ರೀಟ್ವೀಟ್ ಮಾಡುವ ಮೂಲಕ ಗಮನ ಸೆಳೆದಿದ್ದಾರೆ. ಹೌದು, "Google, Microsoft, Adobe, IBM, Palo Alto Networks ಮತ್ತು ಈಗ Twitter ಅನ್ನು ಭಾರತದಲ್ಲಿ ಬೆಳೆದ CEO ಗಳು ನಡೆಸುತ್ತಿದ್ದಾರೆ. ತಂತ್ರಜ್ಞಾನ ಜಗತ್ತಿನಲ್ಲಿ ಭಾರತೀಯರ ಅದ್ಭುತ ಯಶಸ್ಸನ್ನು ವೀಕ್ಷಿಸಲು ಅದ್ಭುತವಾಗಿದೆ ಮತ್ತು ವಲಸಿಗರಿಗೆ ಅಮೆರಿಕ ನೀಡುವ ಅವಕಾಶದ ಉತ್ತಮ ಜ್ಞಾಪನೆಯಾಗಿದೆ. (ಅಭಿನಂದನೆಗಳು@ಪರಾಗ!)" ಎಂದು ಸಿಇಒ ಪ್ಯಾಟ್ರಿಕ್ ಕಾಲಿಸನ್ ಅವರು ಟ್ವೀಟ್ ಮಾಡಿದ್ದರು. ಆದರೆ, ಇದಕ್ಕೆ ತದ್ವಿರುದ್ಧವಾಗಿ ಭಾರತೀಯ ಸಿಇಒಗಳ ಬೆಂಬಲಕ್ಕೆ ಬಂದ ಎಲಾನ್ ಮಸ್ಕ್ ಅವರು, ಭಾರತೀಯರ ಮನಸೂರೆಗೊಳ್ಳುವಂತಹ ಟ್ವೀಟೊಂದನ್ನು ಮಾಡಿದ್ದಾರೆ. "ವಲಸಿಗರಿಗೆ ಅಮೆರಿಕಾ ನೀಡುವ ಅವಕಾಶ ಎನ್ನುವುದಕ್ಕಿಂತ ಭಾರತೀಯರಿಂದ ಅಮೆರಿಕಾಗೆ ಲಾಭವಾಗುತ್ತದೆ" ಎನ್ನುವ ಅರ್ಥದಲ್ಲಿ ಟ್ವೀಟ್ ಮಾಡಿದ್ದಾರೆ. ಭಾರತೀಯ ಪ್ರತಿಭೆಗಳಿಂದ USA ಹೆಚ್ಚು ಪ್ರಯೋಜನ ಪಡೆಯುತ್ತದೆ ಎಂದು ಅವರು ಹೇಳಿದ್ದಾರೆ.

ಸೌಜನ್ಯ : ವಿಜಯ ಕರ್ನಾಟಕ

ಲಾಕ್‌ಡೌನ್ ಅನುಭವದ ಪುಸ್ತಕ ಬರೆದು ಮೆಚ್ಚುಗೆ ಪಡೆದ ಚಿಣ್ಣರು






ಕೊರೊನಾ ಸೋಂಕು ಜನರು ಬದುಕುವ ರೀತಿಯನ್ನೇ ಬದಲಿಸಿಬಿಟ್ಟಿದೆ. ಅದರಲ್ಲೂ ಶಾಲೆಗೆ ಹೋಗುತ್ತಾ, ಆಟ ಪಾಠದಲ್ಲಿ ತೊಡಗಿಕೊಂಡಿದ್ದ ಮಕ್ಕಳನ್ನು ಈ ಸೋಂಕು ಮನೆಯೊಳಗೇ ಕೂಡಿ ಹಾಕಿದೆ. ವರ್ಷದಿಂದ ಆನ್‌ಲೈನ್ ಕ್ಲಾಸ್ ಮೂಲಕವೇ ಪಾಠ ನಡೆಯುತ್ತಿದ್ದು, ಸ್ನೇಹಿತರ ಒಡನಾಟವೂ ಇಲ್ಲವಾಗಿದೆ. ಪುಟ್ಟ ಮಕ್ಕಳಿಗೆ ಈ ಲಾಕ್‌ಡೌನ್ ಏನೆಲ್ಲಾ ಅನುಭವಗಳನ್ನು ಕೊಟ್ಟಿರಬಹುದು? ಮಕ್ಕಳು ಏನೆಲ್ಲಾ ಕಲಿತಿರಬಹುದು? ಈ ಪ್ರಶ್ನೆಗೆ ಈ ಪುಟ್ಟ ಹುಡುಗಿಯ ಪುಸ್ತಕ ಉತ್ತರ ನೀಡುವಂತಿದೆ. ಒಂದಾನೊಂದು ಕಾಲದಲ್ಲಿ... ಪುಟಾಣಿ ಮನಸಿನ ಲಾಕ್‌ಡೌನ್ ನೆನಪುಗಳು... ಬೆಂಗಳೂರಿನ ಏಳು ವರ್ಷದ ಜಿಯಾ ಗಂಗಾಧರ್ ತನ್ನ ಲಾಕ್‌ಡೌನ್ ನೆನಪುಗಳನ್ನು ಪುಸ್ತಕದ ಮೂಲಕ ಹೊರತಂದಿದ್ದಾಳೆ. ಕೊರೊನಾ ಸೋಂಕು, ಲಾಕ್‌ಡೌನ್, ಆನ್‌ಲೈನ್ ಕ್ಲಾಸ್, ಸೈಬರ್ ಕ್ರೈಂ ಹೀಗೆ ಹಲವು ವಿಷಯಗಳ ಕುರಿತು ಜಿಯಾ ತನ್ನ ಪುಸ್ತಕದಲ್ಲಿ ಬರೆದಿದ್ದಾಳೆ. "ಐ ಇಸ್ ಫಾರ್ ಲಾಕ್‌ಡೌನ್– ಜಿಯಾಸ್ ಜರ್ನಲ್ ಆಫ್ ಲಾಕ್‌ಡೌನ್ ಲೆಸನ್ಸ್" ಎಂಬ ಶೀರ್ಷಿಕೆಯ ಈ ಪುಸ್ತಕ ಇದೀಗ ಹಲವರ ಮೆಚ್ಚುಗೆ ಗಳಿಸಿಕೊಂಡಿದೆ. ಈ ಪುಟ್ಟ ಹುಡುಗಿಗೆ ಪುಸ್ತಕ ಬರೆಯಲು ಹಾಗೂ ಪುಸ್ತಕ ಹೊರತರಲು ದಿವ್ಯಾ ಎಎಸ್ ಜೊತೆಯಾಗಿದ್ದಾರೆ. ಜಿಯಾ ಎರಡನೇ ತರಗತಿ ಓದುತ್ತಿದ್ದು, ಜೆಪಿಎನ್ ಈ ಪುಸ್ತಕ ಪ್ರಕಟಣೆ ಮಾಡಿದೆ. ಕೊರೊನಾ ಕಾಲದಲ್ಲಿ ತನ್ನ ಹಲವು ನೆನಪುಗಳನ್ನು, ಅನುಭವಗಳನ್ನು ಜಿಯಾ ಈ ಪುಸ್ತಕದಲ್ಲಿ ಕಲೆ ಹಾಕಿದ್ದಾರೆ. ಇದೇ ರೀತಿ "2020–ಲಾಕ್‌ಡೌನ್ ನೆನಪುಗಳು" ಎಂಬ ಪುಸ್ತಕವನ್ನು ಬೆಂಗಳೂರಿನ ಹತ್ತು ವರ್ಷದ ಮಾನ್ಯ ಹರ್ಷಾ ಬರೆದಿದ್ದಳು. 5ನೇ ತರಗತಿ ವಿದ್ಯಾರ್ಥಿನಿಯಾಗಿರುವ ಮಾನ್ಯ "ಕನ್ನಡದ ಕಿರಿಯ ಲೇಖಕಿ" ಎಂಬ ಪ್ರಶಂಸೆಯನ್ನೂ ಪಡೆದಿದ್ದಾಳೆ. ಈಕೆಯ ಮೊದಲ ಕನ್ನಡ ಕಥೆ "ನೀರಿನ ಪುಟಾಣಿ ಸಂರಕ್ಷಕರು" ಮಕ್ಕಳ ಕಾದಂಬರಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ಸೇರಿದ್ದು, "ಕನ್ನಡದಲ್ಲಿ ಪುಸ್ತಕ ಬರೆದಿರುವ ಕಿರಿಯ ಲೇಖಕಿ" ಎಂಬ ಬಿರುದನ್ನು ತಂದುಕೊಟ್ಟಿದೆ.

ಸೌಜನ್ಯ : ಒನ್ ಇಂಡಿಯಾ

ತಾವೇ ಸೇತುವೆ ನಿರ್ಮಿಸಿದ ಮೊಗ್ರದ ಜನರು



ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಮೊಗ್ರ ಎಂಬ ಸಣ್ಣ ಹಳ್ಳಿ. ತಮ್ಮೂರಿನ ಹೊಳೆಯನ್ನು ದಾಟಲು ಅನುಭವಿಸುತ್ತಿದ್ದ ಸಮಸ್ಯೆಗೆ ತಾವೇ ಪರಿಹಾರ ಅಂತಾ ಭಾವಿಸಿ, ತಮ್ಮದೇ ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ ಸೇತುವೆಯನ್ನು ನಿರ್ಮಿಸಿದ್ದಾರೆ. ಹಲವು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಹೊಳೆ ದಾಟಲು ಸೇತುವೆಗಾಗಿ ಊರಿನ ಜನ ಮನವಿ ಮಾಡಿದ್ದರೂ ಫಲ ಸಿಕ್ಕಿರಲಿಲ್ಲ. ಮಳೆಗಾಲ ಬಂತೆಂದರೆ ಮೊಗ್ರದ ಜನರು ಪಡಬಾರದ ಕಷ್ಟ ಪಡುತ್ತಿದ್ದರು. ತಮ್ಮೂರಿನ ಹೊಳೆಯನ್ನು ದಾಟಿ ಇವರು ಪಟ್ಟಣಕ್ಕೆ ಹೋಗಬೇಕಾದರೆ ಜೀವ ಕೈಯಲ್ಲಿ ಹಿಡಿದುಕೊಂಡೆ ಹೋಗಬೇಕಿತ್ತು. ಹೀಗಾಗಿ ತಮ್ಮೂರಿನ ಹೊಳೆಗೆ ಶಾಶ್ವತ ಸೇತುವೆ ಬೇಕೆಂದು ನೇರ ಪ್ರಧಾನಿಗೆ ಮನವಿ ಮಾಡಿದ್ದರು. ಸಂಕಷ್ಟದ ವಿಡಿಯೋ ಸಿಡಿ ಕಳುಹಿಸಿ ಸೇತುವೆಗೆ ಮನವಿ ಮಾಡಿದ್ದರಿಂದ ಪ್ರಧಾನಿ ಕಾರ್ಯಾಲಯದಿಂದ ಸಮಸ್ಯೆ ಬಗೆಹರಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ಗೆ ಸೂಚನೆ ಬಂದಿತ್ತು. ಆದರೆ ಪ್ರಧಾನಿಯೇ ಸೂಚಿಸಿದರೂ ಅಧಿಕಾರಿಗಳು ಇಚ್ಛಾ ಶಕ್ತಿಯನ್ನು ಮೆರೆದಿಲ್ಲ. ಹೀಗಾಗಿ ಅಧಿಕಾರಿಗಳನ್ನು ಕಾದರೆ ಇನ್ನು ಪ್ರಯೋಜನವಿಲ್ಲ ಎಂದು ಊರಿನ ಜನರೇ ಸೇತುವೆ ನಿರ್ಮಿಸಿದ್ದಾರೆ. ಇಲ್ಲಿಯವರೆಗೂ ಕಾದಿದ್ದ ಮೊಗ್ರದ ಜನರು, ಜನಪ್ರತಿನಿಧಿಗಳಿಂದ, ಸರ್ಕಾರದಿಂದ ಪರಿಹಾರವನ್ನು ಅಪೇಕ್ಷಿಸುವುದೇ ವ್ಯರ್ಥವೆಂದು ಭಾವಿಸಿ, ಗ್ರಾಮ ಭಾರತ ಎಂಬ ಯುವಕರ ಗುಂಪು ಈ ಸೇತುವೆ ನಿರ್ಮಾಣ ಕಾಮಗಾರಿಯ ಹೊಣೆ ಹೊತ್ತು, ಗ್ರಾಮಾಸ್ಥರ ಸ್ವಂತ ಹಣ ಹಾಗೂ ದಾನಿಗಳ ಸಹಕಾರದಿಂದ ಸೇತುವೆ ನಿರ್ಮಿಸಿದ್ದಾರೆ. ಈ ಮೂಲಕ ಮಕ್ಕಳು ಗ್ರಾಮಸ್ಥರು ಅನುಭವಿಸುತ್ತಿದ್ದ ಸಂಕಷ್ಟ ದೂರವಾಗಿದೆ.

ಸೌಜನ್ಯ : ಒನ್ ಇಂಡಿಯಾ

ಸಾಮಾಜಿಕ ಮತ್ತು ಸಾಂಸ್ಕೃತಿಕ ಪುಟಗಳು

ಸಂಗ್ರಹ : ಅಖಿಲಾ ವಿದ್ಯಾಸಂದ್ರ


ದಾಖಲೆ ಮಳೆಗೆ ಹೆಚ್ಚಿದ ಅಂತರ್ಜಲ: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮೈತುಂಬಿಕೊಂಡ ಸಾವಿರ ಕೆರೆಗಳು



ಜಿಲ್ಲೆಯ ಬಹುತೇಕ ಕಡೆ ಬಂಡೆಯೊಳಗಿನ ನೀರಿಗಿಂತ ಮಣ್ಣಿನಲ್ಲಿ ಸಿಗುವ ನೀರನ್ನೇ ನೆಚ್ಚಿಕೊಂಡಿದ್ದರು. ಸದ್ಯ ಅಂತಹ ಕೊಳವೆ ಬಾವಿಗಳಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹೊರ ಬರುತ್ತಿದೆ. ಜಿಲ್ಲೆಯ ಕೆಲವೆಡೆ ಕೊಳವೆ ಬಾವಿಗಳಿಂದ ನೀರು ತನ್ನಷ್ಟಕ್ಕೆ ತಾನೇ ಹೊರ ಬರುತ್ತಿವೆ. ಕಳೆದ ಮೂರು ತಿಂಗಳಿಂದ ಸುರಿದ ನಿರಂತರ ಮಳೆಯಿಂದ ಜಿಲ್ಲೆಯಲ್ಲಿ 1,000ಕ್ಕೂ ಹೆಚ್ಚು ಕೆರೆಗಳು ಮೈದುಂಬಿಕೊಂಡಿವೆ. 90 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದ ಬೆಳೆಗಳು ನೀರು ಪಾಲಾಗಿರುವುದು ದುಃಖದ ಸಂಗತಿ. ಆದರೆ ಜಿಲ್ಲೆಯಲ್ಲಿ ಸುರಿದ ದಾಖಲೆ ಮಳೆಯಿಂದ ಅಂತರ್ಜಲ ಮಟ್ಟ ದಿನೇ ದಿನೇ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಹಲವು ದಶಕಗಳಿಂದ ಜಿಲ್ಲೆಯ ಪ್ರಮುಖ ಕೆರೆಗಳು ತುಂಬಿರಲಿಲ್ಲ. ಖಾಲಿ ಖಾಲಿಯಾಗಿದ್ದ ಕೆರೆಗಳಲ್ಲಿ ಹಾಗೂ ನದಿ ಪಾತ್ರಗಳಲ್ಲಿ ನೀರು ಉಕ್ಕಿ ಹರಿದಿತ್ತು. ಸದ್ಯ ಬೆಂಗಾಡಿನಂತೆ ಕಾಣುತ್ತಿದ್ದ ಪ್ರದೇಶಗಳಲ್ಲಿ ಹಸಿರು ಹೊದ್ದು ಮಲಗಿದೆ. ಜಿಲ್ಲೆಯಲ್ಲಿ ಕೊಳವೆ ಬಾವಿಗಳೇ ಕುಡಿಯವ ಮತ್ತು ಕೃಷಿಗೆ ಮೂಲ. ಹಿಂದೆಲ್ಲ ಕೆರೆಗಳ ನೀರನ್ನೇ ಕುಡಿಯಲು ಮತ್ತು ಕೃಷಿಗೆ ಬಳಸಲಾಗುತ್ತಿತ್ತು. ಆದರೆ ಕೆರೆಗಳು ತುಂಬುವುದೇ ಅಪರೂಪವಾದಾಗ ಬಹುತೇಕ ಕೆರೆಯ ತೂಬುಗಳನ್ನು ಮುಚ್ಚಿ ಹಾಕಿದ್ದರಿಂದ ಅಂತರ್ಜಲವನ್ನೇ ಜನರು ನೆಚ್ಚಿಕೊಂಡಿದ್ದಾರೆ. ಸದ್ಯ ಈ ಬಾರಿ ಸುರಿದ ಭಾರಿ ಮಳೆಯಿಂದ ಬಹುತೇಕ ಕೆರೆಗಳು ತುಂಬಿಕೊಂಡಿದೆ. ಜಿಲ್ಲೆಯಲ್ಲಿ 1,500 ಅಡಿವರೆಗೂ ಬೋರ್‌ವೆಲ್‌ಗಳನ್ನು ಕೊರೆದರೂ ನೀರು ಸಿಗುತ್ತಿರಲಿಲ್ಲ. ಸಿಕ್ಕರೂ ಮಳೆಗಾಲದಲ್ಲಷ್ಟೇ ನೀರು ಬರುತ್ತಿದ್ದವು. ಬೇಸಿಗೆ ಕಾಲದಲ್ಲಿ ಕುಡಿಯುವುದಷ್ಟೇ ನೀರು ಬರುತ್ತಿತ್ತು. ಆದರೆ ಈಗ ಬೋರ್‌ವೆಲ್‌ಗಳನ್ನು ಆನ್ ಮಾಡಿಯೇ ಸಾಕಷ್ಟು ತಿಂಗಳು ಕಳೆದಿವೆ. ಕೃಷಿ ಕಾರ್ಯಕ್ಕೆ ನೀರಿನ ಬಳಕೆಯೂ ಕಡಿಮೆಯಾಗಿದ್ದು ಬೋರ್‌ವೆಲ್‌ಗಳಲ್ಲಿ ಮಣ್ಣು ಮಿಶ್ರಿತ ನೀರು ಹೊರಬರುತ್ತಿದೆ. ಇದೇ ಅಂತರ್ಜಲ ಮಟ್ಟ ಹೆಚ್ಚಾಗಿರುವುದಕ್ಕೆ ನಿದರ್ಶನ ಎನ್ನಲಾಗುತ್ತಿದೆ. ಜಿಲ್ಲೆಯ ಕೆಲವೆಡೆ ಕೊಳವೆ ಬಾವಿಗಳಿಂದ ನೀರು ತನ್ನಷ್ಟಕ್ಕೆ ತಾನೇ ಹೊರ ಬರುತ್ತಿವೆ. ಇದು ರೈತರ ಮುಂದಿನ ಕೃಷಿಗೆ ಅನುಕೂಲವಾಗಲಿದೆ.

ಸೌಜನ್ಯ : ವಿಜಯ ಕರ್ನಾಟಕ

ನೌಕಾಪಡೆಯ ದಿನ



ಭಾರತೀಯ ನೌಕಾಪಡೆ ಭಾರತೀಯ ರಕ್ಷಣಾ ಪಡೆಗಳ ಒಂದು ಅಂಗ. ಇದು ಜಗತ್ತಿನ ಐದನೇಯ ಅತಿ ದೊಡ್ಡ ನೌಕಾಪಾಡೆಯಾಗಿದ್ದು, ಇದರಲ್ಲಿ ಸುಮಾರು 55000 ಜನರು ಕಾರ್ಯನಿರತರಾಗಿದ್ದಾರೆ. ಭಾರತೀಯ ನೌಕಾಪಡೆ 155 ನೌಕೆಗಳನ್ನು ಹೊಂದಿದ್ದು, ಐ.ಎನ್.ಎಸ್.ವಿರಾಟ್ ಎಂಬ ವಾಯು ಯುದ್ಧ ನೌಕೆಯನ್ನು ಹೊಂದಿದೆ. ಸಂಪೂರ್ಣ ಏಷ್ಯಾ ಖಂಡದಲ್ಲಿರುವ ಎರಡು ವಾಯು ಯುದ್ಧ ನೌಕೆಗಳಲ್ಲಿ ಇದು ಒಂದು. ಪ್ರತಿ ವರ್ಷ ಡಿಸೆಂಬರ್ 4 ರಂದು ಭಾರತದಲ್ಲಿ ನೌಕಾಪಡೆಯ ದಿನವನ್ನು ಆಚರಿಸಲಾಗುತ್ತದೆ. 1971ರಲ್ಲಿ ಇಂಡೋ–ಪಾಕಿಸ್ತಾನ ಯುದ್ಧದ ಸಮಯದಲ್ಲಿ ಪಾಕಿಸ್ತಾನದ ವಿರುದ್ಧ ಆಪರೇಷನ್ ಟ್ರೈಡೆಂಟ್‌ನ್ನು ಪ್ರಾರಂಭಿಸುವ ನೆನಪಿಗಾಗಿ ಈ ದಿನವನ್ನು ಆಯ್ಕೆ ಮಾಡಲಾಗಿದೆ. 1971 ರಲ್ಲಿ, ಪಾಕಿಸ್ತಾನವು ಡಿಸೆಂಬರ್ 3ರ ಸಂಜೆ ಭಾರತೀಯ ವಾಯುನೆಲೆಗಳ ಮೇಲೆ ಆಕ್ರಮಣವನ್ನು ಪ್ರಾರಂಭಿಸಿತು. ಭಾರತವು ಅವರ ದಾಳಿಗೆ ಪ್ರತಿಕ್ರಿಯೆಯಾಗಿ, ನಿರ್ಘಾಟ್, ವೀರ್ ಮತ್ತು ನಿಪತ್ ಎನ್ನುವ 3 ಕ್ಷಿಪಣಿ ದೋಣಿಗಳನ್ನು ಕರಾಚಿ ಕಡೆಗೆ ವೇಗದಲ್ಲಿ ರವಾನಿಸಿತು. ಆಪರೇಷನ್ ಟ್ರೈಡೆಂಟ್ ಸಮಯದಲ್ಲಿ ಭಾರತೀಯ ನೌಕಾಪಡೆಯು PNS ಖೈಬರ್ ಸೇರಿದಂತೆ 4 ಪಾಕಿಸ್ತಾನಿ ಹಡಗುಗಳನ್ನು ಮುಳುಗಿಸಿತು. 1971ರ ಯುದ್ಧದ ವಿಜಯದ 50ನೇ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ 2021 ಅನ್ನು 'ಸ್ವರ್ಣಿಮ್ ವಿಜಯ್ ವರ್ಷ್' ಎಂದು ಆಚರಿಸಲು ಯೋಜಿಸಿದೆ. ಭಾರತೀಯ ನೌಕಾಪಡೆಯನ್ನು ಈಸ್ಟ್ ಇಂಡಿಯಾ ಕಂಪನಿಯು 1612 ರಲ್ಲಿ ಸ್ಥಾಪಿಸಿತು. ನಂತರ ಇದನ್ನು ರಾಯಲ್ ಇಂಡಿಯಾ ನೇವಿ ಎಂದು ಹೆಸರಿಸಲಾಯಿತು ಮತ್ತು ಸ್ವಾತಂತ್ರ್ಯದ ನಂತರ ಇದನ್ನು 1950ರಲ್ಲಿ ಭಾರತೀಯ ನೌಕಾಪಡೆ ಎಂದು ಮರು ಸಂಘಟಿಸಲಾಯಿತು. ಮೂರು ಕಡೆ ಸಾಗರ ಆವರಿಸಿರುವ ಭಾರತದ ರಕ್ಷಣೆಗೆ ಕನಿಷ್ಠ ಮೂರು ವಿಮಾನವಾಹಕ ನೌಕೆಗಳು ಬೇಕು. ಆದರೆ ಭಾರತ ಈಗ 'INS ವಿಕ್ರಮಾದಿತ್ಯ' ಒಂದನ್ನೇ ನೆಚ್ಚಿದೆ. ಈ ನೌಕೆಯಲ್ಲಿ ಒಟ್ಟು 22 ಡೆಕ್‌ಗಳಿದ್ದು, 1600ರಷ್ಟು ಸಿಬ್ಬಂದಿಯನ್ನು ಒಯ್ಯುತ್ತದೆ. ಕೀವ್– ಕ್ಲಾಸ್ ವಿಮಾನ ಹೊತ್ತೊಯ್ಯುವ– ಮಾರ್ಪಾಟು ಮಾಡಲಾದ ಈ ಯುದ್ಧ ನೌಕೆಯನ್ನು ಭಾರತವು ರಷ್ಯಾದಿಂದ 2013ನೇ ಇಸವಿಯಲ್ಲಿ ಖರೀದಿ ಮಾಡಿದೆ. ಆ ನಂತರ ಅದಕ್ಕೆ ಭಾರತದ ಖ್ಯಾತ ಸಾಮ್ರಾಟ ವಿಕ್ರಮಾದಿತ್ಯನ ಹೆಸರನ್ನು ಇಡಲಾಯಿತು. ಭಾರತೀಯ ನೌಕಾಪಡೆ ಭಾರತದ ಸ್ವದೇಶಿ ನಿರ್ಮಿತ ವಿಮಾನವಾಹಕ ನೌಕೆ 'ಐಎನ್‌ಎಸ್ ವಿಕ್ರಾಂತ್' 2013ರಲ್ಲಿ ಸಾಗರಕ್ಕಿಳಿದಿದೆ. ಆದರೆ ಇನ್ನೂ ಅದರ ಪರೀಕ್ಷೆಗಳು ಮುಗಿದಿಲ್ಲ. ಇದು 2020ರ ವೇಳೆಗೆ ಸೇವೆಗೆ ಲಭ್ಯವಾಗಬಹುದು. ಕೊಚಿನ್‌ನಲ್ಲಿ ನಿರ್ಮಾಣವಾಗುತ್ತಿರುವ ಭಾರತದ ಮತ್ತೊಂದು ವಿಮಾನ ವಾಹಕ ನೌಕೆ 2023ರ ವೇಳೆಗೆ ನೌಕಾಪಡೆ ಸೇವೆಗೆ ಲಭ್ಯವಾಗುವ ನಿರೀಕ್ಷೆ ಇದೆ.

ಸೌಜನ್ಯ : ಒನ್ ಇಂಡಿಯಾ

ಸಂಗ್ರಹ : ಅಖಿಲಾ ವಿದ್ಯಾಸಂದ್ರ

ಕ್ರೀಡಾ ಸಾಂಸ್ಕೃತಿಕ ಲೋಕಕ್ಕೆ ಜಾತಿ ವಿಷಜಂತುಗಳ ಅಪಾಯ

ನಮ್ಮ ದೇಶದ ಕ್ರೀಡಾ ಮತ್ತು ಸಾಂಸ್ಕೃತಿಕ ಲೋಕದ ಮೇಲೆ ಜಾತಿಯ ವಿಷ ಜಂತುಗಳು ದಾಳಿ ಮಾಡುತ್ತಿವೆ. ಇದು ಕ್ರೀಡೆ ಮತ್ತು ಸಾಂಸ್ಕೃತಿಕ ಲೋಕದ ಸಾರಸತ್ವವನ್ನು ನಾಶ ಮಾಡುವ ಅಪಾಯವಿದ್ದು, ಎಲ್ಲರೂ ಎಚ್ಚೆತ್ತುಕೊಳ್ಳಬೇಕಾದ ಜರೂರಿದೆ.

ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದ ಮೇಲೆ ನಡೆದ ಮೂರು ದಾಳಿಗಳನ್ನು ಉಲ್ಲೇಖಿಸಿದ್ದೇನೆ. ಮೊದಲನೆಯದಾಗಿ 'ತಾರಕ್ ಮಹಾ ಕಾ ಉಲ್ಲಾ ಚಸ್ಮಾ' ಸೀರಿಯಲ್ ಖ್ಯಾತಿಯ ಹಿಂದಿ ಕಿರುತೆರೆ ನಟಿ ಮುಸ್ಲಿಮುನ ದತ್ತ ಯೂಟ್ಯೂಬ್‌ನಲ್ಲಿ ಹಂಚಿಕೊಂಡಿರುವ ವೀಡಿಯೊದಲ್ಲಿ ತಮ್ಮ ಮೇಕಪ್ ಬಗ್ಗೆ ಮಾಹಿತಿ ನೀಡಿದ್ದರು. ಅದರಲ್ಲಿ 'ನಾನು ಚೆನ್ನಾಗಿ ಕಾಣಬೇಕೆಂದು ಸ್ವಲ್ಪ ಮೇಕಪ್ ಮಾಡಿಕೊಂಡಿದ್ದೇನೆ. ಆ ಜಾತಿಯವರಂತೆ ಕಾಣಲು ನನಗೆ ಇಷ್ಟವಿಲ್ಲ' ಎಂದು ತಳಸಮುದಾಯದವರನ್ನು ಉಲ್ಲೇಖಿಸಿ ಹೇಳಿದ್ದರು. ಆಕೆಯ ಈ ಮಾತು ಸಾಂಸ್ಕೃತಿಕ ಲೋಕದ ಅಂತಃಸತ್ವಕ್ಕೆ ನೀಡಿದ ಪೆಟ್ಟು. ನಿಜವಾಗಿಯೂ ಈಕೆ ದೇಹಕ್ಕೆ ಮಾಡಿಕೊಳ್ಳುವ ಮೇಕಪ್‌ಅನ್ನು ಕೊಳಕಾಗಿರುವ ತನ್ನ ಮನಸ್ಸಿಗೂ ಮಾಡಿಕೊಳ್ಳುವ ಅಗತ್ಯವಿದೆ. ಮತ್ತೊಂದು ಘಟನೆಯೆಂದರೆ ತಮಿಳಿನ ಬಿಗ್ ಬಾಸ್ ಸೀಸನ್ 3ರಲ್ಲಿ ಭಾಗವಹಿಸಿದ್ದ ಮೀರಾ ಮಿಥುನ್ ಎಂಬ ತಮಿಳು ನಟಿ ಯೂಟ್ಯೂಬ್ ಚಾನಲ್ ಒಂದಕ್ಕೆ ಸಂದರ್ಶನ ನೀಡುವ ವೇಳೆ "ಸಿನೆಮಾ ಉದ್ಯಮದಲ್ಲಿನ ಎಲ್ಲಾ ತಮ್ಮ ಚಟುವಟಿಕೆಗಳಿಗೆ ಪರಿಶಿಷ್ಟ ಜಾತಿಯ ನಿರ್ದೇಶಕರು ಮತ್ತು ಎಸ್ಸಿ ಸಮುದಾಯದ ಸದಸ್ಯರೇ ಕಾರಣ, ಸಿನೆಮಾ ಉದ್ಯಮದಲ್ಲಿನ ಎಲ್ಲಾ ಪರಿಶಿಷ್ಟ ಜಾತಿಯ ಜನರನ್ನು, ನಿರ್ದೇಶಕರನ್ನು ಹೊರಹಾಕುವ ಸಮಯವಿದು ಎಂದು ನಾನು ಭಾವಿಸುತ್ತೇನೆ" ಅಂತ ಮೊನ್ನೆಯಷ್ಟೇ ಹೇಳಿದ್ದರು. ಇನ್ನೊಂದು ಘಟನೆ ಟೋಕಿಯೊದಲ್ಲಿ ನಡೆದ ಒಲಿಂಪಿಕ್ಸ್ ನಲ್ಲಿ ಆಡಿದ ಮಹಿಳಾ ಹಾಕಿ ತಂಡದಲ್ಲಿ "ದಲಿತ ಹೆಣ್ಣುಮಕ್ಕಳು ಇದ್ದದ್ದೇ ಸೋಲಿಗೆ ಕಾರಣ' ಎಂದು ಹರಿದ್ವಾರದಲ್ಲಿ ಮೇಲ್ವರ್ಗದವರು ವಂದನಾ ಕಟಾರಿಯ ಅವರ ಮನೆ ಎದುರು ಗಲಾಟೆ ಮಾಡಿದ್ದು, ಈ ಮೂರು ಪ್ರಕರಣಗಳು ನಮ್ಮ ದೇಶದ ಸಾಮಾಜಿಕ ತಾರತಮ್ಯ ಇಂದಿಗೂ ಎಷ್ಟು ಜೀವಂತ ಎನ್ನುವುದನ್ನು ಸಾಕ್ಷೀಕರಿಸಿವೆ.

ಯಾರೇ ಉನ್ನತ ಸ್ಥಾನಕ್ಕೇರುವಾಗ ಜಾತಿ ಮುಖ್ಯವಲ್ಲ. ಬದಲಾಗಿ ನಮ್ಮ ಶ್ರದ್ಧೆ, ಪರಿಶ್ರಮ ನಮ್ಮನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯಬಲ್ಲವು. ಭಾರತದ ಹಾಕಿ ತಂಡದಲ್ಲಿ ಆಡಿದ ಆಟಗಾರ್ತಿ ವಂದನಾ ಕಟಾರಿಯಾ ಕೂಡ ತನ್ನ ನಿರಂತರ ಪರಿಶ್ರಮ, ಶ್ರದ್ಧೆಯಿಂದ ಶ್ರೇಷ್ಠರಾಗಿದ್ದಾರೆ. ಆದರೆ 'ತಂಡದಲ್ಲಿ ದಲಿತ ಹೆಣ್ಣುಮಕ್ಕಳೇ ಇದ್ದುದ್ದರಿಂದ ಸೋತರು' ಎಂದು ಹೀಯಾಳಿಸಿರುವುದು ಇಡೀ ದೇಶವೇ ನಾಚಿಕೆಪಡುವಂತೆ ಮಾಡಿದೆ. ಕನ್ನಡದ ಸುವರ್ಣ ಯುಗ ಎಂದು ಗುರುತಿಸುವ 10ನೇ ಶತಮಾನದಲ್ಲೇ ಬಂದು ಇಂದಿಗೂ ಅಜರಾಮರವಾಗಿ ಉಳಿದಿರುವ ಆದಿ ಕವಿ ಪಂಪ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಹೇಳಿದ. ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಅರ್ಜುನನನ್ನು ಕಥಾ ನಾಯಕನನ್ನಾಗಿ ಮಾಡಿಕೊಂಡರೆ, ಕರ್ಣನನ್ನು ಪ್ರತಿನಾಯಕನನ್ನಾಗಿ ಮಾಡಿ ಇಡೀ ಮಹಾಭಾರತದಲ್ಲಿ ಕರ್ಣನನ್ನು ನೆನೆಯುತ್ತಾನೆ. ಅದನ್ನೇ 12ನೇ ಶತಮಾನದಲ್ಲಿಯೇ ಸರ್ವಜ್ಞ ಕವಿ 'ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ' ಎಂದು ಪ್ರಶ್ನಿಸಿದ್ದರು. ಜ್ಯೋತಿಯನ್ನು ಎಲ್ಲಿಯೇ ಇರಿಸಿ ಹಚ್ಚಿದರೂ ಅದು ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ಚೆಲ್ಲುತ್ತದೆ. ವಂದನಾ ಕಟಾರಿಯಾ ಕೂಡ ದಕ್ಷಿಣ ಆಫ್ರಿಕಾದ ವಿರುದ್ಧದ ಕೊನೆಯ ಗುಂಪಿನ ಪಂದ್ಯದಲ್ಲಿ ಹ್ಯಾಟ್ರಿಕ್ ಗೋಲುಗಳನ್ನು ಬಾರಿಸಿ ಒಲಿಂಪಿಕ್ಸ್‌ನಲ್ಲಿ ಅವರ ಅದ್ಭುತ ಆಟದಿಂದಲೇ ಭಾರತ



ಇತಿಹಾಸದಲ್ಲಿ ಮೊದಲ ಬಾರಿಗೆ ನಾಕೌಟ್ ಸುತ್ತಿಗೆ ಅರ್ಹತೆ ಪಡೆದು 41 ವರ್ಷಗಳಲ್ಲಿನ ಅತ್ಯುತ್ತಮ ಪ್ರದರ್ಶನವಾಗಿದೆ ಎನ್ನುವುದು ಈ ಕೊಳಕು ಮನಸ್ಥಿತಿಗಳಿಗೆ ಅರ್ಥವಾಗಬೇಕಿತ್ತು. ಇಂದು ಹೆಣ್ಣು ಮಕ್ಕಳು ಭವ್ಯಭಾರತದ ಕನಸು ಹೊತ್ತು ಎಲ್ಲಾ ರಂಗಗಳಲ್ಲಿಯೂ ಇಂದು ಕ್ರೀಡೆ, ಸೇನೆ ಅಷ್ಟೇ ಅಲ್ಲ, ಅಂತರಿಕ್ಷ ಯಾನವನ್ನು ಮಾಡಿ ತಮ್ಮ ಮೈಲುಗಲ್ಲುಗಳನ್ನು ನೆಟ್ಟಿದ್ದಾರೆ. ಭಾರತದ ಕೀರ್ತಿ ಪತಾಕೆಯನ್ನು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹಾರಿಸುವ ದಿಟ್ಟ ಹೋರಾಟ ಮಾಡಿದ್ದಾರೆ. 1984ರಲ್ಲಿ ಅಮೇರಿಕದ ಲಾಸ್ ಏಂಜೆಲೀಸ್‌ನಲ್ಲಿ ಒಲಿಂಪಿಕ್ಸ್ ಕ್ರೀಡಾಕೂಟ ನಡೆಯಿತು. ಅಥ್ಲೆಟಿಕ್ಸ್‌ನಲ್ಲಿ ಅದುವರೆಗೆ ಬರೀ ನಿರಾಸೆಯನ್ನು ಅನುಭವಿಸಿದ್ದ ಭಾರತ ಮೊದಲ ಬಾರಿಗೆ 400 ಮೀಟರ್ ಹರ್ಡಲ್ಸ್‌ನಲ್ಲಿ ಪಿ.ಟಿ. ಉಷಾ ನಾಲ್ಕನೇ ಸ್ಥಾನ ಪಡೆದರು. ಮೂರನೇ ಸ್ಥಾನಕ್ಕಿದ್ದ ಅಂತರ ಕೇವಲ 1/100 ಸೆಕಂಡ್ ಅಷ್ಟೇ. ಆ ವೇಳೆ ಪಿ.ಟಿ. ಉಷಾ ಅವರ ಸಾಧನೆ ನೋಡಿ ಇಡೀ ದೇಶವೇ ಕಂಬನಿ ತುಂಬಿತ್ತು. ಪದಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಮಾಲತಿ ಹೊಳ್ಳ ಅವರು 36 ಅಂತರ್ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಒಟ್ಟು 397 ಚಿನ್ನದ ಪದಕಗಳು, 27 ಬೆಳ್ಳಿ ಮತ್ತು 5 ಕಂಚಿನ ಪದಕಗಳಿಗೆ ಕೊರಳೊಡ್ಡಿ ಅರ್ಜುನ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಇವರ ಸಾಧನೆ ದೇಶವೇ ಹೆಮ್ಮೆಪಡುವಂತೆ ಮಾಡಿತು. ಈ ಮೂಲಕ ವಿಕಲಾಂಗ ಚೇತನರಿಗೆ ಮಾದರಿಯಾದರು. 2016ರಲ್ಲಿ ನಡೆದ ರಿಯೋ ಪ್ಯಾರಾಲಿಂಪಿಕ್ಸ್‌ನಲ್ಲಿ 46ನೇ ವಯಸ್ಸಿನಲ್ಲಿ ಬೆಳ್ಳಿ ಪದಕ ಗೆದ್ದ ದೇಶದ ಮೊದಲ ಮಹಿಳಾ ಕ್ರೀಡಾಪಟು ಪದಶ್ರೀ ದೀಪಾಮಲ್ಲಿಕ್ ಅರ್ಜುನಾ ಪ್ರಶಸ್ತಿ ವಿಜೇತೆಯಾಗಿ ವಿಶೇಷಚೇತನರಿಗೆ ಮಾದರಿಯಾದರು. ಸಾಧನೆಯ ಶಿಖರವೇರಿದ ದೀಪಾ ಮಲ್ಲಿಕ್ ಅವರ ಸಾಧನೆ ನಮಗೆ ಮುಖ್ಯ ಹೊರತು ಅವರ ಜಾತಿಯಲ್ಲ ಎಂದಿದ್ದಾರೆ. ವಂದನಾ ಕಟಾರಿಯಾ "ನಾವು ದೇಶಕ್ಕಾಗಿ ಆಡುತ್ತಿದ್ದೇವೆ, ದಯವಿಟ್ಟು ಜಾತಿ ನಿಂದನೆಯನ್ನು ನಿಲ್ಲಿಸಿ" ಎಂದು ತಣ್ಣಗೆ ತಿರುಗೇಟು ನೀಡಿ ತಮ್ಮ ಗಟ್ಟಿತನವನ್ನು ಸಾಬೀತು ಮಾಡಿದ್ದಾರೆ. ಸೋಲಿಗೆ ದಲಿತ ಹೆಣ್ಣುಮಕ್ಕಳು ತಂಡದಲ್ಲಿ ಇರುವುದೇ ಕಾರಣ ಎಂದಿದ್ದ ಮೇಲ್ಜಾತಿಯ ಕಿಡಿಗೇಡಿಗಳು 'ಹಾಕಿ ಅಷ್ಟೇ ಅಲ್ಲ, ಇನ್ನಾವುದೇ ಕ್ರೀಡೆಗಳಿಗೆ ದಲಿತರನ್ನು ಸೇರಿಸಿಕೊಳ್ಳಬಾರದು' ಎಂದಿರುವುದು ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆ ಎಷ್ಟು ಆಳವಾಗಿ ಬೇರೂರಿದೆ ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೆ?, ತಲೆತಲಾಂತರಗಳಿಂದ ಶೋಷಣೆಗೆ ಒಳಗಾಗಿರುವ ಜನಾಂಗಗಳು ಇಂದಿಗೂ ಜಾತಿಯ ಕೂಪದಲ್ಲಿ ಬೆಂದು, ಬದುಕು ಸವೆಸುತ್ತಿವೆ ಎನ್ನೋದು ನಿರ್ವಿವಾದ, ಜಾತಿ ಧರ್ಮಗಳನ್ನು ಮೀರಿ ಎಲ್ಲರನ್ನೂ ಒಂದಾಗಿಸಬಲ್ಲ ಅದ್ಭುತ ಶಕ್ತಿ ಕ್ರೀಡೆ ಮತ್ತು ಸಾಂಸ್ಕೃತಿಕ ಲೋಕದೆ, ಆದರೆ ಇವುಗಳಲ್ಲಿಯೂ ಜಾತಿಯ ವಿಷ ಜಂತುಗಳು ಓಡಾಡಿದರೆ ದೇಶದ ಸಹೋದರಕ್ಕೆ ಕೊಡಲಿಪೆಟ್ಟು ಕೊಟ್ಟಂತೆ ಆಗುತ್ತದೆ. ಇಂತಹ ಘಟನೆಗಳು ಮರುಕಳಿಸದಂತೆ ದೇಶದ ಪ್ರಜ್ಞಾವಂತ ನಾಗರಿಕರು ಎಚ್ಚರಗೊಳ್ಳಬೇಕಾಗಿದೆ.

ಸೌಜನ್ಯ : ವಾರ್ತಾಭಾರತಿ

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

Don Carey, Graham Kemp, Jordi Casals and Penny Pinneo began the search. At Jos, they pored over the case histories of 23 victims and questioned survivors. It was soon clear that Lassa fever had been hospital-transmitted, at least among the first 17 patients. But, as they checked and rechecked the flow of patients, visitors and staff, they could not find a single case which could have infected all the primary patients in the outbreak.

Then Kemp came across Tama lama Sale's case history, which was registered under her fictitious name. At first, she didn't seem a promising lead, since her illness had not been diagnosed as Lassa fever. But gradually a clear and incriminating picture began to emerge. Three of the first recorded victims of the virus had been in A Ward while Tama lama was a patient; in fact, all of the primary cases had been patients, workers or visitors when Tamalama was under treatment. What evolved in theory was that Tamalama had brought Lassa fever into the hospital and passed it on to the first patients known to have the fever. They, in turn, passed it on to their families and friends.

To confirm this theory, Tama lama would have to be found and a sample of her blood taken to see if it contained antibodies. If it did, Kemp would trap and bleed as many animals as possible in her village in an attempt to find Lassa's source. The problem was: Who and where was Tamalama?

"KING OF THE MOTOR PARK"

ALL Graham Kemp could do was to run advertisements in the Jos newspaper describing the little he knew about Tamalama and appealing for help in locating her. One lead came in. Someone thought that she might be the wife of a lorry driver known as "King of the Rail I way," that her name was something like Soulé, and that she was supposed to live in Bauchi, some 950 km by road from Ibadan.

Kemp took off on the punishing 1,900-km round trip. No one in Bauchi seemed to know of a woman named Soulé, but by an incredible stroke of luck he was referred to a woman named Sale. She turned out to be the divorced wife of Mal lam Sale of Lagos. She had never been in the hospital at Jos. She did not know if Mallam Sale had remarried.

Lagos, the capital of Nigeria, is a sprawling city of half a million people. Before plunging into its teeming labyrinth, Kemp sent out enquiries to people in the area. Finally, he received another clue. He was told that the Hausa term for "King of the Railway" also meant "King of the Motor Park," a logical place for a lorry driver.

He spent his first day in Lagos roaming the dusty streets looking for large outdoor "motor parks," where lorry drivers congregated between trips to drink beer and palm wine. No one seemed to have heard of his quarry. But the next day his luck changed, and he was guided to the Tawaz Trucking Company, where Mallam Sale, "King of the Motor Park," was working as a mechanic. It didn't take long to find out that he was from Jos and his wife from the near-by town of Bassa. The house they occupied in Lagos was within walking distance.

After much persuasion, Tama lama Sale allowed Kemp to take a blood sample, Then he pressed her for information. Had she been ill a year ago? Yes, she had-and slowly the vital information came out. The results showed Tamalama's blood to be full of Lassa antibodies. She could be assumed to be the "index case" for the Jos outbreak. But Kemp's job was far from completed. Soon after the blood tests, he set out for Bassa, armed with dozens of vacuum containers for blood-letting and animal traps for rats, bats and birds that might carry the disease.

To be continued...

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಗಾಂಧಿ ಭವನ ಪ್ರಕಟಿಸುತ್ತಿರುವ ಬಾಪು ಪ್ರಪಂಚ ಸಂಚಿಕೆಯು, ಗಾಂಧಿ ತತ್ವ ಸಿದ್ಧಾಂತಗಳಿಗೆ ಪೂರಕವಾದ ಅತ್ಯಮೂಲ್ಯವಾದ ಲೇಖನಗಳು, ಇತಿಹಾಸದಲ್ಲಿ ಗತಿಸಿದ ಘಟನಾವಳಿಗಳು, ಸಾಧಕರ ಪರಿಚಯ, ಆರೋಗ್ಯ, ಪರಿಸರ, ಇನ್ನೂ ಮತ್ತಷ್ಟು ಮಾಹಿತಿಗಳು ಈ ಸಂಚಿಕೆಯಲ್ಲಿ ಕಾಣಬಹುದಾಗಿದೆ. ಈ ಸಂಚಿಕೆಯನ್ನು ಪ್ರತಿಯೊಂದು ಶಾಲೆ ಕಾಲೇಜುಗಳಲ್ಲಿ ಹಂಚುವುದರಿಂದ ಇಂದಿನ ಯುವಜನತೆಯ ವ್ಯಕ್ತಿವಿಕಸನಕ್ಕೆ ಮಾದರಿಯಾಗಬಹುದಾಗಿದೆ. ಈ ಸಂಚಿಕೆಯು ಇನ್ನೂ ಹೆಚ್ಚು ಹೆಚ್ಚು ಜನರನ್ನು ತಲುಪಲಿ ಎಂದು ಹಾರೈಸುತ್ತೇನೆ.

ಎಸ್. ಗೋವಿಂದರಾಜು, ಕೆ.ಪಿ.ಸಿ.ಸಿ

ಸೆಪ್ಟಂಬರ್ ತಿಂಗಳ ಬಾಪು ಪ್ರಪಂಚ ವಿಶೇಷ ಸಂಚಿಕೆಯು ವಿಶೇಷ ವಿಷಯಗಳನ್ನೊಳಗೊಂಡು ಅತ್ಯಾಕರ್ಷಕವಾಗಿ ಮೂಡಿಬಂದಿದೆ. ಮುಖಪುಟ ಕರ್ನಾಟಕ ಏಕೀಕರಣದ ರೂವಾರಿಗಳ ಚಿತ್ರಗಳನ್ನೊಳಗೊಂಡು ರಾಜ್ಯೋತ್ಸವದ ತಿಂಗಳಲ್ಲಿ ಪ್ರಕಟಗೊಂಡಿರುವುದು ಸಂತಸದ ವಿಷಯವಾಗಿದೆ.

ಡಾ. ವಿ.ಎಸ್. ಪಾರ್ವತಿ

ನಾಡುಕಟ್ಟಿದ ನಾಡಪ್ರಭು ಕೆಂಪೆಗೌಡರ ಕುರಿತಾದ ಲೇಖನವು ಉತ್ತಮವಾಗಿ ಮೂಡಿಬರುತ್ತಿದೆ, ವಂದನೆಗಳು.

ಎಸ್.ಎಸ್. ಪ್ರದೀಪ, ಪ್ರಾಂಶುಪಾಲರು.

ಗಾಂಧಿ ಭವನದಿಂದ ಪ್ರಕಟವಾಗುತ್ತಿರುವ ಬಾಪು ಪ್ರಪಂಚ ಸಂಚಿಕೆಯಲ್ಲಿ ಗಾಂಧೀಜಿಯವರ ಜೀವನ ಘಟನೆಗಳು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು, ಸಾಧಕರ ಪರಿಚಯ ಹಾಗೂ ಆರೋಗ್ಯ, ಪರಿಸರ, ಸಂಸ್ಕೃತಿ, ಅಂತರರಾಷ್ಟ್ರೀಯ ವಿಷಯ ವಿಶೇಷತೆಗಳು ಈ ವಿಶೇಷ ಸಂಚಿಕೆಯ ಅಂದವನ್ನು ಹೆಚ್ಚಿಸಿದೆ. ಸಂಚಿಕೆಯ ಪ್ರಕಟಣೆ ಕಾರ್ಯ ಹಿಗೆಯೇ ಮುಂದುವರಿಯಲಿ.

ಮಹೇಶ್

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆಯಲ್ಲಿ ಅಕ್ಷರದವ್ವ ಸಾವಿತ್ರಿಬಾ ಪುಲೆ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಲೇಖನಗಳು ಹಾಗೂ ಆರೋಗ್ಯ ಕುರಿತು ಉಪಯುಕ್ತ ಮಾಹಿತಿಯನ್ನು ನೀಡುತ್ತದೆ.

ಲೀಲಾ ವಾಸುದೇವ್

ಬಾಪು ಪ್ರಪಂಚ ಮಾಸಿಕ ಪ್ರತಿ ತಿಂಗಳು ವಿಭಿನ್ನ ಹಾಗೂ ವಿಶಿಷ್ಟ ಲೇಖನಗಳು ನವನಾವಿನ್ಯತೆಗಳೊಂದಿಗೆ ಮೂಡಿಬರುತ್ತಿವೆ. ಗಾಂಧೀ ಭವನಕ್ಕೆ ವಂದನೆಗಳು.

ಗಿರಿಜಾ ಹೆಗ್ಡೆ

ಡಾ. ಸಿ. ಆರ್. ಚಂದ್ರಶೇಖರ್ ಅವರ ಮಾದಕ ವಸ್ತುಗಳ ಮಾಯಾಜಾಲ ಲೇಖನವು ಅರ್ಥಪೂರ್ಣ ಹಾಗೂ ಯುವಜನತೆಗೆ ಮಾರ್ಗದರ್ಶಿಯಾಗಿದೆ.

ನವೀನ್ ಕುಮಾರ್ ಕೆ.ಎಸ್.
ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆಯಲ್ಲಿ ಆರೋಗ್ಯ ಕುರಿತಾದ ಉಪಯುಕ್ತ ಲೇಖನಗಳ ಜೊತೆ ನಾಡು ನುಡಿಗಾಗಿ ಹೋರಾಟ ನಡೆಸಿದ ಮಹಾನ್ ವ್ಯಕ್ತಿಗಳ ಪರಿಚಯವು ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತದೆ.

ಅಖಿಲಾ ವಿದ್ಯಾಸಂದ್ರ

ಬಾಪು ಸಂಚಿಕೆಯಲ್ಲಿನ ಇಂದಿರಾ ಕೃಷ್ಣಪ್ಪನವರ ಲೋಕ ಮಾನ್ಯರು ಮತ್ತು ಅಂಬೇಡ್ಕರ್ ಅವರ ಲೇಖನವು ಅವರುಗಳ ಕುರಿತಾದ ಮಹತ್ವದ ಮಾಹಿತಿಯನ್ನು ಹೊತ್ತು ತರುತ್ತಿದೆ.

ಎನ್. ಶ್ರೀನಿವಾಸ ಮೂರ್ತಿ, ವಿಜಯಪುರ.

ಗಾಂಧಿ ಭವನದ ಬಾಪು ಪ್ರಪಂಚ ಸಂಚಿಕೆಯಲ್ಲಿನ ಲೇಖನಗಳು ವೈಶಿಷ್ಟ ಪೂರ್ಣ, ಉಪಯುಕ್ತವೂ, ಸಂಗ್ರಹ ಯೋಗ್ಯವಾಗಿವೆ.

ಎಸ್.ಎಂ. ಶ್ಯಾಮಲಾ

ನೀವು ಕಳುಹಿಸುತ್ತಿರುವ "ಬಾಪು ಪ್ರಪಂಚ" ಸಂಚಿಕೆ ತುಂಬಾ ಚೆನ್ನಾಗಿ ಬರುತ್ತಿದೆ. ನಾನು ಪೂರ್ಣವಾಗಿ ಓದುತ್ತೇನೆ. ಒಳ್ಳೆಯ ಕೆಲಸ ಗಾಂಧಿ ಭವನದಿಂದ ಆಗುತ್ತಿದೆ ಸಂತೋಷ.

ಡಾ. ಗಣನಾಥಶೆಟ್ಟಿ ಎಕ್ಕಾರು

ಕನ್ನಡ ಕನ್ನಡಿಗ ಕರ್ನಾಟಕ, ಹೆಮ್ಮೆಯ ಕನ್ನಡಿಗ, ಹಾಗೂ ಪೂರ್ಣಚಂದ್ರ ತೇಜಸ್ವಿ ಅವರ ಕುರಿತಾದ ಲೇಖನವು ಸೊಗಸಾಗಿ ಮೂಡಿ ಬಂದಿದೆ. ತಮಗೆ ಧನ್ಯವಾದಗಳು.

ಸಹನ ಎಸ್., ಬೆಂಗಳೂರು


ಸಾದರ ಸ್ವೀಕಾರ

	ಶೀರ್ಷಿಕೆ	ಪ್ರಕಾಶಕರು	ಲೇಖಕರು
1	ಮರೆಯದ ಚೇತನ	ಪ್ರಣವ ಪ್ರಕಾಶನ ಧಾರವಾಡ	ಪ್ರೊ ಬಸಯ್ಯ ಶಿರೋಳ
2	108 ಸುಭಾಷಿತಾಃ	ಪ್ರಣವ ಪ್ರಕಾಶನ ಧಾರವಾಡ	ಪ್ರೊ ಬಸಯ್ಯ ಶಿರೋಳ
3	ಹಿಂದೂ ಧರ್ಮ ಸಂಶೋಧಿತ ವಿವೇಚನೆ	ಮರಾಠಿ ಮೂಲ:ವಿ.ಕೆ.ರಾಜವಾಡೆ	ಚಂದ್ರಕಾಂತ ಪೋಕಳೆ
4	ದ್ರಾವಿಡ ಭಾಷಾ ಕಿರಣ	ದ್ರಾವಿಡ ಬಾಷಾ ತೌಲನಿಕ ಅಧ್ಯಯನ	ಡಾ.ಬಿಎಸ್ ಪಣತಾರ್ತಿಹರನ್
5.	ಜಲಪ್ರಳಯ	ನೌಶದ್ ಜನ್ನತ್	ನಮ್ಮ ಕೊಡಗು ಚಾರಿಟಬಲ್ ಟ್ರಸ್ಟ್
6.	ಶ್ಲೋಕ ರತ್ನಗಳು	ಸುಭದ್ರಾ ಪ್ರಕಾಶನ	ಲೀಲಾ ವಾಸುದೇವ್
7.	ಮಾನವ ಹಕ್ಕುಗಳು	ಜನ ಪ್ರಕಾಶನ	ಹೆಚ್.ಎನ್. ನಾಗಮೋಹನದಾಸ್
8.	ಶಬ್ದದೊಳಗಣ ನಿಶ್ಯಬ್ದ	ಕರುನಾಡ ಸಿರಿ ಸಾಹಿತ್ಯ ವೇದಿಕೆ	ಸಂಪಾದನೆ
9.	**Charu Vasantha**	**Sapna Book House**	**P.P. Giridhar (Hampana's Poem translated in English**

Collection by Naveenkumar

ಗಾಂಧಿ ಭವನದ ಕಾರ್ಯಕ್ರಮಗಳು





ಗಾಂಧಿ ಭವನದಲ್ಲಿ ದಿ. 24.11.2021ರಂದು ಚನ್ನಮ್ಮ ಹಳ್ಳಿಕೇರಿ ಅವರ ಹುಟ್ಟುಹಬ್ಬದಂದು ಗಾಂಧಿ ಭವನದ ಅಧ್ಯಕ್ಷರು, ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಗೌರವಿಸಿದ ಸಂದರ್ಭ. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ ಹಾಗೂ ಗಾಂಧಿ ಭವನದ ಸಿಬ್ಬಂದಿಗಳಿದ್ದಾರೆ.






ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಟಗಾರರು ಮತ್ತು ಉತ್ತರಾಧಿಕಾರಿಗಳ ಸಂಘ, ಹಾವೇರಿ ಇವರು ದಿ. 25.11.2021ರಂದು ಫ್ರೀಡಂ ಪಾರ್ಕ್‌ನಲ್ಲಿ ನಡೆಸಿದ ಶಾಂತಿಯುತ ಉಪವಾಸ ಸತ್ಯಾಗ್ರಹದ ಸಂದರ್ಭದಲ್ಲಿ ಭಾಗಿಯಾದ ಸ್ವಾತಂತ್ರ್ಯ ಯೋಧ ಶ್ರೀ ಮಠದ್, ಕೋಡಿಹಳ್ಳಿ ಚಂದ್ರಶೇಖರ್, ಇಂದಿರಾ ಕೃಷ್ಣಪ್ಪ, ಡಾ. ಮಹದೇವಪ್ಪ ಮತ್ತೆಲ್ಲಾ ಸ್ವಾತಂತ್ರ್ಯ ಹೋರಾಟಗಾರರು ಇದ್ದಾರೆ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಜಾಥಾದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿದ್ದಾರೆ.



ಗಾಂಧಿ ಸ್ಮಾರಕ ನಿಧಿ ಮತ್ತು ರಾ.ಸೇ.ಯೋ. ಯುವ ಸಬಲೀಕರಣ ಇಲಾಖೆ ಕರ್ನಾಟಕ ಸರ್ಕಾರ ವತಿಯಿಂದ ದಿ.23.11.2021 ಆಯೋಜಿಸಲಾಗಿದ್ದ ಪ್ರೌಢಶಾಲೆ ಮುಖ್ಯೋಪಾಧ್ಯಯರು, ಕಾರ್ಯಕ್ರಮಾಧಿಕಾರಿಗಳು ಮತ್ತು ರಾ.ಸೇ.ಯೋ. ಸಂಯೋಜನಾಧಿಕಾರಿಗಳ ಒಂದು ದಿನದ ತರಬೇತಿ ಶಿಬಿರದ ಉದ್ಘಾಟನೆಯಲ್ಲಿ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ. ಪೂರ್ಣಿಮಾ ಜೋಗಿ, ರಾಸೇಯೋ ಅನುಷ್ಠಾನಾಧಿಕಾರಿ, ವಿ. ಜಯರಾಮಪ್ಪ, ಹಿರಿಯ ಸಹಾಯಕ ನಿರ್ದೇಶಕರು, ನಾಗರಾಜ್, ಹನುಮಂತ ರೆಡ್ಡಿ, ಮಂಜುನಾಥ್, ಪರಶುರಾಮ್ ಮತ್ತೆಲ್ಲರೂ ಇದ್ದಾರೆ.



ಗಾಂಧಿ ಭವನದಲ್ಲಿ ದಿ. 26.11.2021ರಂದು ನಡೆದ ಸಂವಿಧಾನ ದಿನಾಚರಣೆ ಸಂದರ್ಭದಲ್ಲಿ ಗೌ. ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಮಾತನಾಡುತ್ತಿದ್ದಾರೆ. ಪ್ರೊ. ಜಿ.ಬಿ. ಶಿವರಾಜು, ಎನ್.ಎಸ್. ಶಂಕರ್, ಜೇರಿಗೆ ಲೋಕೇಶ್, 'ಬಾಪು' ನಾಟಕದ ಕಲಾವಿದರು ಮತ್ತು ಗಾಂಧಿ ಭವನದ ಸಿಬ್ಬಂದಿ ಚಿತ್ರದಲ್ಲಿದ್ದಾರೆ.



ಗಾಂಧಿ ಭವನದಲ್ಲಿ ದಿ. 28.11.2021ರಂದು ನಾಡೋಜ ಕಮಲ ಹಂಪನಾ ಅವರ 87ನೇ ಜನ್ಮ ದಿನಾಚರಣೆಯಲ್ಲಿ ಹಂಪನಾ ದಂಪತಿಗಳನ್ನು ಗೌರವಿಸಲಾಯಿತು. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಸುಮಂಗಲಿ ಸೇವಾಶ್ರಮದ ಎಸ್.ಎಂ. ಶ್ಯಾಮಲ ಮತ್ತೆಲ್ಲರೂ ಇದ್ದಾರೆ.

ನೀವು ಜಗತ್ತಿನಲ್ಲಿ ನೋಡಲು ಬಯಸುವ
ಬದಲಾವಣೆ ಮೊದಲು ನೀವೇ ಆಗಬೇಕು.
ನೀವೇ ಆಗಿ ಆ ಬದಲಾವಣೆ

– ಮಹಾತ್ಮ ಗಾಂಧಿ



ಕ.ಗಾಂ.ಸ್ಮಾ.ನಿಧಿ ಮತ್ತು ಚೇತನಾ ಪಬ್ಲಿಕೇಶನ್ಸ್ ಅವರ ಜಂಟಿ ಕಾರ್ಯಕ್ರಮದಲ್ಲಿ ದಿ.29.11.2021ರಂದು ಶ್ರೀಮತಿ ಮಂಜುಳಾ ಶಿವಾನಂದ್ ಇವರ 'ಸತ್ಯಾಗ್ರಹಿ ದಂಪತಿಗಳು' ಕೃತಿ ಲೋಕಾರ್ಪಣೆ ಸಂದರ್ಭದಲ್ಲಿ ಮಂಜುಳಾ ಶಿವಾನಂದ್, ಸುವರ್ಣ, ಚೆನ್ನಮ್ಮ ಹಳ್ಳಿಕೇರಿ, ನಾಡೋಜ ವೂಡೇ ಪಿ. ಕೃಷ್ಣ, ಪ್ರೊ. ಮೀನಾ ದೇಶಪಾಂಡೆ, ಡಾ. ಅರವಿಂದ ಹಾರನಹಳ್ಳಿ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಇದ್ದಾರೆ.



ಡಾ. ಮಲ್ಲೇಪುರ ಜಿ. ವೆಂಕಟೇಶ್ ಅವರ 70ನೇ ವರ್ಷದ ಅಭಿನಂದನೆ ಮತ್ತು ಕರ್ನಾಟಕ ಬರಹಗಾರರ ಮತ್ತು ಪ್ರಕಾಶಕರ ಸಂಘದ ಪ್ರಕಾಶಕ ಮತ್ತು ಮುದ್ರಕರ ಸ್ನೇಹಸಮ್ಮಿಲನ ಮತ್ತು ಗೌರವಾರ್ಪಣೆಯ ದಿ.01.12.2021ರ ಸಮಾರಂಭದಲ್ಲಿ ಸಪ್ನಬುಕ್ ಹೌಸ್‌ನ ದೊಡ್ಡೇಗೌಡ, ಪ್ರೊ. ಮಲ್ಲೇಪುರಂ ವೆಂಕಟೇಶ್, ನಾಡೋಜ ವೂಡೇ ಪಿ. ಕೃಷ್ಣ ಅವರು ನಿತಿನ್ ಷಾ ಮತ್ತೆಲ್ಲರನ್ನು ಗೌರವಿಸಿದ ಸಾಂದರ್ಭಿಕ ಚಿತ್ರ.



ಗಾಂಧಿ ಅನುಯಾಯಿಯಾಗಿ ಪರಿವರ್ತಿತರಾದ ಲಕ್ಷ್ಮಣ್ ತುಕಾರಾಮ್ ಗೋಲೆ ಅವರು ದಿ. 08.12.2021 ರಲ್ಲಿ ಗಾಂಧಿ ಭವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಂವಾದ ಗೋಷ್ಠಿಯಲ್ಲಿ ಡಾ. ಹೆಚ್.ಎಸ್.ಸುರೇಶ್, ತುಕಾರಾಂ ಗೋಲೆ, ಜೇರಿಗೆ ಲೋಕೇಶ್, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗಿರಿಜಾ ಹೆಗ್ಡೆ, ಗುರುರಾಜ್‌ಪೊಶೆಟ್ಟಿ, ಡಾ. ವೆಂಕಟೇಶ್, ಹುಡೇದ್, ಇ.ಪಿ. ಮೆನನ್, ಶ್ಯಾಮಲ, ಸುಮ, ಸತ್ಯಮಂಗಲ ಮಹದೇವ ಗಾಂಧಿ ಭವನದ ಸಿಬ್ಬಂದಿ, ಖಾದಿ ಸಂಘದ ವ್ಯವಸ್ಥಾಪಕರು ಇದ್ದಾರೆ.



ನಯನ ಸಭಾಂಗಣದಲ್ಲಿ ದಿ. 12.11.2021ರಂದು ನಡೆದ ಕನ್ನಡ ನುಡಿ ಸಮ್ಮೇಳನದಲ್ಲಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ವೂಡೇ ಪಿ. ಕೃಷ್ಣ, ಸಮ್ಮೇಳನಾಧ್ಯಕ್ಷರಾದ ಪಾಲನೇತ್ರ, ಶೈಲಜಾ ಸೋಮಣ್ಣ, ಸತೀಶ್ ಜವರೇಗೌಡ, ನಿರ್ದೇಶಕರಾದ ಬಿ. ಸುರೇಶ ಮತ್ತೆಲ್ಲರೂ ಇದ್ದಾರೆ.

ಪುಸ್ತಕ ಪರಿಚಯ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ),

ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಸ್ಥಿತ್ಯಂತರಗಳು



ಆಕರ : ಸಂಶೋಧನಾ ಗ್ರಂಥ, ಕೃತಿಕಾರರು : ಡಾ. ಡಿ.ಸಿ. ಶಿವಕುಮಾರ್

ಪ್ರಕಾಶಕರು : ಎಸ್.ಎಲ್.ಎನ್. ಪಬ್ಲಿಕೇಶನ್, ದೂರವಾಣಿ : 9880740414

ಡಾ. ಡಿ.ಸಿ. ಶಿವಕುಮಾರ್ ಅವರು "ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಸ್ಥಿತ್ಯಂತರಗಳು" ಎಂಬ ಸಂಶೋಧನಾ ಕೃತಿಯಲ್ಲಿ ಆರು ಅಧ್ಯಾಯಗಳನ್ನು ಸಿದ್ಧಪಡಿಸಿ ಅಧ್ಯಯನದ ಉದ್ದೇಶ, ಮಹತ್ವ, ವೈಜ್ಞಾನಿಕ ವ್ಯವಸ್ಥೆ ಇವೆಲ್ಲವೂ ಮಾನವನಷ್ಟೇ ಪ್ರಾಚೀನವಾದ ಸಮಾಜದ ವಿವಿಧ ಸ್ವರೂಪದ ಅರ್ಥವನ್ನು ಚರ್ಚಿಸಿದ್ದಾರೆ. ಡಾ. ಕೂಡ್ಲೂರು ವೆಂಕಟಪ್ಪನವರು ಹೇಳುವಂತೆ 'ಒಂದು ನಿರ್ದಿಷ್ಟ ಪ್ರದೇಶದಲ್ಲಿ ತಮ್ಮದೇ ಆದ ಆಚಾರ–ವಿಚಾರ, ಸಂಸ್ಕಾರ ಮತ್ತು ಸಂಸ್ಕೃತಿಗಳು ಔಪಚಾರಿಕ ಮತ್ತು ಅನೌಪಚಾರಿಕ ಸ್ವಯಂ ನಿಯಂತ್ರಿತ ವ್ಯವಸ್ಥೆಯೊಂದಿಗೆ ವಾಸಿಸುವ ಮಾನವ ಸಮುದಾಯವೇ ಆಗಿದೆ ಎಂದಿದ್ದಾರೆ." ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್ ಅವರು ತಮ್ಮ ಬರವಣಿಗೆಯಲ್ಲಿ ಸಮಾಜ ಸ್ವರೂಪಕ್ಕೆ ಸಂಬಂಧಿಸಿದ ಒಲವು–ನಿಲುವುಗಳನ್ನು ಹೇಗೆ ವಿವರವಾಗಿ ನಿರೂಪಿಸಿರುತ್ತಾರೆಂಬುದನ್ನು ಡಾ. ಶಿವಕುಮಾರ್ ಅವರು 240 ಪುಟಗಳ ಸುಧೀರ್ಘ ಸಂಶೋಧನಾ ಗ್ರಂಥದಲ್ಲಿ ಕನ್ನಡ ಸಾರಸ್ವತ ಸಹೃದಯರಿಗೆ ಮನದಟ್ಟು ಮಾಡಿದ್ದಾರೆ. ಸ್ತ್ರೀ–ಪುರುಷ ಸಂಬಂಧಗಳನ್ನು, ವ್ಯಕ್ತಿಕೇಂದ್ರಿತ, ಸಮಾಜ ಕೇಂದ್ರೀತ, ಪ್ರಕಾರಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಜಾತಿ ಧರ್ಮ ಆಧಾರಿತ ಸಮುದಾಯ, ಹೆಣ್ಣು–ಗಂಡುಗಳ ತಾರತಮ್ಯ ಭಾವನೆ, ಭಾರತೀಯ ಪಾಶ್ಚಾತ್ಯ ಜನಜೀವನದ ಮುಖಾಮುಖಿ, ಭಾರತ ಮತ್ತು ಇಂಗ್ಲೆಂಡ್ ದೇಶಗಳ ಸಾಂಸ್ಕೃತಿಕ ಮನಸ್ಥಿತಿ ಮತ್ತು ಪ್ರತಿಬಿಂಬಗಳನ್ನು ಗುರುತಿಸುವ ಸಂಶೋಧಕರು ಇಲ್ಲಿನ ಕೆಲವು ಪಾತ್ರಗಳನ್ನು ಕ್ಲಿಪ್ ಜಾಯಿಂಟ್, ಆಕ್ರಮಣ, ರೂತ್ ಅಂಡ್ ರೆಸೂಲ್ ಕಥೆಗಳು ವಿವರಿಸುವುದನ್ನು ತಿಳಿಸಿಕೊಡುತ್ತಾರೆ. ಒಟ್ಟಾರೆಯಾಗಿ ಡಾ. ಶಿವಕುಮಾರ್ ಅವರು ನವ್ಯಕಾಲದ ಲೇಖಕರುಗಳನ್ನು ಅವರ ಕೃತಿಗಳ ಅವಲೋಕನವನ್ನು ತಮ್ಮ ಎಲ್ಲಾ ಸಂಶೋಧನೆಯ ಆಯಾಮಗಳಲ್ಲಿ ಅರ್ಥೈಸಿರುವುದನ್ನು ಕಾಣಬಹುದಾಗಿದೆ. ವೈಚಾರಿಕ ಚಿಂತಕರಾಗಿರುವ ಶ್ರೀಯುತರಿಂದ ಇನ್ನೂ ಹೆಚ್ಚಿನ ಕೃತಿಗಳು ಅವರಿಂದ ಮೂಡಿಬರಲೆಂದು ಆಶಿಸುತ್ತೇನೆ.

ಪತ್ರಿಕಾ ವರದಿಗಳು

ವಿಚಾರಸಂಕಿರಣ | ವಿಚಾರ ಸಂಕಿರಣದಲ್ಲಿ ನೇತಾಜಿ ಗಾಂಧಿ

ಗಾಂಧಿ ಸ್ವಾತಂತ್ರ್ಯ ಕೇಂದ್ರ ಬಿಂದು



ವಿಜಯಪುರ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಪಾತ್ರವಾಗಿರದೆ ಇಡೀ ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರ ಬಿಂದು ಅವರಾಗಿದ್ದರು ಎಂದು ಫ್ರೀಲ್ಯಾನ್ಸ್ ಪತ್ರಕರ್ತ ನೇತಾಜಿ ಗಾಂಧಿ ಹೇಳಿದರು.

ಇತ್ತೀಚೆಗೆ ನಗರದ ರೇವಣ ಸಿದ್ಧೇಶ್ವರ ಮಾಧ್ಯಮಿಕ ಶಾಲೆಯಲ್ಲಿ ಮಹಾತ್ಮ ಗಾಂಧೀಜಿಯ 150ನೇ ಜನ್ಮ ವರ್ಷಾಚರಣೆಪ್ರಯುಕ್ತ ನಗರದ ನೀಲಮ್ಮನ ಬಳಗದವರು ಆಯೋಜಿಸಿದ್ದ ಗಾಂಧಿ ಮತ್ತು ಅವರ ತತ್ವಸಿದ್ಧಾಂತಗಳು'' ಕುರಿತ ವಿಚಾರ ಸಂಕಿರಣದಲ್ಲಿ ಬಸವಣ್ಣ ಮತ್ತು ಬಾಪೂಜಿ ಭಾವಚಿತ್ರಕ್ಕೆ ...

... ಗಳಿಂದ ಬಿಡುಗಡೆಗೊಳಿಸಿ, ವಿಶ್ವಶಾಂತಿಯನ್ನು ಸಾರಿ, ಮಾನವೀಯ ಮೌಲ್ಯಗಳ ಕಡೆಗೆ ಜನಮನ ಸೆಳೆದ ಮಹಾಪುರುಷ ಮಹಾತ್ಮ ಗಾಂಧೀಜಿಯವರಾಗಿದ್ದಾರೆ ಎಂದರು.

‘ಗಾಂಧಿ ತತ್ತ್ವಗಳ ಪ್ರೇರಣೆಯಿಂದ ಅಂತರಂಗ ಕ್ರಾಂತಿಯಾಗಲಿ’



... ಜೀವನದಲ್ಲಿ ಎದುರಿಸುತ್ತಿರುವ ಸಮಸ್ಯೆಗೆ ... ಸ್ವಾವಲಂಬನೆ.

ಹಿರಿಯಡಕ, ನ. 21: ... ಪ್ರಥಮ ದರ್ಜೆ ಕಾಲೇಜು ಹಿ... ಎನ್ನೆಸ್ಸೆಸ್ ... ರಾಷ್ಟ್ರಶಾಸ್ತ್ರ ... ಹಾಗೂ ... ಆಶ್ರಯದಲ್ಲಿ ... ಗಾಂಧಿ ಭವನದ ಸಹಯೋ... ‘ಗಾಂಧೀಜಿಯ ತತ್ತ್ವ... ಆಧುನಿಕತೆ’ ಎಂಬ ವಿಷ... ಒಂದು ದಿನದ ವಿ... ಕಾಲೇಜಿನಲ್ಲಿ ನಡೆಯಿತು ... ಶಂಕರನಾರಾಯಣ ... ದರ್ಜೆ ಕಾಲೇಜು ... ಪ್ರಾಂಶುಪಾಲ...

ಪ್ರಕಾಶಕರ–ಮುದ್ರಕರ ಸ್ನೇಹ ಮಿಲನ

ಮಲ್ಲೇಪುರಂ ಜಿ. ವೆಂಕಟೇಶ 70 ಅಭಿನಂದನಾ

ಬೆಂಗಳೂರು : ಮಲ್ಲೇಪುರಂ ಜಿ. ವೆಂಕಟೇಶ 70 ಅಭಿನಂದನಾ ಸಮಿತಿ ಮತ್ತು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ 1ರ ಬುಧವಾರ ಕನ್ನಡ ಭವನದಲ್ಲಿ ಪ್ರಕಾಶಕರ–ಮುದ್ರಕರ ಸ್ನೇಹಮಿಲನ ಮತ್ತು ... ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಡಾ.

‘ಗಾಂಧಿ ಚಿಂತನೆಯ ಪ್ರಸ್ತುತತೆ’ ವಿಚಾರ ಸಂಕಿರಣ



ಮುಚ್ಚೆ, ನ. 21: ಗಾಂಧೀಜಿ ಅವರ ಚಿಂತನೆಗಳು ಇಂದು ಮತ್ತಷ್ಟು ... ವೈಯಕ್ತಿಕ ಶಿಸ್ತು, ಆರೋಗ್ಯದ ಕುರಿತ ಕಾಳಜಿಗಳ ಬಗ್ಗೆ ಅವರ ಚಿಂತನೆಗಳು ಎಂದೂ ಸಹಾಯಕವಾದುದು ಎಂದು ... ಸ್ವಾತ ಚಿಂತಕ, ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ...

ಕರ್ನಾಟಕದ ಗಾಂಧಿ ಸ್ಮಾರಕ ನಿಧಿ ಬೆಂಗಳೂರು ಇವುಗಳ ಸಹಯೋಗದಲ್ಲಿ ನಡೆದ ‘ಗಾಂಧಿ ಚಿಂತನೆಯ ಪ್ರಸ್ತುತತೆ’ ...

ಡಾ। ಪ್ರಸಾದ್ ರಾವ್ ಎಂ. ಗಾಂಧಿ ಚಿಂತನೆಯ ಬಗ್ಗೆ ಉಪನ್ಯಾಸ ನೀಡಿದರು. ಪ್ರಾಂಶುಪಾಲ ಡಾ। ಗಣನಾಥ ಎಕ್ಕಾರು ಅಧ್ಯಕ್ಷತೆ ವಹಿಸಿದರು. ...

ಪ್ರತಿ ನಿಧಿ

30–11–2021 ಮಂಗಳವಾರ



ಬೆಂಗಳೂರು: ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಚೇತನ ಪಬ್ಲಿಕೇಷನ್ ವತಿಯಿಂದ ಏರ್ಪಡಿಸಿದ್ದ ... ಡಾ.ವಿ.ಮಂಜುಳಾ ಶಿವಾನಂದ ಅವರ ಸತ್ಯಾಗ್ರಹ ದಂಪತಿ ಕನಕಪುರ ... ಗೌರಮ್ಮ ಅವರ ಕುರಿತಾದ ಕೃತಿಯನ್ನು ಭಾರತೀಯ ವಿದ್ಯಾಭವನದ ... ಮಾಡಿದರು. ಗಾಂಧೀ ಭವನದ ಅಧ್ಯಕ್ಷ ನಾಡೋಜ ಡಾ.ವೂಡೇ ... ಇಂದಿರಾ ಕೃಷ್ಣಪ್ಪ, ಉಪನ್ಯಾಸಕ ಡಾ. ಎಸ್.ರಾಮಲಿಂಗೇಶ್ವರ ... ಹಳ್ಳಿಕೇರಿ ಮುಂತಾದವರಿದ್ದಾಗೆ

ಅಮೃತ ವಿಚಾರ ಚಿಂತನ
ನವೆಂಬರ್–ಡಿಸೆಂಬರ್
2021

ಆದರ್ಶ

ಚೂರಿ ಹಿಡಿದ ಕೈ ಇಂದು ಚರಕ ನೂಲುತ್ತಿದೆ



ಕ್ರೌರ್ಯದಿಂದ ಅನೇಕ ಅಪರಾಧ ಮಾಡಿದ ಪಾತಕಿಯೊಬ್ಬ ಪರಿವರ್ತಿತನಾದ ಬಗೆ ಬಲು ರೋಚಕ. ಮುಂಬೈನಲ್ಲಿ ಹೆಣ್ಣು ಮಗಳಿಗೆ ಚುಡಾಯಿಸಿದ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ ಆರೋಪದಿಂದ ಜೈಲು ಸೇರಿದ ಅಪ್ರಾಪ್ತ ವಯಸ್ಸಿನ ಬಾಲಕ ಮುಂದೆ ಪಾತಕಿಗಳ ಜೊತೆ ಸೇರಿ ಅನೇಕ ದುಷ್ಕೃತ್ಯಗಳನ್ನು ಮಾಡಿ ಕಾರಾಗೃಹದಲ್ಲಿ ಒಮ್ಮೆ ಗಾಂಧೀ ಆತ್ಮಚರಿತ್ರೆ “ನನ್ನ ಸತ್ಯಾನ್ವೇಷಣೆ”ಯನ್ನು ಓದಿ ಪ್ರೇರಿತನಾಗಿ ಸಂಪೂರ್ಣ ಬದಲಾದ ವ್ಯಕ್ತಿ ಇಂದು ಗಾಂಧಿ ತತ್ವಪ್ರಚಾರಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರೆ ನಮಗೆ ಆಶ್ಚರ್ಯವಾಗಬಹುದು. ಆ ವ್ಯಕ್ತಿಯೇ ಸ್ವತಃ ತಮ್ಮ ಪರಿವರ್ತನೆಯ ಕಥೆಯನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಹಮ್ಮಿಕೊಂಡಿದ್ದ ಸಂವಾದದಲ್ಲಿ ಸಭಿಕರ ಮುಂದೆ ತೆರೆದಿಟ್ಟರು.





‘ನನ್ನ ಸತ್ಯಾನ್ವೇಷಣೆ’ಯಿಂದ ಪರಿವರ್ತಿತನಾದ ಪಾತಕಿ

ಸಂಜೆ ಪ್ರಭ

4

“ನನ್ನ ಸತ್ಯಾನ್ವೇಷಣೆ” ಯಿಂದ ಪರಿವರ್ತಿತನಾದ ಪಾತಕಿ



ಗಾಂಧಿ ಸೇವಾ ಪ್ರಶಸ್ತಿ ಪುರಸ್ಕೃತರು



ಪ್ರಕಾಶನ ವಿಭಾಗದಿಂದ ಆಜಾದಿ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮ





ಸ್ವಾತಂತ್ರ್ಯ ಹೋರಾಟಗಾರ್ತಿಯರ ಸಂಸ್ಮರಣೆ





ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

After Returning home, Kunta told what he had seen and heard, with all of Slave Row gathered at the fiddler's cabin listening to him intently. Bell added that she had just overheard Massa Waller and some dinner guests bitterly discussing the news that slavery had recently been abol ished in a northern state called "Massachusetts," and reports that other states near there would do the same. "What "bolished' mean?" one of the field hands asked. The old gardener answered him: "It mean all us niggers gon' be free, one dese days!"


Pestle and Mortar

IN THE Spring of 1788, Kunta was 38 years of age. In Africa, he thought, he would have been married and have had three or four sons by this time. But the bride's proper age should be 14 to 16 years, as in Juffure. He had not seen one black female of this age in the toubob land whom he had not considered preposterously giggly and silly. In fact, the only woman he knew well at all was Bell, who was probably beyond 40 brains. She was also disrespectful of men, and she talked too much. But he remembered how, when he had lain near death, Bell had nursed and fed him, cleaned him when he soiled himself and broken his fever. And she did cook endless good things, grinding her corn by hand, although her stone pestle and mortar obviously did not grind as well as those carved from hard wood by the people of Juffure. For days Kunta kept to himself, turning everything over in his mind. One evening when the horses were fed, he picked up an old, discarded hickory block, took it to his hut and began carving. He saw in his mind the pestle and mortar Omoro had made, which his mother had worn smooth with grinding. Whenever he had free time, he sat in his cabin, chopping carefullyround the hickory block with a hatchet, making the rough shape of a mortar. Then he began to carve with a knife. Once finished with the block, he found a seasoned hickory limb, perfectly straight and of the thickness of his arm, from which he soon made a pestle, which fitted snugly against the mortar's bottom. He smoothed the upper part of the handle, scraping it first with a file, next with a knife and finally with a piece of glass. After the task was done, he took the pestle and mortar to Bell's kitchen door and set them down on the steps outside. Catching the thumping sound, Bell turned and saw Kunta limping away. She examined the painstaking carving and was deeply moved. It was the first time in her life that a man had made something for her with his own hands. Indeed, she was not even sure it was meant for her. When Kunta returned in the afternoon to find out if the massa had need of him, Bell blurted out, "What dat?" and gestured towards his gift. In deep embarrassment, Kunta said, almost angrily, "For you to grind corn wid." For the next two weeks, beyond exchanging greetings, neither of them said anything. Then one day Bell gave Kunta a cake of cornbread whose meal he guessed she had made with the mortar. Grunting, he took the bread to his hut. After that they saw each othermore often, and though Bell usually did all the talking, Kunta was drawn closer to her. One morning in August 1789, Bell invited Kunta to eat dinner. with her in her cabin. He said nothing. But after work he scrubbed himself hard, using a rough cloth and a bar of brown lye soap. As he carefully put on his clothes he found himself softly singing a song from his village, "Mandumbe, your long neck is very beautiful..." Bell did not have a long neck, but it didn't seem to matter. Bell's cabin was the nearest one on Slave Row to the big house. The room that he entered when Bell opened the door had a feeling of cosiness, with its wall of mud chinked oak logs and a chimney of hand-made bricks. There were two windows and two rooms, one of them curtained off. On a table in the centre of the main room there was a jar filled with flowers from Bell's garden. Over the fire, Bell heated some chicken and dumplings which she knew Kunta loved. When Bell again asked Kunta to eat dinner, she cooked things which Kunta had told her also grew in Gambia-black-eyed peas, and a stew made with peanuts, and yams baked with butter.


To be continued...

ಭಾರತ ಸಂವಿಧಾನ ದಿನ ಹಾಗೂ ವೈಶಿಷ್ಟತೆಗಳು


– ಡಾ. ರಾಮಲಿಂಗೇಶ್ವರ (ಸಿಸಿರಾ)



ನಮ್ಮ ದೇಶದ ಸಂವಿಧಾನಕ್ಕೆ ಬಹು ದೊಡ್ಡ ಇತಿಹಾಸವಿದೆ. ಹಾಗೂ ಲಿಖಿತ ಸ್ವರೂಪವಿದೆ. ಜಗತ್ತಿನಲ್ಲಿಯೇ ಅತಿದೊಡ್ಡ ಲಿಖಿತ ಸಂವಿಧಾನ ನಮ್ಮದು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಂದ ರಚನೆಯಾಗಿರುವ ಸಂವಿಧಾನದಲ್ಲಿ, ಎಲ್ಲ ವರ್ಗಗಳ, ಎಲ್ಲ ಸ್ತರದ ಜನರ ಹಿತವಿದೆ. ಜೊತೆಗೆ ನಮ್ಮ ದೇಶದ ಪ್ರಜಾಪ್ರಭುತ್ವದ ಭದ್ರ ಬುನಾದಿಯೇ ನಮ್ಮ ಸಂವಿಧಾನವಾಗಿದೆ. ಭಾರತದ ಸಂವಿಧಾನವು ಡಿಸೆಂಬರ್ 9, 1947 ರಿಂದ ನವೆಂಬರ್ 26, 1949ರ ಅವಧಿಯಲ್ಲಿ ರಚನೆಗೊಂಡಿತು. ಡಾ. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿಸಲ್ಪಟ್ಟ ಭಾರತದ ಸಂವಿಧಾನವು ಜನವರಿ 26, 1950ರಂದು ಜಾರಿಗೆ ಬಂದಿತು. ಸಂವಿಧಾನ ರಚನಾ ದಿನವನ್ನು 'ರಾಷ್ಟ್ರೀಯ ಕಾನೂನು ದಿವಸ' ಎಂದು ಆಚರಿಸಲಾಗುತ್ತಿತ್ತು. ಕಳೆದ 2015ರಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 125ನೇ ಜಯಂತಿ ವರ್ಷದಂದು 'ರಾಷ್ಟ್ರೀಯ ಕಾನೂನು ದಿನ' ಎಂಬುದನ್ನು ಬದಲಿಸಿ 'ಸಂವಿಧಾನ ದಿವಸ' ಎಂದು ಕರೆಯಲಾಗುತ್ತಿದೆ. ಭಾರತದ ರಾಷ್ಟ್ರ ಲಾಂಛನವನ್ನೂ ಅದೇ ದಿನ ಅಳವಡಿಸಿಕೊಳ್ಳಲಾಯಿತು. ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನವಾಗಿರುವ ಇದರಲ್ಲಿ 448 ವಿಧಿಗಳು, 25 ಭಾಗಗಳು, 12 ಶೆಡ್ಯೂಲ್, 5 ಅನುಬಂಧಗಳು ಹಾಗೂ 98 ತಿದ್ದುಪಡಿಗಳಿವೆ. ಸಂವಿಧಾನ ರಚನಾ ಸಮಿತಿಯಲ್ಲಿ 284 ಮಂದಿ ಸದಸ್ಯರಿದ್ದರು. ಅವರಲ್ಲಿ 15 ಮಂದಿ ಮಹಿಳಾ ಸದಸ್ಯರು. ಭಾರತದ ಸಂವಿಧಾನವು ಕಳೆದ 70 ವರ್ಷಗಳಲ್ಲಿ ಕೇವಲ ನೂರಕ್ಕೂ ಕಡಿಮೆ ತಿದ್ದುಪಡಿಗಳನ್ನು ಕಂಡಿವೆ. 1946ರ ಡಿಸೆಂಬರ್ 9ರಂದು ಸಂವಿಧಾನ ಕರಡು ರಚನಾ ಸಮಿತಿ ಕಾರ್ಯಾರಂಭ ಮಾಡಿತ್ತು. ಮುಂದೆ 1947ರಲ್ಲಿ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಲಭಿಸಿದಾಗ ಸಂವಿಧಾನ ರಚನಾ ಸಮಿತಿಯು ಸಂಪೂರ್ಣ ಸ್ವಾಯತ್ತತೆ ಪಡೆದುಕೊಳ್ಳುವುದರೊಂದಿಗೆ ತನ್ನ ಕೆಲಸ ಮುಂದುವರೆಸಿತ್ತು. 1946ರಲ್ಲಿ ಬ್ರಿಟಿಷ್ ಭಾರತದ ಪ್ರಾಂತ್ಯಗಳ 296 ಸ್ಥಾನಗಳಿಗೆ ಚುನಾವಣೆ ನಡೆದು ಭಾರತದ ಜನತೆ ಪ್ರಾಂತೀಯ ಸಭೆಗಳ ಸದಸ್ಯರನ್ನು ಆಯ್ಕೆ ಮಾಡಿದ್ದರು. ಸಂವಿಧಾನ ರಚನಾಸಭೆಯಲ್ಲಿ ಭಾರತದ ವಿವಿಧ ಪ್ರದೇಶಗಳಿಗೆ ಹಾಗೂ ಸಮುದಾಯಗಳಿಗೆ ಸೇರಿದ ಸದಸ್ಯರು ಇದ್ದರು. ಜವಾಹರ್‌ಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಮೌಲಾನಾ ಅಬುಲ್ ಕಲಂ ಆಝಾದ್ ಮತ್ತು ಶ್ಯಾಮ್ ಪ್ರಸಾದ್ ಮುಖರ್ಜಿ ಅವರಲ್ಲಿ ಪ್ರಮುಖರು. ಪರಿಶಿಷ್ಟ ವರ್ಗಗಳಿಗೆ ಸೇರಿದ ಮೂವತ್ತಕ್ಕೂ ಹೆಚ್ಚು ಸದಸ್ಯರಿದ್ದರು. ಆಂಗ್ಲೋ–ಇಂಡಿಯನ್ ಸಮುದಾಯವನ್ನು ಫ್ರಾಂಕ್ ಆಂಟನಿ ಅವರೂ ಪಾರ್ಸಿ ಜನರನ್ನು ಎಚ್.ಪಿ. ಮೋದಿ ಅವರೂ ಪ್ರತಿನಿಧಿಸಿದ್ದರು. ಆಂಗ್ಲೋ–ಇಂಡಿಯನ್ನರ ಹೊರತಾದ ಎಲ್ಲ ಕ್ರೈಸ್ತರನ್ನು ಪ್ರತಿನಿಧಿಸಿದ ಖ್ಯಾತ ಕ್ರೈಸ್ತರಾದ ಹರೇಂದ್ರ ಕುಮಾರ್ ಮುಖರ್ಜಿಯವರು ಅಲ್ಪಸಂಖ್ಯಾತರ ಸಮಿತಿಯ ಅಧ್ಯಕ್ಷರಾಗಿ ಇದ್ದರು. ಸಂವಿಧಾನ ತಜ್ಞರಾದ ಅಲ್ಲಾಡಿ ಕೃಷ್ಣಸ್ವಾಮಿ, ಡಾ. ಬಿ.ಆರ್. ಅಂಬೇಡ್ಕರ್, ಬಿ.ಎನ್. ರಾಜು ಮತ್ತು ಕೆ.ಎಂ. ಮುನ್ಷಿ ಅವರೂ ಸಭೆಯ ಸದಸ್ಯರಾಗಿದ್ದರು. ಸರೋಜಿನಿ ನಾಯ್ಡು ಮತ್ತು ವಿಜಯಲಕ್ಷ್ಮಿ ಪಂಡಿತ್ ಅವರು ಪ್ರಮುಖ ಮಹಿಳಾ ಸದಸ್ಯರಾಗಿದ್ದರು. ಡಾ. ಸಚ್ಚಿದಾನಂದ ಸಿನ್ಹಾ ಅವರು ಸಂವಿಧಾನರಚನಾ ಸಭೆಯ ತಾತ್ಕಾಲಿಕ ಅಧ್ಯಕ್ಷರಾಗಿದ್ದರು. ನಂತರ, ಡಾ. ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷರಾಗಿಯೂ ಬಿ.ಆರ್. ಅಂಬೇಡ್ಕರ್ ಅವರು ಕರಡು ಸಮಿತಿ ಅಧ್ಯಕ್ಷರಾಗಿಯೂ ಆಯ್ಕೆಯಾದರು. ಸಂವಿಧಾನ ರಚನೆಯಾಗಲು ಎರಡು ವರ್ಷ 11 ತಿಂಗಳು 18 ದಿನಗಳ ಕಾಲ ಹಿಡಿಯಿತು. ಭಾರತದಲ್ಲಿ ಹಲವಾರು ಜಾತಿ, ಪಂಗಡ, ಪ್ರಾಂತ್ಯಗಳು ತಮ್ಮದೇ ವೈಶಿಷ್ಟ್ಯಗಳನ್ನು ಹೊಂದಿವೆ. ಅಧಿಕಾರ ಕೇಂದ್ರೀಕೃತ ವ್ಯವಸ್ಥೆಯು ಸಂವಿಧಾನ ಸ್ಥಾಪನೆಯ ನಂತರದ ವರ್ಷಗಳಲ್ಲಿ ಕ್ರಮೇಣ ಅಧಿಕಾರ ವಿಕೇಂದ್ರೀಕರಣವಾಗಿದೆ. ಭಾರತದ ಸಂವಿಧಾನದ ಪೀಠಿಕೆ 'ಭಾರತ ವಾಸಿಗಳಾದ ನಾವು, ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಲೋಕತಾಂತ್ರಿಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ, ಅದರ ಎಲ್ಲಾ ಪ್ರಜೆಗಳಿಗೆ ಈ ಕೆಳಗಿನ ಹಕ್ಕುಗಳಾದ: ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆ; ಗಳನ್ನು ದೊರಕಿಸಿ, ವೈಯುಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆ ಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ; ಪೀಠಿಕೆಯ ಮೂಲಪ್ರತಿಯಲ್ಲಿ "ಸಾರ್ವಭೌಮ ಪ್ರಜಾಪ್ರಭುತ್ವ ಗಣರಾಜ್ಯ" ಎಂದಿತ್ತು. "ಸಮಾಜವಾದಿ" ಮತ್ತು "ಜಾತ್ಯಾತೀತ" ತತ್ವಗಳನ್ನು 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಸೇರಿಸಲಾಯಿತು. ದೇಶದ ಸಂವಿಧಾನ ಲಾಂಛನ ಮತ್ತು ಬಾವುಟಕ್ಕೆ ದೇಶದ ಪ್ರಜೆಗಳು ಗೌರವ ಸಲ್ಲಿಸುವುದು ಪ್ರಮುಖ ಕರ್ತವ್ಯವಾಗಿದೆ.




ಡಾ. ಬಿ.ಆರ್. ಅಂಬೇಡ್ಕರ್ ಅವರು ಡಾ. ರಾಜೇಂದ್ರ ಪ್ರಸಾದ್ ಅವರಿಗೆ ದಿ.26.11.1949ರಲ್ಲಿ ಭಾರತ ಸಂವಿಧಾನವನ್ನು ಹಸ್ತಾಂತರಿಸುತ್ತಿರುವುದು



ಜವಹರಲಾಲ್ ನೆಹರು ಅವರು ಸಂವಿಧಾನಕ್ಕೆ ಸಹಿ ಮಾಡುತ್ತಿರುವುದು


ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026

ಕೃಷ್ಣಮಾಚಾರ್ ಸುಂದರರಾಜ ಐಯ್ಯಂಗಾರ್ : 14.12.1918 - 2008.2014



ಪ್ರಸಿದ್ಧ ಯೋಗ ಗುರುಗಳಾದ ಬೆಳ್ಳೂರು ಕೃಷ್ಣಮಾಚಾರ್ ಸುಂದರರಾಜ ಐಯ್ಯಂಗಾರ್ ಅವರು ಕೃಷ್ಣಮಾಚಾರ್ ಶೇಷಮ್ಮ ದಂಪತಿಗೆ ಮೈಸೂರಿನಲ್ಲಿ ಜನಿಸಿದರು. ಮೈಸೂರಿನ 'ತಿರುಮಲೈ ಕೃಷ್ಣಮಾಚಾರ್' ಅವರ ಮಾರ್ಗದರ್ಶನದಲ್ಲಿ 'ಯೋಗಾಭ್ಯಾಸ' ಮಾಡಿದರು. ಇವರು ಭಾರತೀಯ ಯೋಗವನ್ನು ಪ್ರಪಂಚದಾದ್ಯಂತ ಪಸರಿಸಲು ಶ್ರಮ ಪಟ್ಟವರು. ಹಲವಾರು ವಿದ್ವತ್‌ಪೂರ್ಣ ಪುಸ್ತಕಗಳನ್ನು ಪ್ರಕಟಿಸಿ ಯೋಗದ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಿದರು. ಇವರು 'ಪತಾಂಜಲಿ ಯೋಗ ಮಹಿಮೆ'ಯನ್ನು ವಿಶ್ವದ 'ಯೋಗಾಸಕ್ತರಿಗೆ ತಿಳಿಸುತ್ತಾ, ಯೋಗವನ್ನು ಅತ್ಯಂತ ವಿಧಿವತ್ತಾಗಿ ಮತ್ತು ವೈಜ್ಞಾನಿಕವಾಗಿ ಭಾರತ ಹಾಗೂ ವಿಶ್ವದ ಜನರಿಗೆ ಭೋಧಿಸುತ್ತ ಬಂದ 'ಶ್ರೀ.ಬಿ.ಕೆ.ಎಸ್.ಐಯ್ಯಂಗಾರ್' ಪುಣೆಯಲ್ಲಿ ಯೋಗಭ್ಯಾಸ ಕೇಂದ್ರವನ್ನು ಸ್ಥಾಪಿಸಿದ್ದರು. ಜಗತ್ತಿನ 40 ರಾಷ್ಟ್ರಗಳಲ್ಲಿ 180 ಯೋಗ ಕೇಂದ್ರಗಳನ್ನು ಸ್ಥಾಪಿಸಿದ್ದು, ಸುಮಾರು 2,000 ನುರಿತ ಯೋಗ-ಶಿಕ್ಷಕರು, ಯೋಗವಿದ್ಯೆಯ ಮಹತ್ವವನ್ನು ಪ್ರಚಾರ ಮಾಡುತ್ತಿದ್ದಾರೆ. 1975ರಲ್ಲಿ, 'ರಮಾಮಣಿ ಅಯ್ಯಂಗಾರ್ ಯೋಗ ಇನ್ಸಿಟಿಟ್ಯೂಟ್' ಅನ್ನು ಪುಣೆಯಲ್ಲಿ ಸ್ಥಾಪಿಸಿದರು. 1966ರಲ್ಲಿ ಅವರ ಪ್ರಥಮ ಪುಸ್ತಕ 'Light on Yoga' 17 ಭಾಷೆಗೆ ತರ್ಜುಮೆಗೊಂಡು ಸುಮಾರು 10 ಲಕ್ಷ ಪ್ರತಿಗಳು ಮಾರಾಟವಾದವು. 2004 ರಲ್ಲಿ ಪ್ರಕಟಗೊಂಡ 'Light on Life' ಅವರ ಸಮಗ್ರ ವ್ಯಕ್ತಿತ್ವ, ಸಾಧನೆಗಳ ದಾಖಲೆಗಳನ್ನೊಳಗೊಂಡ ವಿಶೇಷ ಕೃತಿ. 'ನ್ಯೂಯಾರ್ಕ್ ಟೈಮ್ಸ್' ಅವರ ಬಗ್ಗೆ ಬರೆಯುತ್ತಾ 'ಯೋಗವನ್ನು ಅತಿ ಗಹನವಾಗಿ ಅಭ್ಯಸಿಸಿ, ಅತ್ಯಂತ ಸಮರ್ಥವಾಗಿ ಬರೆದು ಪ್ರಚುರಪಡಿಸಿದ ವ್ಯಕ್ತಿಗಳಲ್ಲೊಬ್ಬ'ರೆಂದು ವರ್ಣಿಸಿತು. ಇವರನ್ನು 'King of Yoga,', ಎಂದು ಸಂಬೋದಿಸುತ್ತಿದ್ದರು. 'ಬಿ.ಕೆ.ಎಸ್. ಅಯ್ಯಂಗಾರರ' ಬಹುತೇಕ ಪುಸ್ತಕಗಳು ಇಂಗ್ಲೀಷ್ ಭಾಷೆಯಲ್ಲಿವೆ. ಮರಾಠಿ, ಮತ್ತು ಕನ್ನಡದಲ್ಲೂ ಅವರು 'ಕೈಪಿಡಿಗಳನ್ನು' ರಚಿಸಿದ್ದಾರೆ. ಇವರ ಯೋಗ ಸೇವೆಗೆ ಪದ್ಮಶ್ರೀ, ಪದ್ಮ ಭೂಷಣ, ಪದ್ಮ ವಿಭೂಷಣ ಹಾಗೂ ಇನ್ನಿತರ ಪ್ರತಿಷ್ಠಿತ ಗೌರವಗಳು ಸಂದಿವೆ.

ಕಾರ್ಲ್ ಎಡ್ವರ್ಡ್ ಸಗಾನ್ (09.11.1934 - 20.12.1996)



ಅಮೇರಿಕಾದ ಪ್ರಖ್ಯಾತ ಖಗೋಳ ವಿಜ್ಞಾನಿ, ಪರಿಸರ ತಜ್ಞ, ಖ್ಯಾತ ಲೇಖಕ ಕಾರ್ಲ್ ಸಗಾನ್ ಅವರು ಸ್ಯಾಮ್ ಸಗಾನ್ ರಷೆಲ್ ಮೋಲಿ ದಂಪತಿಯ ಪುತ್ರರಾಗಿದ್ದನು. ಜಗತ್ತಿಗೆ ಖಗೋಳ ಶಾಸ್ತ್ರ, ಖಗೋಳ-ಭೌತ ವಿಜ್ಞಾನ, ಸಹಜ ವಿಜ್ಞಾನಗಳ ಬಗ್ಗೆಯೂ ತಿಳಿಸಿಕೊಟ್ಟ ಕಾರ್ಲ್ ಸಗಾನ್. ಜೀವಿತಾವಧಿಯಲ್ಲಿ 600ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳನ್ನು, ಜನಪ್ರಿಯ ಉಪನ್ಯಾಸಗಳನ್ನು, ಪ್ರಬಂಧಗಳನ್ನು ರಚಿಸಿದ್ದಾರೆ. ಅಲ್ಲದೆ ಇವರ 'ಸಗಾನ್ ಕಾಂಟ್ಯಾಕ್ಟ್' ಹೆಸರಿನ ಕಾದಂಬರಿ ಚಲನಚಿತ್ರವಾಗಿದೆ. ಕಾರ್ಲ್ ಅವರ 'ಅದ್ಭುತ ಆಲೋಚನಾ ಕ್ರಮ' ಆತನಿಗೆ ಒಲಿದದ್ದು "ಸಮಾಧಾನಿಯೂ, ಮೃದು ಹೃದಯಿ ತಂದೆಯಿಂದ". ಅವರಿಗೆ ಕಾರ್ಲ್‌ನ ಅದ್ಭುತ ಜಾಣ್ಮೆಯ ಬಗ್ಗೆ ಅಪಾರವಾದ ಅಭಿಮಾನವಿತ್ತು. ಆತ ಮಗನನ್ನು ಕೂರಿಸಿಕೊಂಡು ತಾರೆಗಳ ಬಗ್ಗೆ, ಡೈನೋಸಾರುಗಳ ಬಗ್ಗೆ ಗಂಟೆಗಟ್ಟಲೆ ಮಾತಾಡುತ್ತಿದ್ದ ಮತ್ತು ಮಗನ ಜಾಣ್ಮೆಯನ್ನು ಕೆದಕುವ, ಆಲೋಚನೆಗೆ ಹಚ್ಚುವ ಹಲವಾರು ಕೆಲಸಗಳನ್ನು ಮಾಡುತ್ತಿದ್ದ. ಇದು ಕಾರ್ಲ್‌ನ ಬೌದ್ಧಿಕ ಬೆಳವಣಿಗೆ ಸಹಾಯಕಾರಿಯೂ ಆಗಿತ್ತು. ಒಬ್ಬ ಬರಹಗಾರನಾಗಿ, ವಿಜ್ಞಾನಿಯಾಗಿ, ಕಾರ್ಲ್ ರೂಪುಗೊಂಡಾಗ, ಆತನಿಗೆ ಇವೆಲ್ಲ ಅಂಶಗಳು ನೆನಪಾಗುತ್ತಿದ್ದವು. ಇದನ್ನೇ ಆತ ತನ್ನ 'ಶ್ಯಾಡೋಸ್ ಆಫ್ ಫಾರ್ಗಾಟನ್ ಅನ್ಸೆಸ್ಟರ್ಸ್ ' ಪುಸ್ತಕದಲ್ಲಿ ಉಲ್ಲೇಖಿಸಿಕೊಂಡಿದ್ದಾನೆ. ಪಾಲಕರು ತನ್ನ ಆಲೋಚನಾ ಸರಣಿಯ ಮೇಲೆ ಬೀರಿದ ಪ್ರಭಾವದ ಕುರಿತು "ನನ್ನ ತಂದೆ ತಾಯಿಯರು ವಿಜ್ಞಾನಿಗಳೇನೂ ಆಗಿರಲಿಲ್ಲ. ವಿಜ್ಞಾನದ ಕುರಿತು ಅವರಿಗೇನೂ ಗೊತ್ತಿರಲಿಲ್ಲ. ಆದರೆ, ಜಗತ್ತಿನ ವಿಸ್ಮಯಗಳ ಕಡೆಗೆ, ಸ್ಕೆಪ್ಟಿಸಿಸಂನೆಡೆಗೆ ಅವರು ಏಕಕಾಲಕ್ಕೆ ನನ್ನ ಗಮನ ಸೆಳೆದಿದ್ದಾರೆ ಎಂದಿದ್ದರು.

ರಾಜ್ ಕಪೂರ್, 14.10.1924 - 2.06.1988



ರಾಜ್‌ಕಪೂರ್ ಪೃಥ್ವೀರಾಜ್ ಕಪೂರ್ ಮತ್ತು ದೇವಿ ಕಪೂರ್ ದಂಪತಿಗಳಿಗೆ ಜನಿಸಿದರು. ಭಾರತೀಯ ಹಿಂದಿ ಚಿತ್ರರಂಗದಲ್ಲಿ ನಟ, ನಿರ್ಮಾಪಕ ಹಾಗೂ ನಿರ್ದೇಶಕರಾಗಿದ್ದ ಇವರು ಒಂಭತ್ತು ಭಾರಿ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದವರು. ಇವರ ಚಿತ್ರ 'ಆವಾರ' ಮತ್ತು 'ಬೂಟ್ ಪಾಲಿಶ್' ಕ್ಯಾನೆ ಫಿಲ್ಮ್ ಫೆಸ್ಟಿವಲ್‌ನ ಪಾಮ್ ಡಿ'ಆರ್‌ಗೆ ನಾಮನಿರ್ದೇಶನಗೊಂಡಿದ್ದವು. 1935ರಲ್ಲಿ ಇಂಕ್ವಿಲಾಬ್ ಚಿತ್ರದ ಮೂಲಕ ಹನ್ನೊಂದನೇ ವಯಸ್ಸಿನಲ್ಲಿ ಪ್ರಪ್ರಥಮ ಬಾರಿಗೆ ಚಲನಚಿತ್ರಗಳಲ್ಲಿ ಕಾಣಿಸಿಕೊಂಡರು. ನಂತರದ 12 ವರ್ಷಗಳಲ್ಲಿ ಹಲವಾರು ಚಿತ್ರಗಳಲ್ಲಿ ನಟಿಸಿದ ರಾಜ್ ಕಪೂರ್ ಮಧುಬಾಲರ ಜೊತೆ ನಾಯಕನ ಪಾತ್ರದಲ್ಲಿ 'ನೀಲ್‌ಕಮಲ್' ನಟಿಸುವ ಅವಕಾಶ ದೊರೆಯಿತು. ಆರ್.ಕೆ ಫಿಲ್ಮ್ ಸಂಸ್ಥೆಯನ್ನು ಸ್ಥಾಪಿಸಿದರು. ಹಾಗೂ ಅವರ ಕಾಲದ ಅತ್ಯಂತ ಕಿರಿಯ ಚಿತ್ರನಿರ್ದೇಶಕರೆಂಬ ಕೀರ್ತಿಗೆ ಪಾತ್ರರಾದರು. ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಗಾಗಿ ಭಾರತ ಸರಕಾರ ಪದ್ಮಭೂಷಣ ಹಾಗೂ ದಾದಾಸಾಹೇಬ್ ಪ್ರಶಸ್ತಿ ನೀಡಿ ಗೌರವಿಸಿತು. ಇವರು ಮಹಿಳಾ ಪ್ರಧಾನ ಚಿತ್ರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಅಂತಹ ಚಿತ್ರಗಳ ನಿರ್ಮಾಣ ಮತ್ತು ನಿರ್ದೇಶನಗಳಿಗೆ ಗಮನವಿತ್ತರು. ಇವುಗಳಲ್ಲಿ ಜೀನತ್ ಅಮಾನ್ ಜೊತೆಗಿನ 'ಸತ್ಯಂ ಶಿವಂ ಸುಂದರಂ', ಪದ್ಮಿನಿ ಕೊಲ್ಹಾಪುರಿ ಜೊತೆಗಿನ 'ಪ್ರೇಮ್ ರೋಗ್' ಮತ್ತು ಮಂದಾಕಿನಿಯನ್ನು ಚಿತ್ರರಂಗಕ್ಕೆ ಪರಿಚಯಿಸಿದ 'ರಾಮ್ ತೇರಿ ಗಂಗಾ ಮೇಲಿ' ಮುಂತಾದುವು ಯಶಸ್ವಿ ಚಿತ್ರಗಳಾಗಿವೆ.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049